ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಜನವರಿ 2020 ಬೆಲೆ ರೂ. 5/-



ಎಲ್ಲಲಿಯೂ ನೀನೇ
ಹರಿ ಪುಂಡರೀಕಾಕ್ಷ
- ಅನ್ನಮಯ್ಯ

ಜನವರಿ 06
ವೈಕುಂಠ ಏಕಾದಶಿ





## 23-11-2019 ರಿಂದ
## 01-12-2019 ರ ವರೆಗೆ ನಡೆದ
## ತಿರುಚಾನೂರು
## ಶ್ರೀ ಪದ್ಮಾವತಿ ಅಮ್ಮನವರ ವಾರ್ಷಿಕ ಬ್ರಹ್ಮೋತ್ಸವದ
## ದೃಶ್ಯಮಾಲಿಕೆ













# ಭಗವದ್ಗೀತೆ



ಯುಧಾಮನ್ಯುಶ್ಚ ವಿಕ್ರಾಂತಃ ಉತ್ತಮೌಜಾಶ್ಚ ವೀರ್ಯವಾನ್
ಸೌಭದ್ರೋ ದ್ರೌಪದೇಯಾಶ್ಚ ಸರ್ವ ಏವ ಮಹಾರಥಾಃ

(ಶ್ರೀ ಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 6)

ಬಲಶಾಲಿಯಾದ ಯುಧಾಮನ್ಯು, ವೀರನಾದ ಉತ್ತಮೌಜ, ಸುಭದ್ರೆಯ ಮಗ ಅಭಿಮನ್ಯು ದ್ರೌಪದಿಯ ಮಕ್ಕಳು ಇದ್ದಾರೆ. ಎಲ್ಲರೂ ಒಬ್ಬೊಬ್ಬರೂ ಹತ್ತು ಸಹಸ್ರ ಜನರೊಡನೆ ಹೋರಾಡಬಲ್ಲ ಮಹಾರಥರು.



ರಾಮನಾಮ ಪಾಯಸಕ್ಕೆ
ಕೃಷ್ಣನಾಮ ಸಕ್ಕರೆ
ವಿಠಲನಾಮ ತುಪ್ಪವ ಬೆರಸಿ
ಬಾಯಿ ಚಪ್ಪರಿಸಿರೋ
ಒಮ್ಮಾನ ಗೋಧಿಯ ತಂದು
ವೈರಾಗ್ಯ ಕಲ್ಲಲಿಬೀಸಿ
ಸುಮ್ಮಾನ ಸಜ್ಜಿಗೆಯ ತೆಗೆದು
ಸಣ್ಣ ಶ್ಯಾಮಿಗೆ ಹೊಸೆದು
ಹೃದಯವೆಂಬೊ ಮಡಿಕೆಯಲ್ಲಿ
ಭಾವವೆಂಬ ಎಸರನಿಟ್ಟು
ಬುದ್ಧಿಯಿಂದ ಪಾಕಮಾಡಿ
ಹರಿವಾಣಕೆ ಬಡಿಸಿಕೊಂಡು
ಆನಂದವೆಂಬೋ ತೇಗು
ಬಂದಾಗ ನಮ್ಮ ಆನಂದ ಮೂರುತಿ
ಪುರಂದರವಿಠಲನ ನೆನೆಯಿರೋ

- ಶ್ರೀ ಪುರಂದರದಾಸರು

(ನಾಲ್ಕನೆಯ ದಶಕವು)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ತ್ವಯಿ ಬಹುಮತಿಹೀನಃ ಶ್ರೀನಿವಾಸಾನುಕಂಪೇ ಜಗತಿ ಗತಿಮಿಹಾನ್ಯಾಂ ದೇವಿ ಸಂಮನ್ಯತೇ ಯಃ।
ಸ ಖಲು ವಿಬುಧಸಿಂಧೌ ಸನ್ನಿಕರ್ಷೇ ವಹಂತ್ಯಾಂ ಶಮಯತಿ ಮೃಗತೃಷ್ಣಾ ವೀಚಿಕಾಭಿಃ ಪಿಪಾಸಾಮ್॥ ೪೦

ಹಿಂದಿನ ಪದ್ಯಗಳಲ್ಲಿ ಬುಭುಕ್ಷು ಮುಮುಕ್ಷುಗಳೆಂಬ ಸರ್ವಚೇತನರ ವಿಷಯದಲ್ಲಿಯೂ ದಯಾದೇವಿಯು ಮಾಡುವ ಪರಮೋಪಕಾರವು ವರ್ಣಿಸಲ್ಪಟ್ಟಿತು. ಈ ಪದ್ಯದಲ್ಲಿ ಇಂತಹ ಪರಹಿತ ಪ್ರಾವಣ್ಯವೇ ಸ್ವರೂಪವಾಗಿ ಉಳ್ಳ ದಯಾದೇವಿಯ ವಿಷಯದಲ್ಲಿ ಯಾವನೊಬ್ಬನು ಗೌರವವನ್ನು ತೋರಿಸುವುದಿಲ್ಲವೋ ಅವನನ್ನು ಪರಿಹಾಸ್ಯ ಮಾಡಿ ಈ ದಶಕವನ್ನು ಮುಗಿಸುತ್ತ ಪದ್ಧತಿಯಂತೆ ಮುಂದಿನ ದಶಕದ ಅರ್ಥವನ್ನು ಸೂಚಿಸುವರು.

ಯಾವನಾದರೊಬ್ಬನು ಯಾವುದೋ ಒಂದು ಫಲವನ್ನು ಬಯಸಿ ಯಾವ ಉಪಾಯವನ್ನಾಗಲಿ ಯಾರಲ್ಲಿ ಮಾಡಿದರೂ ಅವನು ಆ ಫಲವನ್ನು ಭಗವಂತನ ದಯೆಯಿಂದಲೇ ಪಡೆಯಬೇಕು. "ಯಸ್ಯ ಪ್ರಸಾದೇ ಸತತಂ ಪ್ರಸೀದೇಯುರಿಮಾಃ ಪ್ರಜಾಃ" ಎಂದು ಹಿರಿಯರು ಹೇಳಿರುವರಲ್ಲವೆ! " ಲಭತೇ ಹಿ ತತಃ ಕಾಮಾನ್ ಮಯ್ಯೈವ ವಿಹಿತಾನ್ ಹಿ ತಾನ್" ಎಂದು ಭಗವಂತನೂ ಗೀತೆಯಲ್ಲಿ ಹೇಳಿರುವನು. ಹೀಗೆ ಸಾಮಾನ್ಯವಾದ ಐಹಿಕಾಮುಷ್ಮಿಕ' ಫಲಗಳನ್ನು ಆಯಾಯ ದೇವತೆಗಳು ಕೊಡುವುದೂ ಕೂಡ ಭಗವಂತನ ದಯೆಯಿಂದಲೇ ಎಂದು ಸ್ಪಷ್ಟವಾಗಿರುವಾಗ, ಇತರ ದೇವತೆಗಳಿಗೆ ಸ್ವಲ್ಪವೂ ಸಂಬಂಧವೇ ಇಲ್ಲದ ಮೋಕ್ಷವೆಂಬ ಫಲದಲ್ಲಿ ಭಗವಂತನ ದಯೆಯು ಎಷ್ಟೊಂದು ವೈಭವಯುತವಾದುದೆಂದು ಹೇಳಲು ಸಾಧ್ಯವಿಲ್ಲದ ವಿಷಯ. ಭಕ್ತಿ ಮಾರ್ಗವನ್ನೋ ಪ್ರಪತ್ತಿಯನ್ನೋ ಅವಲಂಬಿಸಿರುವವರೆಲ್ಲರೂ "ಪ್ರಪನ್ನಾದನ್ಯೇಷಾಂನ ದಿಶತಿ ಮುಕುಂದೋ ನಿಜಪದಂ" ಎಂಬಂತೆ ಭಗವಂತನಲ್ಲಿ ಪ್ರಪತ್ತಿಯನ್ನು ಮಾಡಿ ಅವನ ದಯೆಯನ್ನು ಆಶ್ರಯಿಸಲೇ ಬೇಕು. ತತ್ವಸ್ಥಿತಿಯು ಹೀಗಿರಲು, ಯಾವನೊಬ್ಬನು ಶ್ರೀನಿವಾಸನೆಂಬ ಪರಮಪುರುಷನ ದಯೆಯಲ್ಲಿ ಗೌರವವಿಲ್ಲದವನಾಗಿ ( ಈ ದಯೆಯೇ ನಮ್ಮನ್ನು ಸರ್ವವಿಧವಾದ ಆಪತ್ತಿನಿಂದಲೂ ಕಾಪಾಡುವುದೆಂಬ ಜ್ಞಾನವಿಲ್ಲದವನಾಗಿ) ಬೇರೆ ದೇವತೆಯನ್ನು ಆಶ್ರಯಿಸಿ ಆ ದೇವತೆಯ ದಯೆಯನ್ನು ಉಪಾಯವನ್ನಾಗಿ ಆಶ್ರಯಿಸುವನೋ, ಅವನು ತನಗೆ ಅತ್ಯಂತ ಸಮೀಪದಲ್ಲಿ ಹರಿಯುತ್ತಿರುವುದಾಗಿಯೂ, ಹೊರಗಿನ ತಾಪವನ್ನೂ, ಒಳಗಿನ ತಾಪವನ್ನೂ ಹೋಗಲಾಡಿಸಲು ಸಮರ್ಥವಾಗಿರುವುದಾಗಿಯೂ ಪರಮ ಭೋಗ್ಯವಾಗಿಯೂ ಇರುವ ಗಂಗಾನದಿಯನ್ನು ಅನಾದರಿಸಿ, ಅತ್ಯಂತ ಬಿಸಿಲಿನಲ್ಲಿ ನೀರಿನ ಅಲೆಗಳಂತೆಯೇ ಕಾಣುವ ಬಿಸಿಲ್ಗುದುರೆಯ ಅಲೆಗಳಿಂದ ತನ್ನ ದಾಹವನ್ನು ಹೋಗಲಾಡಿಸಿಕೊಳ್ಳಬೇಕೆಂದು ಬಯಸುವ ಮೂರ್ಖನಿಗೆ ಸಮಾನನಾಗುವನು ಎಂದು ಭಗವದ್ದಯೆಯನ್ನು ಆಶ್ರಯಿಸದೆ ಇರುವವರನ್ನು ಆಚಾರ್ಯರು ಪರಿಹಾಸ್ಯ ಮಾಡುತ್ತಾರೆ.

ಭಗವಂತನ ದಯೆಗೂ, ಗಂಗನದಿಗೂ ಅನೇಕ ವಿಧಗಳಲ್ಲಿ ಸಾದೃಶ್ಯವುಂಟು. ಅವೆರಡೂ ಭಗವಂತನ ಪಾದಗಳಿಂದ ಹುಟ್ಟಿದವು; ಸರ್ವಪಾಪಗಳನ್ನೂ ಪರಿಹರಿಸತಕ್ಕವು;ಅನುಭವಿಸುವಾಗಲೇ ಪರಮ ಭೋಗ್ಯವಾಗಿರತಕ್ಕವು; ಆದ್ದರಿಂದಲೇ ಈ ಆಚಾರ್ಯರು ಅನೇಕ ಕಡೆಗಳಲ್ಲಿ ಭಗವಂತನ ದಯೆಯನ್ನು ಗಂಗೆಯಂತೆ ವರ್ಣಿಸುವುದು ರೂಢಿಯಾಗಿದೆ.

"ಸನ್ನಿ ಕರ್ಷೇ ವಹಂತ್ಯಾಂ" ಎನ್ನುವುದರಿಂದ ಭಗವಂತನ ದಯೆಯು ಎಲ್ಲ ದೇಶಗಳಲ್ಲಿಯೂ ಎಲ್ಲ ಕಾಲಗಳಲ್ಲಿಯೂ ಆಶ್ರಿತರನ್ನು ಕಾಪಾಡುವುದರಲ್ಲಿ ಅತ್ಯಂತ ಜಾಗರೂಕತೆಯುಳ್ಳದ್ದೆಂಬ ಶಾಸ್ತ್ರಾರ್ಥವು ವ್ಯಕ್ತವಾಗುವುದು. ಬಾಯಾರಿದವನು ಗಂಗೆಯನ್ನು ಉಪೇಕ್ಷಿಸಿ, ಬಿಸಿಲ್ಗುದುರೆಯನ್ನು ಹುಡುಕಿಕೊಂಡು ಹೋದರೆ ಅವನ ದಾಹವು ಅಡಗುವುದಿಲ್ಲವೆಂಬುದು ಮಾತ್ರವಲ್ಲದೆ, ಬಿಸಿಲಿನಲ್ಲಿ ಅಷ್ಟೊಂದು ದೂರ ಓಡಿ ಹೋದುದರಿಂದ ಮೊದಲಿನ ತಾಪವು ನೂರ್ಮಡಿಯಾಗಿ ಅತ್ಯಂತ ದುಃಖಪಡುವನು. ಹಾಗೆಯೇ ದೇವತಾಂತರವನ್ನು ಭಜಿಸುವವನಿಗೆ ತಾಪವು ಹೆಚ್ಚುವುದೇ ಹೊರತು ಕಡಿಮೆಯಾಗುವುದಿಲ್ಲವೆಂಬ ವೈಶಿಷ್ಟ್ಯವೂ ಇಲ್ಲಿ ಸ್ಪಷ್ಟವಾದುದು.

(ನಾಲ್ಕನೆಯ ದಶಕವು ಮುಗಿದುದು)

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ವಿಕಾರಿನಾಮ ಸಂವತ್ಸರ
ಪುಷ್ಯ - ಮಾಘ ಮಾಸ ಸಂಚಿಕೆ



ಸಂಪುಟ - 50 ಜನವರಿ 2020 ಸಂಚಿಕೆ - 8

## ವಿಷಯಸೂಚಿಕೆ


| | |
|---|---|
| ಸಂಪಾದಕೀಯ | 6 |
| ಹಸಿರುತೋರಣ | |
| ಸುಗ್ಗಿಯ ಸಂಭ್ರಮ<br>- ಶ್ರೀಮತಿ. ಸುಮಚಂದ್ರಶೇಖರ್ | 7 |
| ಏಕಾದಶಿ ವ್ರತ ಮತ್ತು ಮಹಿಮೆ<br>- ಎಸ್. ವೆಂಕಟರಾಘವನ್ | 12 |
| ತಿರುಮಲೆಯ ಪ್ರತಿರೂಪ ದೇವುನಿ ಕಡಪ<br>- ಶ್ರೀಮತಿ. ಗೀತಾ | 16 |
| ಶ್ರೀ ಆಂಡಾಳ್ ವೈಭವ<br>- ಶ್ರೀಮತಿ. ಎ. ಗೀತಾ ವೀರರಾಘವನ್ | 18 |
| ಶ್ರೀ ವೈಷ್ಣವ ಮತ ಸರ್ವಸಮ್ಮತ ವಿಶಿಷ್ಟಾದ್ವೈತದ ವೈಶಿಷ್ಟ್ಯ<br>- ಶ್ರೀಮತಿ. ಸಿ. ಎಸ್. ಊರ್ಮಿಳಾ | 20 |
| ಪುರಂದರ ಗುರುಂ ವಂದೇ ದಾಸ ಶ್ರೇಷ್ಠಂ ದಯಾನಿಧಿಂ<br>- ಶ್ರೀಮತಿ. ಕೆ.ವಿ. ಪದ್ಮಾವತಿ | 24 |
| ಅದಮಾರು ಪರ್ಯಾಯ<br>- ಡಾ|| ಗುರುರಾಜ ಪೋಶೆಟ್ಟಿಹಳ್ಳಿ | 31 |
| ಶ್ರೀ ಗೋಪಾಲದಾಸರು ಮತ್ತು ಬಿಂಬೋಪಾಸನೆ<br>-ಡಾ|| ಸಿ.ಜೆ. ರಾಮಚಂದ್ರ ದಾಸ್ | 39 |
| ದಿವ್ಯಕ್ಷೇತ್ರ ತಿರುಮಲೆ<br>- ಶ್ರೀಮತಿ. ಬಿ. ಪದ್ಮಜ | 42 |
| ನಾಯಕತ್ವದ ಲಕ್ಷಣಗಳು<br>- ಡಿ.ಎಸ್. ಭೂಮಿಕ | 44 |
| ವ್ಯರ್ಥ ಪದಾರ್ಥಗಳು -ಆಹಾರ - ಔಷಾಧಿ ಗುಣಗಳು ನಿಧಿಗಳು<br>-ಶ್ರೀಮತಿ. | 45 |
| ಅಜಾಮಿಳೋಪಾಖ್ಯಾನ<br>-ಡಿ.ಎಸ್. ಬದ್ರಿನಾಥ್ | 46 |
| ಸಂಸ್ಕೃತ ಕಲಿಯೋಣ | 48 |
| ತಿರುಪತಿಯಲ್ಲಿ ಗೀತಾಜಯಂತಿ ಉತ್ಸವಗಳು<br>-ಸೂರ್ಯವಂಶಿ | 50 |


ಮುಖಚಿತ್ರ - ಶ್ರೀ ಮಹಾವಿಷ್ಣು
ಹಿಂಬದಿಚಿತ್ರ - ಶ್ರೀ ಹರಿ ಹೃದಯನಿವಾಸಿನಿ


**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ||ಕೆ.ರಾಧಾರಮಣ,ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ|| ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ ಆರ್.ವಿ. ವಿಜಯಕುಮಾರ್, ಬಿ.ಎ.ಬಿ.ಇಡಿ.,
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ/ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ, ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.


| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

**ಸಂಪಾದಕೀಯ**

# ಉತ್ತರಾಯಣ - ಪುಣ್ಯಾಯನ

ಮಕರ ಸಂಕ್ರಮಣ ಆಗಮಿಸಿದೆ. ಮನುಷ್ಯರಲ್ಲಿ ಅವರ ಮನಗಳಲ್ಲಿ ಸಂತಸ, ಸಂಭ್ರಮ ಹೆಚ್ಚಾಗಿದೆ. ಹಬ್ಬದ ಉದ್ದೇಶವೇನೇ ಇದ್ದರು, ಸಂಕ್ರಾಂತಿ ಎಂದರೇ ಗೋವಿಂದದಾಸರು ಬೀದಿಯಲ್ಲಿನ ವಿವಿಧ ರೀತಿಯ ರಂಗೋಲಿಗಳು. ಹೊಸ ಅಳಿಯಂದಿರ ಆಗಮನ. ಹಿತವಾದ ಊಟ ಇಷ್ಟೇ ಅಲ್ಲದೇ ಅನೇಕ ರೀತಿಯ ಸಂತಸ ಸಡಗರ. ನಿಜವಾಗಿಯೂ ಈ ಹಬ್ಬದ ಬಗೆಗೆ ಯಾಚಿಸಿದರೆ ಹೊಸ ಫಸಲು ಕೈ ತುಂಬಾ ಬರುತ್ತದೆ.

ಸಕಲ ದೇವತಾಸ್ವರೂಪನು ಎಲ್ಲಾ ಲೋಕಗಳ ಪ್ರತ್ಯಕ್ಷದೈವವಾದ ಸೂರ್ಯನಾರಾಯಣನು ಧನೂರಾಶಿಯಿಂದ ಮಕರ ರಾಶಿಗೆ ಪ್ರವೇಶಿಸಿದ ದಿನವೇ ಮಕರ ಸಂಕ್ರಾಂತಿಯೆಂಬ ಪರ್ವದಿನ. ಅನಾರೋಗ್ಯ, ಅತೀವೃಷ್ಠಿ, ಅನಾವೃಷ್ಟಿ ಮೊದಲಾದ ಈ ರೀತಿ ಬಾಧೆಗಳಿಂದ ಮುಂದುವರೆದು ಬಂದು ದಕ್ಷಿಣಾಯನ ಮುಗಿದು, ಆರೋಗ್ಯ, ಹೊಸಬೆಳೆ, ಆನಂದ ಸಂತೋಷ ತುಂಬಿ ತುಳುಕುವ ಉತ್ತರಾಯಣ ಈ ಮಕರ ಸಂಕ್ರಮಣದೊಂದಿಗೆ ಪ್ರಾರಂಭವಾಗುತ್ತದೆ. ಅಷ್ಟೇ ಅಲ್ಲದೆ ಸಂಕ್ರಾಂತಿಯ ಶುಭದಿನದಿಂದ ಸೂರ್ಯನು ಉತ್ತರ ದಿಕ್ಕಿನಲ್ಲಿರುವ ಊರ್ಧ್ವಲೋಕವಾಸಿಗಳಿಗೆ ಕತ್ತಲನ್ನು (ಅಜ್ಞಾನವನ್ನು) ತೊಲಗಿಸಿ, ಬೆಳಕನ್ನು (ಜ್ಞಾನ) ಪ್ರಸಾದಿಸುತ್ತಾ ಸಂಚಲಿಸುತ್ತಾನೆಂದೂ, ಆದ್ದರಿಂದಲೇ ಉತ್ತರಾಯಣ ಪರಮ ಪವಿತ್ರವೆಂದೂ ಹೇಳುತ್ತಾರೆ. ಆದ್ದರಿಂದಲೇ ಭೀಷ್ಮಾಚಾರ್ಯನು ಉತ್ತರಾಯಣ ಪುಣ್ಯಕಾಲ ಬರುವವರೆಗೂ ಪ್ರಾಣವನ್ನು ಬಿಗಿಹಿಡಿದುಕೊಂಡಿದ್ದನೆಂದು ಮಹಾಭಾರತದಿಂದ ತಿಳಿದು ಬರುತ್ತದೆ. ಒಟ್ಟಿನಲ್ಲಿ ಈ ಮಕರಸಂಕ್ರಾಂತಿ ಸಮಯ ಹಚ್ಚ ಹಸಿರಿನ ಹೊಸ ಬೆಳೆಗಳಿಂದ ತುಂಬಿ ತುಳುಕುವ ಕಾಲ! ಈ ರೀತಿ ಬಾಧೆಗಳು ತೊಲಗಿ ಶಾಂತಿಯನ್ನು ನೀಡುವ ಕಾಲ! ಆರೋಗ್ಯ ಸೌಭಾಗ್ಯಗಳು ಉಂಟಾಗಿ ಸಂತಸ ತುಂಬುವ ಕಾಲ! ಮಕ್ಕಳು, ಹಿರಿಯರು ಹೀಗೇ ಎಲ್ಲರಲ್ಲೂ ನವಚೈತನ್ಯವನ್ನು ಹಂಚುವಂತಹಾ ಶುಭಕಾಲವೇ ಈ ಮಕರ ಸಂಕ್ರಾಂತಿ.

ಇನ್ನು ಈ ಹಬ್ಬದಲ್ಲಿ ಕನುಮ ಹಬ್ಬ ಪ್ರತ್ಯೇಕವಾಗಿ ಗೋಮಾತೆಗೆ ಸಂಬಂಧಿಸಿದ್ದಾಗಿದೆ. ಸೃಷ್ಟಿಗೆ ಪ್ರಧಾನ ಕಾರಣ ಗೋವು. ಇದು ದೇವತೆಗಳ ಪೂಜ್ಯ. ಇದು ಪರಮಪವಿತ್ರವಾದುದು. ಪ್ರಜೆಗಳನ್ನು ಕಷ್ಟಗಳಿಂದ ರಕ್ಷಿಸುತ್ತದೆ. ಗೋಮಾತೆಯನ್ನು ಮುಟ್ಟಿದರೆ ಸಾಕು ಸಕಲ ತೀರ್ಥಗಳಲ್ಲಿ ಸ್ನಾನಮಾಡಿ, ಸಕಲ ದೇವತೆಗಳನ್ನೂ ಸೇವಿಸಿದಂತಹಾ ಭಾಗ್ಯವುಂಟಾಗುತ್ತದೆ. ಅಂತಹಾ ಗೋವುಗಳ ಪರಿರಕ್ಷಣೆಯಲ್ಲೂ ತಿ.ತಿ.ದೇ ಅನೇಕ ಯೋಜನೆಗಳನ್ನು ಕೈಗೊಂಡು, ಗೋ ಸಂಪತ್ತನ್ನು ಕಾಪಾಡುತ್ತಿದೆ. ನಾವೆಲ್ಲರೂ ಈ ಗೋವುಗಳನ್ನು ರಕ್ಷಿಸಿ, ಪೂಜಿಸಿ, ಕೃತಾರ್ಥರಾಗೋಣ.

----------



ಇಂದಿಗೆ "ಸಪ್ತಗಿರಿ" ಮಾಸ ಪತ್ರಿಕೆಯು ಪ್ರಾರಂಭವಾಗಿ 50 ವರ್ಷಗಳು 2020 ಮೇ ತಿಂಗಳಿಗೆ ಪೂರ್ಣಗೊಳ್ಳುತ್ತದೆ. ಈ ಸಂದರ್ಭವಾಗಿ 2020 ಜನವರಿ ಸಂಚಿಕೆಯಲ್ಲಿ ಅನೇಕ ಬದಲಾವಣೆಗಳನ್ನು ಮಾಡಲಾಗಿದೆ. ಅದೇ ರೀತಿ ಮಕ್ಕಳಿಗಾಗಿ ಪ್ರತ್ಯೇಕವಾಗಿ "ಮಕ್ಕಳ ಸಪ್ತಗಿರಿ" ಎಂಬ 20 ಪುಟಗಳ ಪುಸ್ತಕವು ಪ್ರತಿ ತಿಂಗಳು ಬರಬೇಕೆಂದು ತಿರುಮಲೆ ತಿರುಪತಿ ದೇವಸ್ಥಾನವು ನಿರ್ಣಯಿಸಿದೆ. ಇಂದು ಬಿತ್ತಿದ ಬೀಜಗಳು ..... ಮುಂದಿನ ದಿನಗಳಲ್ಲಿ ಮಹಾ ವೃಕ್ಷಗಳಾಗುತ್ತವೆ. ದೇಶ ಭವಿಷ್ಯ ದೇದೀಪ್ಯಮಾನವಾಗಿರಬೇಕೆಂದರೆ..... ಮಕ್ಕಳು ಮಾನವೀಯ ಮೌಲ್ಯಗಳನ್ನು ಅರಿತು ಬೆಳೆಯುವುದು ಅತ್ಯಗತ್ಯ. ತಿರುಮಲೆ ತಿರುಪತಿ ದೇವಸ್ಥಾನವು ಈ ನಿಟ್ಟಿನಲ್ಲಿ ಹೆಜ್ಜೆ ಇಡುತ್ತಿದೆ.... ದಾಸಸಾಹಿತ್ಯ, ಆಳ್ವಾರ್‌ರರ ಸಾಹಿತ್ಯ. ಹಿಂದೂ ದೇವರ ಬಗ್ಗೆ, ಬಾಲನೀತಿ, ಚಿತ್ರಕಥೆ, ಕ್ವಿಜ್, ಮೊದಲಾದವುಗಳನ್ನು "ಮಕ್ಕಳ ಸಪ್ತಗಿರಿ" ಯಲ್ಲಿ ಪ್ರಾರಂಭಿಸುತ್ತಿದ್ದೇವೆ. ಬಾಲಬಾಲಕಿಯರಲ್ಲಿ ನಮ್ಮ ಸಂಸ್ಕೃತಿಯ ಬಗ್ಗೆ ಧರ್ಮದ ಬಗ್ಗೆ, ಪುರಾಣಗಳ ಬಗ್ಗೆ, ಭಗವಂತನ ಬಗ್ಗೆ, ಹಿರಿಯರ ಬಗ್ಗೆ ಒಳ್ಳೆಯ ಅವಗಾಹನೆಯನ್ನುಂಟು ಮಾಡುವುದಕ್ಕಾಗಿ ಆಧ್ಯಾತ್ಮಿಕ ಪರವಾದ ಯೋಚನೆಗಳನ್ನು ಹೆಚ್ಚಿಸುವುದಕ್ಕಾಗಿ ಸಪ್ತಗಿರಿ ಮಾಸಪತ್ರಿಕೆ ಪ್ರೋತ್ಸಾಹಿಸುತ್ತಿದೆ. ತಂದೆ ತಾಯಿಯರು ಸಹ ತಮ್ಮ ಮಕ್ಕಳಲ್ಲಿ ನಮ್ಮ ಪುರಾಣ, ಇತಿಹಾಸಗಳ ಬಗ್ಗೆ ಜ್ಞಾನವನ್ನು ಹೆಚ್ಚಿಸುವುದಕ್ಕಾಗಿ ಅವರಿಗೆ ಸಪ್ತಗಿರಿ ಮಾಸಪತ್ರಿಕೆಯಲ್ಲಿ ಬರುತ್ತಿರುವ ಮಕ್ಕಳ ಪುಟಗಳನ್ನು ಓದುವುದಕ್ಕೆ ಪ್ರೋತ್ಸಾಹಿಸಿ, ನೀವು ಓದಿ....ಅವರಿಗೆ ಆಧ್ಯಾತ್ಮಿಕ ಮೌಲ್ಯಗಳ ಬಗ್ಗೆ ಸದಭಿರುಚಿಯನ್ನು ಅಭಿವೃದ್ಧಿಗೊಳಿಸಿ!

ಸಪ್ತಗಿರಿ ಮಾಸಪತ್ರಿಕೆಯಲ್ಲಿ ಹೊಸ ಶೀರ್ಷಿಕೆ "ಸಂಸ್ಕೃತ ಕಲಿಯೋಣ!!" ಎಂಬ ಧಾರವಾಹಿಯನ್ನು ಪ್ರಾರಂಭಿಸುತ್ತಿದ್ದೇವೆ.

ಪರ್ಯಾವರಣಕ್ಕಾಗಿ ಪ್ಲಾಸ್ಟಿಕ್ ಕವರ್‌ನ್ನು ನಿಷೇಧಿಸಿ ಪೇಪರ್ ಕವರ್‌ನಲ್ಲಿ "ಸಪ್ತಗಿರಿ" ಯನ್ನು ಭಕ್ತರಿಗೆ ನೀಡಲಾಗುತ್ತದೆ. ಪಾಠಕರು ಈ ಬದಲಾವಣೆಯನ್ನು ಸ್ವಾಗತಿಸಬೇಕೆಂದು ಆಕಾಂಕ್ಷಿಸುತ್ತಿದ್ದೇವೆ!



# ಸುಗ್ಗಿಯ ಸಂಭ್ರಮ

- ಶ್ರೀಮತಿ. ಸುಮಚಂದ್ರಶೇಖರ್
9880060354

ಭಾರತದಲ್ಲಿ ಬರುವ ಹಬ್ಬಗಳಿಗೆ ಎರಡು ರೀತಿಯ ಮಹತ್ವವು ಇರುತ್ತದೆ.ಆಧ್ಯಾತ್ಮಿಕ ಮಹತ್ವ, ಸಾಮಾಜಿಕ ಹಾಗೂ ಧಾರ್ಮಿಕ ಮಹತ್ವ ಮೊದಲು ನಾವು ಸಾಮಾಜಿಕ ಮಹತ್ವವನ್ನು ಅರ್ಥಮಾಡಿಕೊಳ್ಳೋಣ. ಮಕರ ಸಂಕ್ರಾಂತಿಯಂದು ರೈತರು ಸುಗ್ಗಿ ಆಚರಿಸುವ ದಿನ. ಮಕರ ಸಂಕ್ರಾಂತಿಯ ಅವಧಿಯಲ್ಲಿ ರೈತರು ಭೂಮಿಯನ್ನು ಹದ ಮಾಡಿ, ಬೀಜವನ್ನು ಬಿತ್ತಿ ಕಟಾವು ಮಾಡುತ್ತಾರೆ. ಸುಗ್ಗಿ ಕಾಲವು ಸಮೃದ್ಧಿಯ ಆಚರಣೆ ಕಾಲ. ಜನರು ಏಳಿಗೆಗೆ ಪ್ರಾರ್ಥನೆ ಮಾಡಿ,ಮತ್ತು ಅವರು ಮುಂದಿನ ದಿನಗಳಲ್ಲಿ ಉತ್ತಮ ಬೆಳೆಗಳನ್ನು ಪಡೆಯಲು ಆಶಿಸುತ್ತಾರೆ, ಇದನ್ನು "ಪೊಂಗಲ್" ಹಬ್ಬವೆಂದು ಆಚರಿಸುತ್ತಾರೆ.

ಅರ್ಥಾತ್ ಸಾಮಾಜಿಕವಾಗಿ, ಮಕರ ಸಂಕ್ರಾಂತಿ ಸಮೃದ್ಧಿಯನ್ನು ಆಚರಿಸುವ ದಿನ. ಆಧ್ಯಾತ್ಮಿಕವಾಗಿ ಇದು ಬೇರೆ ಪ್ರಾಮುಖ್ಯತೆಯನ್ನು ಹೊಂದಿದೆ. ನಾವು ಮಹಾ ಭಾರತದ ಅವಧಿಯಲ್ಲಿ ವೃದ್ಧ ಪಿತಾಮಹಾ ಭೀಷ್ಮಾಚಾರ್ಯರ ಬಗ್ಗೆ ಕೇಳಿದ್ದೇವೆ. ಅವರು ಗಾಯಗೊಂಡು ಬಾಣಗಳ ಹಾಸಿಗೆಯ ಮೇಲೆ ಉತ್ತರಾಯಣಾ ಪುಣ್ಯಕಾಲದ ಆಗಮನಕ್ಕೆ ಕಾಯುತ್ತಿದ್ದರು ಏಕೆಂದರೆ ಅನೇಕ ಭಾರತೀಯರು ಉತ್ತರಾಯಣ ಪುಣ್ಯಕಾಲದ ಅವಧಿಯಲ್ಲಿ ಸಾವು ಬಹಳ ಶ್ರೇಯಸ್ಕರ ಎಂದು ನಂಬುತ್ತಾರೆ.

### ಉತ್ತರಾಯಣವೇ ಶ್ರೇಷ್ಠ

ಉತ್ತರಾಯಣ ಯಾವುದೇ ಕಾರ್ಯಾಚರಣೆಗಾಗಿ ಮಂಗಳಕರ. ಅದೇ ತರಹ ಉತ್ತರಾಯಣ ಸಾವಿಗೂ ಶ್ರೇಯಸ್ಕರ ಎಂದು ಪರಿಗಣಿಸಲಾಗುತ್ತದೆ. ಉತ್ತರಾಯಣದ ಅವಧಿಯಲ್ಲಿ ಯಾರು ಸಾಯುವರೋ ಅವರು ಮುಕ್ತಿಯನ್ನು ಹೊಂದುತ್ತಾರೆ ಅನ್ನೋ ನಂಬಿಕೆ. ಈ ಉಲ್ಲೇಖವು ಭಗವದ್ಗೀತೆಯಲ್ಲಿ ಬರುತ್ತದೆ. ಶ್ರೀ ಕೃಷ್ಣ ಎರಡು ಮಾರ್ಗಗಳ ಬಗ್ಗೆ, ಎರಡು ಕಾಲಾವಧಿಯ ಬಗ್ಗೆ ಮಾತನಾಡುತ್ತಾನೆ,ಉತ್ತರಾಯಣ ಮಾರ್ಗ ಹಾಗೂ ದಕ್ಷಿಣಾಯಣ ಮಾರ್ಗ.ಉತ್ತರಾಯಣದಲ್ಲಿ ಯಾರು ಸಾವನ್ನು ಹೊಂದುತ್ತಾರೋ ಆ ಆತ್ಮ ಉತ್ತಮ ಲೋಕಕ್ಕೆ ಉನ್ನತವಾದ ಲೋಕಕ್ಕೆ ಹೋಗುತ್ತಾರೆ, ಹಾಗೂ ಮುಕ್ತಿಯನ್ನು ಹೊಂದುತ್ತಾರೆ. ಅವರು ಪುನಃ ಭೂಲೋಕಕ್ಕೆ ಬರುವುದಿಲ್ಲ ಎಂದು ಶ್ರೀಕೃಷ್ಣ ಹೇಳುತ್ತಾನೆ.

ದಕ್ಷಿಣಾಯಣದಲ್ಲಿ ಯಾರಾದರೂ ಸಾವನ್ನು ಹೊಂದಿದರೆ ಅವರು ಪುನಃ ಭೂಲೋಕಕ್ಕೆ ಬರುತ್ತಾರೆ. ಅವರು ಜನನ ಹಾಗೂ ಮರಣಗಳ ಪುನರಾವರ್ತಿತ ಆವರ್ತಗಳಿಗೆ ಒಳಗಾಗುತ್ತಾರೆ. ಹಾಗಾಗಿ ಉತ್ತರಾಯಣ ಕಾಲ ಮುಕ್ತಿಗೆ ಅತ್ಯಂತ ಶ್ರೇಯಸ್ಕರ ಎಂದು ಪರಿಗಣಿಸಲಾಗುತ್ತದೆ. ಅನೇಕರು ಉತ್ತರಾಯಣದ ಕಾಲದಲ್ಲಿ ಮುಕ್ತಿ ಹೊಂದಿದರು, ಉದಾಹರಣೆಗೆ ಬುದ್ಧನಿಗೆ ಉತ್ತರಾಯಣದಲ್ಲಿ ಜ್ಞಾನೋದಯವಾಯಿತು. ಹಾಗಾಗಿ ಉತ್ತರಾಯಣ ಕಾಲ,ಮರಣದ ನಂತರ ಮುಕ್ತಿಗೂ ಹಾಗೂ ಬದುಕಿರುವಾಗ ಜ್ಞಾನೋದಯಕ್ಕೂ ಹಾಗೂ ಜೀವನ್ಮುಕ್ತಿಗೆ ಶ್ರೇಷ್ಠವಾದ ಕಾಲವಾಗಿದೆ.

### ಯಾಕಿಷ್ಟು ಪ್ರಾಮುಖ್ಯತೆ?

ಮಾನವನು ಪಿಂಡಾಂಡ ಎಂದು ಕರೆಯಲ್ಪಡುವ ಒಂದು ಅಣುರೂಪ ಹಾಗೂ ವಿಶ್ವದ ಸ್ಥೂಲರೂಪ ಮಾನವನ ಅವತರಣಿಕೆಯಾಗಿರುವ ಬ್ರಹ್ಮಾಂಡವಾಗಿದ್ದಾನೆ.'ಯತ್ ಬ್ರಹ್ಮಾಂಡೆ ತತ್ ಪಿಂಡಾಂಡೆ' ಎನ್ನುವುದು ಉಪನಿಷತ್ ವಾಕ್ಯ. ಅಂದರೆ ವಿಶ್ವದಲ್ಲಿ ಏನು ಇರುವುದೋ ಅದು ಮನುಷ್ಯರಲ್ಲೂ ಇರುವುದು ಹಾಗೂ ಮನುಷ್ಯರಲ್ಲಿ ಏನು ಇರುವುದೋ ಅದು ವಿಶ್ವದಲ್ಲೂ ಇರುತ್ತದೆ. ನಾವು ವಿಶ್ವದ ಬಗ್ಗೆ ಅಥವಾ ಬ್ರಹ್ಮಾಂಡದ ಬಗ್ಗೆ ಮಾತನಾಡುವಾಗ ಬ್ರಹ್ಮಾಂಡದ

ಚಕ್ರಗಳು ಮತ್ತು ಮಾನವನ ಚಕ್ರಗಳು ಒಂದರ ಜೊತೆ ಒಂದು ಸಂಪರ್ಕ ಹೊಂದಿರುತ್ತದೆ. ಬ್ರಹ್ಮಾಂಡದಲ್ಲಿ ಏನು ಆಗುತ್ತದೋ ಅದು ಮನುಷ್ಯರಲ್ಲೂ ಆಗುತ್ತದೆ. ಬ್ರಹ್ಮಾಂಡವು ಒಂದಲ್ಲ ಒಂದು ರೀತಿಯಲ್ಲಿ ಮನುಷ್ಯರಲ್ಲಿ ಪರಿಣಾಮ ಬೀರುತ್ತದೆ. ಉದಾಹರಣೆಗೆ ಸೂರ್ಯೋದಯವಾದಾಗ ನಾವೂ ಎದ್ದೇಳುತ್ತೇವೆ ಹಾಗೂ ಸೂರ್ಯೋಸ್ತವಾದಾಗ ಮಲಗುತ್ತೇವೆ.ಎದ್ದೇಳುವ ಹಾಗೂ ಮಲಗುವ ನಮೂನೆ ಸೂರ್ಯನ ಜೊತೆ ಸಂಪರ್ಕ ಹೊಂದಿದೆ ಎಂದು ಗಮನಿಸಬಹುದು. ಹಾಗಾಗಿ ಬ್ರಹ್ಮಾಂಡದಲ್ಲಿ ನಡೆಯುವ ಘಟನೆ ಪ್ರತ್ಯೇಕವಾಗಿ ಪಿಂಡಾಂಡದ ಘಟನೆಯ ಮೇಲೆ ಪ್ರಭಾವ ಬೀರುತ್ತದೆ.

ನಿಮಗೆಲ್ಲರಿಗೂ ಅರಿವು ಇರಬಹುದು. ವಿಶ್ವವು ಚಂದ್ರನಿಂದ ಬಂದಿರುವುದು ಎಂದು. ಪೂರ್ಣಿಮೆಯ ದಿನ ಮಾನಸಿಕವಾಗಿ ನರಳುತ್ತಿರುವ ವ್ಯಕ್ತಿಗಳು ಕ್ಷೋಭೆಗೆ ಒಳಗಾಗುತ್ತಾರೆ. ಅರ್ಥಾತ್ ಅನೇಕ ಬ್ರಹ್ಮಾಂಡದ ಘಟನೆಗಳು ಪ್ರತ್ಯೇಕ ವ್ಯಕ್ತಿಗಳ ಮೇಲೆ ಪರಿಣಾಮ ಬೀಳುತ್ತದೆ, ಹಾಗಾದರೆ ಬ್ರಹ್ಮಾಂಡದ ಘಟನೆ ಒಬ್ಬ ಜ್ಞಾನಿಯ ಮೇಲೆ ಹೇಗೆ ಪರಿಣಾಮ ಬೀಳುತ್ತದೆ? ಬ್ರಹ್ಮಾಂಡದ ಘಟನೆಗೆ ಮುಕ್ತಿಗೆ ಹೇಗೆ ಕಾರಣವಾಗುತ್ತದೆ? ಉತ್ತರಾಯಣದಲ್ಲಿ ಬ್ರಹ್ಮಾಂಡದ ಶಕ್ತಿಗಳು ಅತ್ಯುಚ್ಛಮಟ್ಟದಲ್ಲಿ ಇರುತ್ತವೆ. ಉತ್ತರಾಯಣ ಕಾಲ ಸುಗ್ಗಿಯ ಕಾಲವಾದರೆ, ಇದಕ್ಕೆ ಪೂರ್ವಭಾವಿಯಾಗಿ ಉತ್ತರಾಯಣದ ಕಡೆಗೆ ನಡೆಯುತ್ತಿರುವ ದಕ್ಷಿಣಾಯಣ ಕಾಲ ಬಿತ್ತನೆಯ ಕಾಲ. ಪ್ರಕೃತಿಯ ಶಕ್ತಿಗಳು ಯಾವ ತರಹ ಇರುತ್ತದೆ ಅಂದರೆ, ದಕ್ಷಿಣಾಯಣ ಕಾಲದಲ್ಲಿ ನೀವು ಭೂಮಿಯನ್ನು ಹದ ಮಾಡಿ ಬೀಜವನ್ನು ಬಿತ್ತುವ ಪ್ರಯತ್ನ ಮಾಡಿದರೆ ಉತ್ತರಾಯಣದಲ್ಲಿ ಅದರ ಫಲವು ಸಿಗುತ್ತದೆ. ವ್ಯಕ್ತಿಗತ ಮಟ್ಟದಲ್ಲಿ ಸಹ ಇದೇ ತರಹ ಆಗುತ್ತದೆ. ನೀವು ಬ್ರಹ್ಮಾಂಡದ ಶಕ್ತಿಯೊಡನೆ ಅಂತರ್ಗತವಾಗಿದ್ದರೆ, ದಕ್ಷಿಣಾಯಾಣ ಕಾಲ ಸಾಧನೆಯ ಕಾಲವಾಗುತ್ತದೆ ಅಂದರೆ ಭೂಮಿಯನ್ನು ಹದ ಮಾಡುವುದು, ಸಾಧನೆಯ ಬೀಜವನ್ನು ಬಿತ್ತುತ್ತಾರೆ. ಅಂದರೆ ದಕ್ಷಿಣಾಯಣ ಆಧ್ಯಾತ್ಮಿಕ ಸಾಧನೆ ಮಾಡುವ ಕಾಲ, ಉತ್ತರಾಯಣ ಕಾಲ ಫಲವನ್ನು ಅನುಭವಿಸುವ ಕಾಲ, ಸಿದ್ಧಿಯ ಕಾಲ.



### ಸಾಧನೆಗೆ ಇದುವೇ ಸಕಾಲ

ಉತ್ತರಾಯಣದಲ್ಲಿ ಅನೇಕರು ಜ್ಞಾನವನ್ನು ಹೊಂದಿದ ಉದಾಹರಣೆಗಳಿವೆ. ಇದೇಕೆ ಹೀಗೆ? ವ್ಯಕ್ತಿಗತ ಮಟ್ಟದಲ್ಲಿ ಮನುಷ್ಯರ ಮನಸ್ಸು ಬ್ರಹ್ಮಾಂಡದ ಶಕ್ತಿಯನ್ನು ಸ್ವೀಕರಿಸುವ ಉನ್ನತ ಮಟ್ಟದಲ್ಲಿ ಇರುತ್ತದೆ.ಮನಸ್ಸು ಪ್ರಕೃತಿಯ ಒಂದು ಭಾಗ,ಉತ್ತರಾಯಣ ಕಾಲದಲ್ಲಿ ಬ್ರಹ್ಮಾಂಡದ ಶಕ್ತಿಯ ಅನುಸಾರವಾಗಿ ಮನಸ್ಸು ವಿಕಸಿತವಾಗುವ ಸಂಭವ ಇದೆ, ಹಾಗಾಗಿ ಭೀಷ್ಮಾಚಾರ್ಯರು ನಿರ್ಗಮಿಸಲು, ಮರಣ ಹೊಂದಲು ಉತ್ತರಾಯಣ ಕಾಲವನ್ನು ನಿರೀಕ್ಷಿಸುತ್ತಾ ಇದ್ದರು. ಇದರ ಸಾರಾಂಶ ಏನೆಂದರೆ ಸಾಧನೆಯನ್ನು ಮಾಡಲು ಉತ್ತಮವಾದ ಕಾಲ ದಕ್ಷಿಣಾಯಣ ಹಾಗೂ ಸಾಧನೆಯ ಫಲ ಹೊಂದಲು ಉತ್ತಮವಾದ ಕಾಲ ಉತ್ತರಾಯಣ ಏಕೆಂದರೆ ಇದು ಪ್ರಕೃತಿಯ ಆವರ್ತವನ್ನು ಅನುಸರಿಸುತ್ತದೆ.

### ನಮ್ಮ ನೆರೆಯಲ್ಲಿ ಎಲ್ಲಿಲ್ಲದ ಸಂಕ್ರಾಂತಿ

ಹೌದು. ಇನ್ನೆಲ್ಲಿಯೂ ಕಾಣಸಿಗದಂತಹ ವಿಶಿಷ್ಟ ಸಂಕ್ರಾಂತಿ ನಡೆಯುವುದು ನಮ್ಮ ನೆರೆಮನೆಯಲ್ಲಿಯೇ. ಪಕ್ಕದ ಆಂಧ್ರಪ್ರದೇಶದಲ್ಲಿಯೇ. ಅಲ್ಲಿ ಸಂಕ್ರಾಂತಿ ಮೇಲ್ನೋಟಕ್ಕೆ ನಮ್ಮಲ್ಲಿಯ ಹಾಗೆಯೇ. ಆದರೂ ನಮ್ಮಂತಲ್ಲ... ಬೇರಾವ ರಾಜ್ಯಗಳಿಗಿಂತಲೂ ಅದು ಭಿನ್ನ, ಅದಕ್ಕೇ ಅದನ್ನು 'ಎಲ್ಲಿಲ್ಲದ ಸಂಕ್ರಾಂತಿ' ಎಂದು ಕರೆದದ್ದು..

### ಹೇಗೆ ಭಿನ್ನ?

ಆಂಧ್ರಪ್ರದೇಶದಲ್ಲಿ ಸಂಕ್ರಾಂತಿಗೆ ಅತ್ಯಂತ ಮಹತ್ವವಿದೆ. ಇದು ಅವರ ಪಾಲಿನ ದೊಡ್ಡ ಹಬ್ಬ ಆದ್ದರಿಂದಲೇ "ವಚ್ಚಿಂದಿ ವಚ್ಚಿಂದಿ ಸಂಕ್ರಾಂತಿ/ ತೆಚ್ಚಿಂದಿ ತೆಚ್ಚಿಂದಿ ಕೊತ್ತ ಕಾಂತಿ" (ಬಂದಿದೆ ಬಂದಿದೆ ಸಂಕ್ರಾಂತಿ. ತಂದಿದೆ ತಂದಿದೆ ಹೊಸ ಕಾಂತಿ) - ಅಂತ ಆಡುತ್ತ - ಹಾಡುತ್ತ ಕುಣಿಯುತ್ತಾರೆ ಮಕ್ಕಳು - ಹೆಣ್ಣುಮಕ್ಕಳು, ಅಜ್ಜಿಯರು ಮೊಮ್ಮಕ್ಕಳು...

ಆಗ ಮನೆಗಳಿಗೆಲ್ಲ ತಳಿರುತೋರಣ, ಚಂಡು ಹೂಮಾಲೆಯ ಅಲಂಕರಣ. ಬಣ್ಣ ಬಣ್ಣದ 'ಪಟಗಳು' ಬಾನಿನಲ್ಲಿ. ರಂಗು ರಂಗಿನ 'ರಂಗವಲ್ಲಿ' ಬೀದಿಯಲ್ಲಿ. ಇದೇ ಸಂದರ್ಭದಲ್ಲಿ ಏರ್ಪಡುವ 'ಸಾರ್ವಜನಿಕರ

ರಂಗೋಲಿ ಸ್ಪರ್ಧೆ' ಹಬ್ಬದ ಉಬ್ಬನ್ನು ನೂರ್ಮಡಿ ಗೊಳಿಸುತ್ತದೆ. ಹೌದು, ಇಲ್ಲಿಯ ಹೆಂಗಳೆಯರಿಗೆ 'ಮುಗ್ಗು' (ರಂಗೋಲಿ) ಎಂದರೆ ಎಲ್ಲಿಲ್ಲದ ಹಿಗ್ಗು! ಇವುಗಳ ಜೊತೆಗೆ ಕೆಲವೆಡೆ ಕೋಳಿ ಪಂದ್ಯ, ಇನ್ನು ಕೆಲವೆಡೆ ಗೂಳಿ ಕಾಳಗ, ಮತ್ತೆ ಕೆಲವೆಡೆ ಗ್ರಾಮೀಣ ಕ್ರೀಡೆಗಳ ವೈಭವ.

ಸಂಭ್ರಮ ಏಕ ರೀತಿಯಾದಾದರೂ ಆಂಧ್ರ ಪ್ರದೇಶದ ಮೂರೂ ವಿಭಾಗಗಳಲ್ಲಿ (ತೆಲಂಗಾಣ, ಕೋನ ಸೀಮಾ ಅಥವಾ ಕರಾವಳಿ ಆಂಧ್ರ ಮತ್ತು ರಾಯಲ ಸೀಮಾ) ಆಯಾ ಪ್ರದೇಶದ ಸಾಂಸ್ಕೃತಿಕ ಪರಂಪರೆ, ಜನಾಂಗೀಯರ ನಂಬಿಕೆಗಳಿಗೆ ಅನುಸಾರವಾಗಿ ಮಕರ ಸಂಕ್ರಾಂತಿ ಆಚರಣೆಯಲ್ಲಿ ಭಿನ್ನತೆಯುಂಟು.

**ಭೋಗಿ:**

ಮೊದಲ ದಿನ 'ಭೋಗಿ', ಅದು ನಮ್ಮಲ್ಲಿಯೂ ಇದೆಯಲ್ಲ ಅನ್ನಬೇಡಿ. ಇಲ್ಲಿಯ ಭೋಗಿ ನಿಜಕ್ಕೂ ಅರ್ಥಪೂರ್ಣ. ಅದು ಹಳೆಯದೆಲ್ಲವ ತ್ಯಜಿಸಿ,ಹೊಸತನ್ನು ಆರಂಭಿಸುವುದರ ಸಂಕೇತ.ಅಷ್ಟಕ್ಕೂ 'ಸಂಕ್ರಮಣ ಕಾಲ' ನೋಡಿ. ಭೋಗಿಯ ದಿನ ಬೆಳಕು ಮೂಡುವ ಹೊತ್ತಿಗೆ ಅಲ್ಲಲ್ಲಿ ಕಾಣುತ್ತದೆ ಧಗ ಧಗ ಉರಿವ ಜ್ವಾಲೆ, ಸುತ್ತ ಕೇಕೆ ಹಾಕುವ ಜನ. ಹಿಂದಿನ ದಿನವೇ ನಿರುಪಯೋಗಿ ಕಟ್ಟಿಗೆ ವಸ್ತುಗಳನ್ನೆಲ್ಲ ಒಂದೆಡೆ ಪೇರಿಸಿಟ್ಟು ಮುಳ್ಳು ಕಂಟಿಗಳನ್ನೆಲ್ಲ ಆಯ್ದುತಂದು ಊರ ಚೌರಸ್ತೆಯಲ್ಲಿ ಗುಡ್ಡೆ ಹಾಕಿ ಅಗ್ನಿಸ್ಪರ್ಶ ಮಾಡುತ್ತಾರೆ. ಕಂಟಕ ಪ್ರಾಯವಾದ ಎಲ್ಲವನ್ನೂ ತಂದು ಹಾಕಿ ಸುಡುವುದು ಎಂಬು ದರ ಸಂಕೇತ ಇದು.

ಹಾಂ.. ಈ 'ಸುಡುವಿಕೆ' ಗೆ ಇನ್ನೂ ಒಂದೂ ಅರ್ಥ ಉಂಟು. ಆಧ್ಯಾತ್ಮಿಕ ಅರ್ಥ. ನಮ್ಮೆಲ್ಲ ಹಳೆಯ ಈರ್ಷ್ಯೆಗಳು, ದುಶ್ಚಟಗಳು, ದುರಭ್ಯಾಸಗಳು, ಅಪವಿತ್ರ ಸಂಬಂಧಗಳು, ಲೌಕಿಕ ಕಾಮನೆಗಳು ಇವೆಲ್ಲವನ್ನೂ ಸುಟ್ಟು 'ಭಸ್ಮ' ಗೊಳಿಸುವುದು.

ಸಂಕ್ರಾಂತಿ, ಹೊಸ ಫಸಲನ್ನು ಕೊಟ್ಟು ಕಾಪಾಡಿದ ಭೂತಾಯಿಗೆ ಕೃತಜ್ಞತೆ ಸಮರ್ಪಿಸುವ ಸಂದರ್ಭ. ಅದಕ್ಕೂ ಮೊದಲು 'ರೈತ ಬಿಡ್ಡ'ರು (ರೈತ ಮಕ್ಕಳು) ತಮ್ಮ ಜಮೀನಿನಲ್ಲಿ ಬೆಳೆದ ಹುಲ್ಲು, ಕಳೆ ಸಸ್ಯಗಳು, ಅಲ್ಲದೆ ಕೂಳೆಗಳು (ಕಬ್ಬು, ಜೋಳ ಇತ್ಯಾದಿ ಕಟಾವು ಮಾಡಿ ಕೆಳಗೆ ಉಳಿದ ಮೊನೆ) ಇತ್ಯಾದಿಗಳನ್ನು ಸುಡುತ್ತಾರೆ. ಹೀಗೆ ಮಾಡುವುದರಿಂದ ಅಲ್ಲಿರುವ ದುಃಶಕ್ತಿಗಳು ಬೂದಿಯಾಗುತ್ತವೆಂಬ ನಂಬಿಕೆ ರೈತರದು. ಆ ಬೂದಿ ಅವರ ನೊಸ ಲಿಗೂ, ಮನೆಯ ಜನರ ಹಣೆಗೂ 'ಅಂಗಾರ'. ಅವರೆಲ್ಲರ ಪಾಲಿಗೆ ಅದು 'ಭೂ ತಾಯಿಯ ಪ್ರಸಾದ'.



**ಸಂಮಿಲನೋತ್ಸವ**


ಸಂಕ್ರಾಂತಿ ಗ್ರಾಮೀಣ ತೆಲುಗಿನವರ ಪಾಲಿಗೆ ಒಂದು ರೀತಿಯ'ಸಂಮಿಲನೋತ್ಸವ'ವೂ ಹೌದು. ಹಿರಿಯರಿದ್ದಲ್ಲಿಗೆ ಕಿರಿಯರು, ಅಣ್ಣಂದಿರ ಮನೆಗೆ ಸೋದರಿಯರು, ಮತ್ತು ಅಪರೂಪದ ಸ್ನೇಹಿತರ ಮನೆಗೆ ಗೆಳೆಯರು ಹೋಗುವುದಕ್ಕಿದು ಸುಸಂದರ್ಭ. ಹೊಸದಾಗಿ ಮದುವೆಯಾದ ತಂಗಿಗೆ ಅಣ್ಣ ಕೊಡವ ಸಂಕ್ರಾಂತಿ 'ಕೊಡುಗೆ' ವಿಶೇಷದ್ದು.

ಇನ್ನು ಜಮೀನುದಾರರು ತಮ್ಮ ಕೃಷಿ ಕಾರ್ಮಿಕ ಬಂಧುಗಳಿಗೆ ಭೋಗಿ ಭೋಜನ ಹಾಕಿ ಬಟ್ಟೆ ಬರೆ ಮುತ್ತು ನಗದು ರೂಪದ ಕಾಣಿಕೆಯಿತ್ತು ಅವರು ನಗುತ್ತಿರುವ ಹಾಗೆ ನೋಡಿಕೊಳ್ಳುತ್ತಾರೆ. ಹಾಲಿನಲ್ಲಿ ಮಾಡಿದ ಖೀರು ಇತ್ಯಾದಿ ಸಿಹಿಗಳು ಅಂದಿನ ಊಟದಲ್ಲಿರುತ್ತವೆ.

ಈ ದಿನ ಕುಂಬಳಕಾಯಿ ದಾನ ಮಾಡುವುದು ಆಂಧ್ರದಲ್ಲಿ ಮಾತ್ರ ಕಾಣಬಹುದಾದ ಇನ್ನೊಂದು ಅಪರೂಪದ ಪದ್ಧತಿ. ಮನೆಗೆ ಬಂದವರಿಗೆ ಲೋಹದ ಚಿಕ್ಕ ಚಿಕ್ಕ ದೇವತಾ ಪ್ರತಿಮೆಗಳನ್ನು ಕಂಚಿನ ಪಾತ್ರೆಗಳನ್ನು ನೀಡುವುದು ಇಲ್ಲಿಯ ಇನ್ನೊಂದು ಪ್ರಥೆ. ಒಂದು ರೀತಿಯಲ್ಲಿ ದೋಷ ಪರಿಹಾರದ ಸಂಕೇತವೇನೋ. ಧ್ಯಾನದಾನ ಪಡೆಯಲು ತಲೆ ಮೇಲೆ ಅಕ್ಷಯ ಪಾತ್ರೆ ಹೊತ್ತುಕೊಂಡು ತಂಬೂರಿ ಮತ್ತು ಚಿಡತಾಳಗಳೊಂದಿಗೆ ಬರುವ 'ಹರಿದಾಸು'ಗಳು ಮತ್ತು 'ಗಂಗಿರೆದ್ದು' (ಕೌಲೇ ಬಸವ)ಗಳು ಮನೆಮನೆಗೆ ಬರುವುದು ಮೊದಲ ದಿನವೇ.

**ಪೆದ್ದ ಪಂಡುಗ**

ಎರಡನೆಯ ದಿನ 'ಪೆದ್ದ ಪಂಡುಗ' (ದೊಡ್ಡ ಹಬ್ಬ). ಹೊಸ ಬಟ್ಟೆ ತೊಟ್ಟು, ವಿಶೇಷ ಪೂಜೆ, ಆರಾಧನೆ ನಡೆಸಿ ಮುಂದಿನ ದಿನಗಳು ಸಂತಸಮಯವಾಗಿರಲಿ ಎಂದು



ದೇವರಲ್ಲಿ ಕೇಳಿಕೊಳ್ಳುವುದು ಒಂದು ಕಡೆಯಾದರೆ, ಇನ್ನು ಕೆಲವು ಮನಗಳಲ್ಲಿ ಇದು ‘ಹಿರಿಯರ ಸ್ಮರಣೆ’ಯ ದಿನ ಈ ಪ್ರಯುಕ್ತ ಶ್ರದ್ಧಾಪೂರ್ವಕವಾಗಿ ‘ಎಡೆ ’ (ನೈವೇದ್ಯ) ನೀಡುವ ಪದ್ಧತಿ ಇಲ್ಲಿದೆ. ಅಷ್ಟೇ ಅಲ್ಲದೆ, ಇಲ್ಲಿನ ಸಂಕ್ರಾಂತಿ ಸಹ ಜೀವಿಗಳಾದ ಹಸು, ಹಕ್ಕಿಗಳು ಮತ್ತು ಮೀನು ಮುಂತಾದ ವುಗಳಿಗೆ ಉಣ ಬಡಿಸುವ ದಯಾ ನೀತಿಗೂ ಸಾಕ್ಷಿಯಾಗಿದೆ.

ನಮ್ಮೆಲ್ಲರ ಮಕರ ಸಂಕ್ರಮಣದ ದಿನ ‘ತೀರ್ಥ ಸ್ನಾನ’ ಕ್ಕೆಂದು ದೂರದ ಊರಿಗೆ ಹೋಗುವ ವಾಡಿಕೆ. ಆದರೆ ಆಂಧ್ರಪ್ರದೇಶದಲ್ಲಿ ಈ ದಿನ ಪ್ರಯಾಣ ನಿಷಿದ್ಧ. ಇದು ಹಳೆಯ ವರ್ಷದ ಆಗುಹೋಗುಗಳನ್ನೆಲ್ಲ ಲೆಕ್ಕ ಹಾಕಿ, ಹೊಸ ವರ್ಷದಲ್ಲಿ ಆಗಬೇಕಾದ ಕೆಲಸ ಕಾರ್ಯಗಳ ಬಗ್ಗೆ ಒಂದೆಡೆ ಸೇರಿ ಚಿಂತನೆ ನಡೆಸುವ ಕಾಲ. ‘ಗುರು ಬೋಧಕ್ಕೂ, ‘ಶಿಷ್ಯ ಸ್ವೀಕೃತಿ’ ಗೂ ಮಕರ ಸಂಕ್ರಮಣ ದಂಥ ಶ್ರೇಷ್ಠ ಮುಹೂರ್ತ ಬೇರೆ ಇಲ್ಲವೆಂಬ ಭಾವನೆ ಇಲ್ಲಿಯ ವರದು.

### ರಂಗೋಲಿ ಮತ್ತು ಪೊಂಗಲಿ

ಅಂಗಳದಲ್ಲಿ ಸಗಣಿ ಸಾರಿಸಿ, ಅಂದದ ರಂಗೋಲಿ ಗಳ ವೃತ್ತಾಕಾರದ ಚಿತ್ತಾರಗಳ ಬರೆದು, ಅದರ ನಡುವೆ ತುಸು ಅಗ್ನಿಯನ್ನು ಹೊತ್ತಿಸಿ, ಮೇಲೆ ಮಡಕೆ ಇಟ್ಟು ಹಾಲು ಉಕ್ಕಿಸುವುದು ಪರಿಪಾಠ. ಅದೇ ರೀತಿ ಸಗಣಿಯಿಂದ ಮಾಡಿದ ‘ಗೊಬ್ಬೆಮ್ಮ’ಕ್ಕೆ ಚೆಂಡು ಹೂವು ಇತ್ಯಾದಿ ಅಲಂಕಾರ ಮಾಡುವುದೂ ಇದೆ.‘ಪೊಂಗಲಿ’ ಮತ್ತು ‘ರಂಗೋಲಿ’ ಇವು ಈ ‘ಪೆದ್ದ ಪಂಡಗ’ ವಿಶೇಷ.

ತಮಿಳುನಾಡಿನಲ್ಲಿ ಸಂಕ್ರಾಂತಿ ಹಬ್ಬವನ್ನು ಪೊಂಗಲ್ ಎನ್ನುತ್ತಾರಷ್ಟೇ. ಆ ದಿನ ಮಾಡುವ ವಿಶೇಷ ಅಡುಗೆ ‘ಪೊಂಗಲ್’ ನಿಮಗೆಲ್ಲ ಗೊತ್ತು. ಆಂಧ್ರಪ್ರದೇಶದಲ್ಲಿ ಮಕರ ಸಂಕ್ರಮಣದ ದಿನ ಮಾಡುವ ವಿಶಿಷ್ಟ ಖಾದ್ಯ ‘ಪೊಂಗಲಿ’. ಆ ವರ್ಷವೇ ಬೆಳೆದ ಭತ್ತದಿಂದ ಮಾಡಿದ ಹೊಸ ಅಕ್ಕಿಯೇ ಆಗಬೇಕು ಇದಕ್ಕೆ. ಇದು ‘ಸಂಕ್ರಾಂತಿ ಲಕ್ಷ್ಮಿಯ’ ನೈವೇದ್ಯ ಕ್ಕೆಂದೇ ಮಾಡುವ ವಿಶೇಷ ಅಡಿಗೆ. ಇದರ ಜೊತೆ ಕುಂಬಳ ಕಾಯಿ ಪಲ್ಯ. ಅಲ್ಲದೆ, ಬೆಲ್ಲ ಮತ್ತು ಕುಂಬಳಕಾಯಿ ಮಿಶ್ರಣ ದಿಂದ ತಯಾರಿಸಿದ ‘ಅರಿಸೆಲು’ ಅಥವಾ ‘ಸಂಕ್ರಾಂತಿ ಅಪ್ಪಂ’ ಎಂಬ ವಿಶೇಷ ಪಕ್ವಾನ್ನ ಆವತ್ತು ಇರಲೇಬೇಕು. ಇದು ‘ಸಂಕ್ರಾಂತಿ ಪುರುಷ’ ನಿಗೆ ಅರ್ಪಿಸಲ್ಪಡುವ ಮೀಸಲು ಪದಾರ್ಥ.

### ಕನುಮು ಪಂಡುಗ

ಸಾಮಾನ್ಯವಾಗಿ ಸಂಕ್ರಾಂತಿಯ ಮರುದಿನಕ್ಕೆ ನಮ್ಮಲ್ಲಿ ಅಂಥ ‘ವಿಶೇಷತೆ’ ಇಲ್ಲ ಮೊದಲೇ ಹೇಳಿದ ಹಾಗೆ ಈ ದಿನವನ್ನು ಉತ್ತರ ಕರ್ನಾಟಕದ ಕಡೆ ‘ಕರಿ’ ಎಂದು ಕರೆಯುತ್ತಾರೆ. ಆದರೆ ಆಂಧ್ರಪ್ರದೇಶದಲ್ಲಿ ಮೂರನೆ ದಿನವೂ ಮಹತ್ವದ್ದೇ . ಈ ದಿನವನ್ನವರು ‘ಕನುಮು ಪಂಡುಗ”ಎಂದು ಆಚರಿಸುತ್ತಾರೆ.‘ಸಂಕ್ರಾಂತಿ ಪುರುಷ’ನನ್ನು ಬೀಳ್ಕೊಡುವ ದಿನ ಅದು.

ರೈತರ ಪಾಲಿಗೆ “ಕನುಮು” ಅತ್ಯಂತ ವಿಶೇಷ ದಿನ. ವರ್ಷವಿಡೀ ನೊಗಭಾರ ಹೊತ್ತು, ನೇಗಿಲನ್ನೆಳೆದು ನಗುವ ಫಸಲು ಬರಲು ಕಾರಣವಾದ ಎತ್ತುಗಳಿಗೆ ಕೃತಜ್ಞತೆ ಹೇಳಲು ಮಣ್ಣಿನ ಮಕ್ಕಳಿಗೆ ಸಂಕ್ರಾಂತಿ ಒಂದು ಸುಸಂದರ್ಭ. ನಸುಕಿನಲ್ಲಿ ಅವರು ತಮ್ಮ ದನ - ಕರುಗಳನ್ನು ಊರ ಬದಿಯ ಹೊಳೆ- ಹಳ್ಳ - ಕೆರೆಗಳಿಗೆ ಕರೆದೊಯ್ಯುತ್ತಾರೆ. ಮೈತೊಳೆದು ಕೊಂಬುಗಳಿಗೆ ಬಣ್ಣ ಬಳಿದು, ಕೊರಳಿಗೆ ಗಂಟೆ, ಸರ ಕಟ್ಟು ತ್ತಾರೆ. ಮನೆಗೆ ಕರೆತಂದು ವಿಶೇಷ ನೈವೇದ್ಯವಿತ್ತು ನಮಸ್ಕರಿಸು ತ್ತಾರೆ. ಅಲ್ಲಿಯ ನೇಗಿಲ ಯೋಗಿಗಳು.

ಇದೇ ದಿನ ಕೆಲವೆಡೆ ರೈತರು ಸಮೃದ್ಧವಾದ ಫಸಲನ್ನು ನೀಡುವ ದೇವತೆಯ ಪ್ರೀತ್ಯರ್ಥ ಕುರಿ ಇಲ್ಲವೆ ಮೇಕೆಯನ್ನು ತಮ್ಮ ಹೊಲ-ಗದ್ದೆಗಳಲ್ಲಿ ‘ಬಲಿ’ ಕೊಡುವ ಪದ್ಧತಿಯಿದೆ. ಇನ್ನು ಕೆಲವು ರೈತರು ಜಮೀನಿನಲ್ಲಿ ಜಾನುವಾರುಗಳ ಪೂಜೆ ಮಾಡಿ, ಅನ್ನ ಮತ್ತು ಹಾಲನ್ನು ಇಟ್ಟು, ಅವು ತಿಂದು ಉಳಿದದ್ದನ್ನು ಹೊಲದ ಅಷ್ಟ ದಿಕ್ಕುಗಳಲ್ಲಿ ಚೆಲ್ಲು ತ್ತಾರೆ. ಹೀಗೆ ಮಾಡುವುದರಿಂದ ಮುಂಬರುವ ವರುಷದಲ್ಲಿ

ಇಮ್ಮಡಿ ಮುಮ್ಮಡಿ ಫಸಲು ದೊರೆಯುತ್ತದೆಂಬ ಭಾವನೆ ಅವರದು. 'ಕನುಮು'ದ ದಿನವೇ ಶ್ರೀಕೃಷ್ಣನು ಗೋವರ್ಧನ ಗಿರಿಯನ್ನು ಕಿರು ಬೆರಳಿನಲ್ಲಿ ಎತ್ತಿ, ಜನ ಜಾನುವಾರುಗಳನ್ನು ರಕ್ಷಿಸಿದ್ದನೆಂದು ಇವರ ನಂಬಿಕೆ.

## ಮುಕ್ಕನುಮು

ಸಂಕ್ರಾಂತಿಗೆ ಸೂರ್ಯ ಪಥ ಬದಲಿಸುತ್ತಾನಷ್ಟೇ . ಆತ ಕೇವಲ ಪ್ರಕಾಶ ಪುಂಜವಲ್ಲ, ಅಪಾರ ಶಕ್ತಿಯ ಆಗರ. ಚರಾಚರ ಜೀವಿಗಳೆಲ್ಲದರ ಬದುಕು ಬೆಳವಣಿಗೆಗಳು ಸೂರ್ಯನನ್ನೇ ಅವಲಂಭಿಸಿವೆ. ಅದಕ್ಕೆ ಆತ ಜಗತ್ತಿಗೆಲ್ಲ ಬೆಳಕು ಮತ್ತು ಬದುಕನ್ನು ನೀಡಲಿ ಎಂಬುದು ಈ "ಮುಕ್ಕನುಮು" ಆಚರಣೆಯ ಆಶಯ. ಈ ದಿನದ ಮುಂಜಾನೆ ಮನೆಗಳ ಮುಂದೆಲ್ಲ ಸೂರ್ಯ ರಥದ ರಂಗೋಲಿಗಳು. ಮನದಿಂದ ಮನಕ್ಕೆ, ಮನೆಯಿಂದ ಮನೆಗೆ ಸೂರ್ಯ ರಥ ಸಂಚರಿಸಬೇಕು ಎಂಬುದು ಇದರ ಉದಾತ್ತ ವಿಚಾರ. ಸೂರ್ಯಾರಾಧನೆಯ ಮತ್ತೊಂದು ರೂಪ ಇದು.



ಮುಕ್ಕನುಮುವನ್ನು ಆಂಧ್ರಪ್ರದೇಶದಲ್ಲಿ 'ಪಶುವುಲ ಪಂಡುಗ' (ಪಶುಗಳ ಹಬ್ಬ) ಎಂದೂ ಕರೆಯಲಾಗುತ್ತದೆ. ಈ ದಿನ ಕೋಳಿಪಂದ್ಯ ಹಾಗೂ ಎತ್ತಿನ ಬಂಡಿ ಓಡಿಸುವ ಸ್ಪರ್ಧೆಯದೇ ಸಡಗರ.

ಓದುಗರಿಗೆ, ಏಜಂಟರಿಗೆ, ಚಂದಾದಾರರಿಗೆ

ಮಕರ ಸಂಕ್ರಾಂತಿಯ ಹಾಗೂ ನೂತನ ವರ್ಷದ ಶುಭಾಶಯಗಳು



**2020 ರಲ್ಲಿ ತಮ್ಮ ಅಭೀಷ್ಟೆಗಳನ್ನು ನೆರವೇರಿಸಿ ತಿರುಮಲೆ ಸ್ವಾಮಿಯು ಸುಖ ಶಾಂತಿಗಳನ್ನು ಸರ್ವತ್ರ ಸಮಾನವಾಗಿ ಹರಡಲೆಂದು ಹೃತ್ಪೂರ್ವಕ ಹಾರೈಕೆ.**

– ಪ್ರಧಾನ ಸಂಪಾದಕರು

# ಏಕಾದಶಿ ವ್ರತ ಮತ್ತು ಮಹಿಮೆ

## (ವೈಕುಂಠ ಏಕಾದಶಿ ಪ್ರಯುಕ್ತ)

- ಎಸ್. ವೆಂಕಟರಾಘವನ್
9845793917

ವರ್ಷದಲ್ಲಿ ಹನ್ನೆರಡು ತಿಂಗಳು.ಒಂದು ತಿಂಗಳಲ್ಲಿ ಎರಡು ಪಕ್ಷ. ಶುಕ್ಲ ಪಕ್ಷ ಮತ್ತು ಕೃಷ್ಣ ಪಕ್ಷ. ಪಕ್ಷಕ್ಕೆ ಒಂದು ಏಕಾದಶಿ ಬರುವುದು. ಒಟ್ಟಾರೆ ಒಂದು ವರುಷದಲ್ಲಿ ೨೪ ಏಕಾದಶಿ ಇರುವವು. ಚಂದ್ರನ ಚಲನೆ ಆಧಾರಿತವಾಗಿ ಕಾಲ ಗಣನೆಯನ್ನು ಚಾಂದ್ರಮಾನ ಎನ್ನುವರು.ಚಾಂದ್ರಮಾನ ಆಧಾರದಲ್ಲಿ ಮೂರು ವರ್ಷಕ್ಕೊಮ್ಮೆ ಅಧಿಕ ಮಾಸ ಬರುವುದು. ಅಧಿಕ ಮಾಸ ಬಂದ ವರ್ಷದಲ್ಲಿ ೨೬ ಏಕಾದಶಿ ಬರುವವು.ಏಕಾದಶಿ ಎಂದರೆ ಹನ್ನೊಂದು ಎಂದು ಸಂಖ್ಯೆಯ ಪರವಾಗಿ ಮತ್ತು ತಿಥಿ ಸೂಚನೆಯಲ್ಲಿ ಹನ್ನೊಂದನೇ ದಿನ ಎಂದು ಗುರುತಿಸಲಾಗುವುದು. ಏಕಾದಶಿ ಎಂದರೆ ಚಾಂದ್ರಮಾನದ ಹನ್ನೊಂದನೆಯ ತಿಥಿ. ಪ್ರತಿ ತಿಂಗಳು ಪೌರ್ಣಿಮ ಮತ್ತು ಅಮಾವಾಸ್ಯೆ ಮುನ್ನ ಏಕಾದಶಿ ತಿಥಿ ಬರುವುದು. ಆಷಾಢ ಶುಕ್ಲ ಏಕಾದಶಿಯನ್ನು ಪ್ರಥಮ ಏಕಾದಶಿ ಎಂದು ಪರಿಗಣಿಸಲಾಗುವುದು. ಪೌರ್ಣಿಮ ಮುನ್ನ ಬರುವ ಏಕಾದಶಿಯನ್ನು ಶುದ್ಧ ಏಕಾದಶಿ ಎಂದು ಕರೆಯುವರು. ಎಲ್ಲ ಏಕಾದಶಿ ದಿನಗಳಿಗೂ ಪ್ರಾಮುಖ್ಯತೆ ಇದೆ. ಅದರಲ್ಲೂ ತುಂಬಾ ಪ್ರಾಮುಖ್ಯತೆ ಮತ್ತು ಮಹಿಮೆಯುಳ್ಳ ನಾಲ್ಕು ಏಕಾದಶಿಗಳಿವೆ. ಅಷಾಢ ಶುದ್ಧ ಏಕಾದಶಿ (ಪ್ರಥಮ ಏಕಾದಶಿ),ಕಾರ್ತಿಕ ಶುದ್ಧ ಏಕಾದಶಿ (ಉತ್ಥಾನ ಏಕಾದಶಿ), ಪುಷ್ಯ ಶುದ್ಧ ಏಕಾದಶಿ (ವೈಕುಂಠ ಏಕಾದಶಿ) ಮತ್ತು ಮಾಘ ಶುದ್ಧ ಏಕಾದಶಿ (ಭೀಷ್ಮ ಏಕಾದಶಿ).

"ಯಜ್ಞದಾನತಪಃ ಕರ್ಮನ ತ್ಯಾಜ್ಯಮ್ ಕಾರ್ಯಮೇವ ತತ್"

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮ ಯಜ್ಞ, ದಾನ ಮತ್ತು ತಪ ಕರ್ಮ ಯಾವುದೇ ಕಾರಣಕ್ಕೂ ಬಿಡಬಾರದು. ಶಾಸ್ತ್ರಗಳಲ್ಲಿ ತಪ ಮಹಿಮೆ, ವ್ರತಗಳ ವಿವರಣೆ, ಆಚರಿಸುವ ಪದ್ಧತಿ, ವಿಧಾನ, ವ್ರತದ ತಿಥಿ ಮತ್ತು ಕೊಡುವ ಫಲವನ್ನು ವರ್ಣಿಸಲಾಗಿದೆ. ನದಿಯಲ್ಲಿ ಗಂಗೆ, ಪ್ರಕಾಶಮಾನ ಮಾಡಲು ಸೂರ್ಯ, ದೇವತೆಗಳಲ್ಲಿ ಶ್ರೀಹರಿ ಪ್ರಮುಖವಾದಂತೆ , ಏಕಾದಶಿ ವ್ರತಕ್ಕೆ ಪ್ರಾಮುಖ್ಯತೆ ಇದೆ. ಈ ವ್ರತದ ಪ್ರಭಾವದಿಂದ ಸರ್ವರೋಗ ವಿಮುಕ್ತಿ, ಮನಃ ಶಾಂತಿ, ದೀರ್ಘ ಆಯುವು, ಸುಖ, ಶಾಂತಿಪ್ರಾಪ್ತಿ ಆಗುವುದು, ಇದಲ್ಲದೆ ಮನುಷ್ಯನ ಮುಖ್ಯ ಉದ್ದೇಶ್ಯವಾದ ಭಾಗವತ್ಪ್ರಾಪ್ತಿ ಆಗುವುದು.

### ಏಕಾದಶಿದೇವಿ ಉದ್ಭವ

ಕೃತಯುಗದಲ್ಲಿ ಚಂದ್ರಾವತಿ ನಗರವನ್ನು ಮುರಾಸುರ ಎನ್ನುವ ರಾಕ್ಷಸ ಪರಿಪಾಲಿಸುತ್ತಿದ್ದನು. ತಾಳಜಂಘ ನಾಮದ ಅಸುರನ ಪುತ್ರ ಮುರಾಸುರ. ಮುಲ್ಲೋಕಗಳನ್ನು ಜಯಿಸಿ ತ್ರಿಲೋಕಾಧಿಪತ್ಯವನ್ನು ಗಳಿಸಿ ದೇವತೆಗಳ ಜೊತೆ ದುರಾಚಾರವಾಗಿ ನಡೆದುಕೊಂಡು ಅಧರ್ಮ ಕಾರ್ಯ ಮಾಡುತ್ತಾ ಹಿಂಸೆ ಕೊಡುತ್ತಿದ್ದನು.ದೇವತೆಗಳು ಮುರಾಸುರನ ಅಧರ್ಮ ಪ್ರವರ್ತನೆ ಮತ್ತು ಅಸುರನ ಪಾಲನೆಯಿಂದ ಬಿಡುಗಡೆ ಮಾಡಿ ಧರ್ಮ ಸ್ಥಾಪನೆ ಮಾಡಲು ವೈಕುಂಠಕ್ಕೆ ತೆರಳಿ ಶ್ರೀಹರಿಯನ್ನು ಪ್ರಾರ್ಥಿಸಿದರು. ಶ್ರೀಹರಿ ದೇವತೆಗಳ ಜೊತೆ ಗೂಡಿ ಚಂದ್ರಾವತಿ ನಗರಕ್ಕೆ ಬಂದು ಅಸುರ ಜೊತೆ ಯುದ್ಧ ಘೋಷಿದರು. ಮುರಾಸುರನ ಸೇನೆ ಮತ್ತು ಶ್ರೀಹರಿ ನಡುವೆ ಭೀಕರ ಸಮರ ನಡೆದು, ಶ್ರೀಹರಿಯ ಸುದರ್ಶನ ಚಕ್ರ ಪ್ರಯೋಗದಿಂದ ಮುರಾಸುರನ ಸೇನೆದಿಕ್ಕಿಲ್ಲದೆ ಓಡಿ ಹೋದರು.ಯುದ್ಧ ನಿಂತ ಮೇಲೆ ಶ್ರೀ ಹರಿ ಬದರಿಕಾಶ್ರಮಕ್ಕೆ ತೆರಳಿದರು. ಅಲ್ಲಿ ಸಿಂಹಾವತಿ ಅನ್ನುವ ಗುಹೆ ಇದ್ದು, ಗುಹೆಗೆ ಒಂದೇ ಬಾಗಿಲು ಇತ್ತು. ಶ್ರೀಹರಿ ಗುಹೆಯಲ್ಲಿ ಶಯನಿಸಿದಾಗ ಮುರಾಸುರ ಗುಹೆಯೊಳಗೆ ಬಂದು ಶ್ರೀಹರಿಯನ್ನು ಕಂಡು ಆಯುಧ ಪ್ರಯೋಗಮಾಡಲು ಸಿದ್ಧನಾದಾಗ, ಶಯನ ಸ್ಥಿತಿಯಲ್ಲಿದ್ದ ಶ್ರೀಹರಿಯ ಅಂಶ ಕನ್ಯಾ ರೂಪದಲ್ಲಿ ಉದ್ಭವವಾಯಿತು. ಅತಿಸುಂದರ, ಸೌಭಾಗ್ಯವತಿ ಮತ್ತು ಶಸ್ತ್ರಾಸ್ತ್ರಗಳಿಂದ ರೂಪ ತಾಳಿದ ದೇವಿ ಮುರಾಸುರನ ಜೊತೆ ಯುದ್ಧ ಘೋಷಿಸಿದರು.ಭೀರ ಯುದ್ಧದ ನಂತರ ಮುರಾಸುರನ ಅಂತ್ಯವಾಯಿತು. ಶ್ರೀಹರಿ ಶಯನ ಸ್ಥಿತಿಯಿಂದ ಎದ್ದು ನೋಡಿದಾಗ ಅಸುರನ ಅಂತ್ಯವಾಗಿತ್ತು. ಶ್ರೀಹರಿ ದೇವಿಯನ್ನು ನೋಡಿ ಅಸುರನ ವಧೆ ಮೂರು ಲೋಕದ ಮುನಿಗಳಿಗೆ ದೇವತೆಗಳಿಗೆ ಆನಂದವನ್ನು ಉಂಟುಮಾಡಿದೆ, ವರವನ್ನು ಕೇಳಲು ಪ್ರಸ್ತಾಪಿಸಿದರು. ದೇವಿ ಶ್ರೀಹರಿಗೆ ನಮಸ್ಕರಿಸಿ, ಏಕಾದಶಿಯ ತಿಥಿಯಂದು ನಿಮ್ಮ ಅಂಶೆಯಿಂದ ಉದ್ಭವ ಆದುದರಿಂದ ನನ್ನ ಹೆಸರು ಏಕಾದಶಿ ದೇವಿ! ಏಕಾದಶಿ ದೇವಿಯ ಪ್ರಾದುರ್ಭವ ಮಾರ್ಗಶೀರ್ಷ ಮಾಸದ ಕೃಷ್ಣಪಕ್ಷದಲ್ಲಿ ಆಯಿತು. ಏಕಾದಶಿ ದೇವಿ ಮುಂಬರುವ ಕಾಲದಲ್ಲಿ ಏಕಾದಶಿ ವ್ರತ ಮಾಡುವವರಿಗೆ ಸಿದ್ಧಿ ಕೊಡುವ ದೇವಿಯಾಗಿ ನಿಯಮಿಸಲು ಕೇಳಿಕೊಂಡರು. ಏಕಾದಶಿ ದಿನ ಉಪವಾಸ ವ್ರತ, ದೈವ ಸೇವೆ ಮಾಡುವವರಿಗೆ ಇಹಪರ ಸೌಖ್ಯ ಮತ್ತು ಮೋಕ್ಷ ಕೊಡುವಂತೆ ಶ್ರೀಹರಿಯನ್ನು ವರವ ಬೇಡಿದರು. ಶ್ರೀಹರಿ ಅತ್ಯಂತ ಪ್ರಸನ್ನರಾಗಿ ದೇವಿಗೆ ವರ ಕೊಟ್ಟರು. ಶ್ರೀಹರಿಯ ಭಕ್ತರು ಹರಿ ಸೇವೆ ಮಾಡುತ್ತ ಏಕಾದಶಿ ದಿನಗಳಲ್ಲಿ ಉಪವಾಸ ದೀಕ್ಷೆ ತೆಗೆದುಕೊಳ್ಳುವರೋ ಅವರಿಗೆ ಎಲ್ಲ ವಿಧವಾದ ಸಿದ್ಧಿ ಪ್ರಾಪ್ತಿಯಾಗುವುದು.



ಹೇ ಜನಾರ್ಧನಾ। ಯಾವುದೇ ಕಾರಣಗಳಿಂದ ಕಠಿಕ ಉಪವಾಸ ಮಾಡಲು ಸಾಧ್ಯವಾಗದಿರುವ ಸಂದರ್ಭದಲ್ಲಿ ಒಪ್ಪತ್ತು ಉಪವಾಸ ವ್ರತ ಮಾಡಿದರೂ, ಇಹಪರ ಸೌಖ್ಯ ಧರ್ಮ ಮೋಕ್ಷವನ್ನು ಕೊಡಬೇಕು ಎಂದು ಏಕಾದಶಿ ದೇವಿ ಪ್ರಾರ್ಥನೆ ಮಾಡಿದರು. ಶ್ರೀಹರಿ ಪ್ರಸನ್ನರಾಗಿ ವರ ಕೊಟ್ಟರು. ಮಹಾವ್ರತ ಏಕಾದಶಿ ದೇವಿ ಸಂತುಷ್ಟಗೊಂಡು ಶ್ರೀಹರಿಗೆ ನಮಸ್ಕರಿಸಿದರು. ಏಕಾದಶಿ ತಿಥಿಗೆ ಅಧಿದೇವತೆ ಏಕಾದಶಿದೇವಿ. ದೇವಿ ವಿಷ್ಣು ದೇಹ ಸಮುತ್ಪನ್ನ.



### ಏಕಾದಶಿ ವ್ರತ ವಿಧಾನ

ಏಕಾದಶಿಯ ಹಿಂದಿನ ದಿನ ದಶಮಿಯಂದು ಒಂದು ಹೊತ್ತು ಮಧ್ಯಾಹ್ನ ಊಟ ಮಾಡಿ ಮರುದಿನ ಏಕಾದಶಿ ಉಪವಾಸ ಮಾಡಬೇಕು. ಏಕಾದಶಿ ದಿನದಂದು ಉಪವಾಸವಿದ್ದು, ದ್ವಾದಶಿಯ ದಿನ,ನಿತ್ಯಕರ್ಮ ಮುಗಿಸಿ ಭೋಜನ ಮಾಡಬೇಕು. ಉಪ-ಸಮೀಪದಲ್ಲಿರುವ, ವಾಸಃ ಇರುವುದು.ಇಂದಿನ ದಿನ ಇಂದ್ರಿಯಗಳನ್ನು ನಿಗ್ರಹಿಸಿ, ಶ್ರೀ ಹರಿಗೆ ಸೇವೆ ಮಾಡುತ್ತ ಭಗವಂತನ ಸಮೀಪ ದಲ್ಲಿರುವ ವ್ರತ ಏಕಾದಶಿ ವ್ರತ.

**ಏಕಾದಶ್ಯಾ ಮುಪವಸೇನ್ನ ಕದಾಚಿ ದತಿಕ್ರಮೇತ್:**ಏಕಾದಶಿಯಂದು ತಪ್ಪದೆ ಉಪವಾಸ ಮಾಡಬೇಕು.

**ಉಪವಾಸಃ ಸ ವಿಜ್ಞೇಯಃ ಸರ್ವಭೋಗ ವಿವರ್ಜಿತಃ:** ಸಕಲ ಭೋಗಗಳನ್ನು ತ್ಯಜಿಸಿ ಪುಣ್ಯ ಕಾರ್ಯ ಮತ್ತು ದೇವರ ಸೇವೆ ಮಾಡುವ ಸಂಕೇತ.

**ಏಕಾದಶ್ಯಾಮ್ನ ಭುಂಜೀತ ಪಕ್ಷಯೋರೂ ಭಯೋರಪಿ-** ಎರಡೂ ಪಕ್ಷದ ಏಕಾದಶಿಯಲ್ಲಿ ಭೋಜನ ಮಾಡಬಾರದು.ಹನ್ನೊಂದು ಇಂದ್ರಿಯಗಳಾದ ಪಂಚಕರ್ಮೇಂದ್ರಿಯ, ಪಂಚಜ್ಞಾನೇಂದ್ರಿಯ ಮತ್ತು ಹನ್ನೊಂದನೆಯ ಇಂದ್ರಿಯ ಮನಸ್ಸನ್ನು ಹತೋಟಿಯಲ್ಲಿ ಇಟ್ಟು ಸತ್ಕರ್ಮ, ಶ್ರೀಹರಿಯ ಪೂಜೆ ಧ್ಯಾನ ಮಾಡುವುದು ಏಕಾದಶಿ ವ್ರತದ ಮುಖ್ಯ ಉದ್ದೇಶ. ಆಹಾರ ಸೇವನೆ ಇಲ್ಲದೆ, ನಿಯಂತ್ರಿತ ಮನಸ್ಸಿನಿಂದ ಭಗವಂತನ ಸಮೀಪ ಸೇರುವ ವ್ರತ ಏಕಾದಶಿ ವ್ರತ. ಮನಸ್ಸು ಲಗ್ನವಾಗಿ ಭಗವಂತನ ಸಮೀಪಿಸಿದಾಗ ಜೀವಾತ್ಮ ಮೇಲೆ ಪರಮಾತ್ಮನ ಪ್ರಭಾವ ಪ್ರಸರಣೆ ಆಗುವುದು. ದ್ವಾದಶಿ ತಿಥಿಯಲಿ ಶ್ರೀಹರಿಗೆ ನೈವೇದ್ಯದ ನಂತರ ಪ್ರಸಾದವನು ಸ್ವೀಕರಿಸುವ ಮೂಲಕ ಮಂತ್ರಮಯವಾದ ವಾಸುದೇವ ತತ್ವವನ್ನು ಜೀವಾತ್ಮ ಅನುಭವಿಸಲು ಸಾಧ್ಯ. ಏಕಾದಶಿಯಂದು ಉಪವಾಸ ಸತ್ವ ಗುಣದ ಸಂಕೇತ. ಕರ್ಮಭಕ್ತಿ ಯೋಗದಿಂದ ದಿವ್ಯತ್ವವನ್ನು ಸಾಧನೆ ಮಾಡುವಾಗ ಮನಸ್ಸು ಅಡ್ಡಿ ಆಗುವುದು. ಸಂಕಲ್ಪ ವಿಕಲ್ಪಗಳ ಮಿಶ್ರಣ ಮನಸ್ಸು. ಇಂದ್ರಿಯಗಳಿಗೆ ಸೇವಜನಾಗದೇ ಇಂದ್ರಿಯಗಳಿಗೆ ಬುದ್ಧಿ ಅಧಿಪತಿ ಆಗಬೇಕು.ಬುದ್ಧಿಯನ್ನು ಮನಸ್ಸು ಅನು ಸಂಧಾನವಾಗಬೇಕು. ಕರ್ಮ ಗಿಡದಲ್ಲಿ ಅರಳುವ ಹೂವಂತೆ, ಭಕ್ತಿ ಹೂವಿನಿಂದ ಉದ್ಭವವಾಗುವ ಕಾಯಿ, ಜ್ಞಾನ ಮಾಗಿದ ಹಣ್ಣಂತೆ, ಇವೆಲ್ಲವೂ ವರುಸ ಕ್ರಮವಾಗಿ ನಡೆದು ಹೋಗುವವು.ಭಕ್ತ ಯೋಗವೆಂದರೆ ಭಗವಂತನ ಜೊತೆ ನಿಶ್ಚಲ ಭಕ್ತಿ ಅನು ಸಂಧಾನ ಮಾಡಿಕೊಳ್ಳುವುದು. ಕರ್ಮಾಪೇಕ್ಷೆ ಇಲ್ಲದೆ ಮನಸ, ವಾಚ, ಕರ್ಮಣಾ ತನ್ನನು ತಾನೇ ಭಗವಂತನಿಗೆ ಅರ್ಪಣೆ ಮಾಡುವುದೇ ಭಕ್ತಿಯೋಗ.

ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿ ಪೂರ್ವಕಮ್।
ದದಾಮಿ ಬುದ್ಧಿಯೋಗಂ ತಂ ಯೇನ ಮಾಮು ಪಯಾಂತಿ ತೇ ॥

ನಿರಂತರವಾಗಿ ನನ್ನ ಧ್ಯಾನಾದಿಗಳಲ್ಲಿ ತೊಡಗಿ, ಪ್ರೇಮದಿಂದ ಭಜಿಸುವ ಭಕ್ತರಿಗೆ ನಾನು ನನ್ನನ್ನು ಪಡೆಯುವ ತತ್ವ ಜ್ಞಾನರೂಪ ಯೋಗವನ್ನು ಕರುಣಿಸುತ್ತೇನೆ ಎಂದು ಶ್ರೀ ಕೃಷ್ಣಪರಮಾತ್ಮ ಭಗವದ್ಗೀತೆಯಲ್ಲಿ ಉಪದೇಶ ಮಾಡಿದ್ದಾರೆ. ಕರ್ಮವನ್ನು **ಯೋಗಃ ಕರ್ಮಸು ಕೌಶಲಂ** ಎಂದು ಉಪದೇಶ. ನಿರ್ದೇಶಿತ ಕೆಲಸವನ್ನು ಹೃದಯ ಪೂರ್ವಕವಾಗಿ ಶಕ್ತಿ ವಂಚನೆ ಇಲ್ಲದೆ ಮಾಡುವುದು ಯೋಗ. **"ಯೋಗಃ ಚಿತ್ತವೃತ್ತಿ ನಿರೋಧಃ"** ಬಾಹ್ಯ ಮತ್ತು ಅಂತರ ಇಂದ್ರಿಯಗಳನ್ನು ನಿಗ್ರಹಿಸಿ, ಬುದ್ಧಿಯನ್ನು, ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದೇ ಯೋಗ. **"ಸಮತ್ವಂ ಯೋಗ ಮುಚ್ಯತೇ"** ಎಲ್ಲ ಸಮಯ ಸಂದರ್ಭದಲ್ಲಿ ಸಮತ್ವ ಭಾವನೆಯಿಂದ ನಡೆದುಕೊಳ್ಳುವುದೇ ಯೋಗ. ಅರೋಗ್ಯರೀತ್ಯಾ,ಅಥವಾ ಬೇರೆ ಕಾರಣಗಳಿಂದ ಕಟಿಕ ಉಪ ವಾಸ (ನಿರಾಹಾರ) ಮಾಡಲು ಸಾಧ್ಯವಾಗದ ಸ್ಥಿತಿಯಲ್ಲಿ, ಹಾಲು, ಹಣ್ಣು ಸೇವನೆ ಮಾಡಬಹುದು. ಏಕಾದಶಿಯಂದು ಅನ್ನ ಸೇವನೆ ನಿಷಿದ್ಧ.

ಈಶಾವಾಸ್ಯೋಪನಿಷತ್‌ನಲ್ಲಿ ಭಗವಂತನ ವ್ಯಾಪ್ತಿ ವರ್ಣಿಸಿದಂತೆ:

ಈಶಾವಾಸ್ಯಮಿದಗಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್
ತೇನ ತ್ಯಕ್ತೇನ ಭುಂಜೀಥಾ ಮಾ ಗ್ರುಧಃ ಕಸ್ಯ ಸ್ವಿದ್ಧನಮ್

ಅಖಿಲ ಬ್ರಹ್ಮಾಂಡ ಜಗತ್ತು ಪರಮಾತ್ಮನಿಂದ ವ್ಯಾಪಿಸಿದೆ. ಸಮರ್ಪಣಾ ಬುದ್ಧಿಯಿಂದ ತ್ಯಾಗಪೂರ್ವಕವಾಗಿ, ಪ್ರಾಪ್ತವಾದ ಫಲವನ್ನು ಅನುಭವಿಸಿ ಜೀವಿಸಬೇಕು. ಆತ್ಮಸ್ವರೂಪವನ್ನು ಚಿಂತಿಸಬೇಕು. ಸಂಪದ, ಧನ, ಜಗತ್ತೆಲ್ಲ ಪರಮಾತ್ಮನಿಗೆ ಸೇರಿದ್ದು.

### ಆಷಾಢ ಶುದ್ಧ ಏಕಾದಶಿ (ಪ್ರಥಮ ಏಕಾದಶಿ)

ಆಷಾಢ ಶುದ್ಧ ಏಕಾದಶಿ ದಿನ ಶ್ರೀ ಹರಿ ಯೋಗನಿದ್ರೆ ಆರಂಭವಾಗಿ ಕಾರ್ತಿಕ ಶುದ್ಧ ಏಕಾದಶಿಯಂದು ಮುಕ್ತಾಯ ವಾಗುವುದು. ಆಷಾಢ ಶುದ್ಧ ಏಕಾದಶಿಯಿಂದ ಕಾರ್ತಿಕ ಶ್ರದ್ಧ ಏಕಾದಶಿಯವರೆಗೆ ನಾಲ್ಕು ತಿಂಗಳ ಕಾಲ ಚಾತುರ್ಮಾಸ್ಯ ಕಾಲ. ಆಷಾಢಶುದ್ಧ ಏಕಾದಶಿಯನ್ನು ಪಂಡರೀಪುರ ವಾಸ ಪಾಂಡುರಂಗ ವಿಠಲನ ಸನ್ನಿಧಿಯಲ್ಲಿ ತುಂಬಾ ಭಕ್ತಿಶ್ರದ್ಧೆಗಳಿಂದ ಆಚರಿಸಿ, ವಿಠಲನ ದರುಶನ ಮಾಡಲು ತಂಡೋಪತಂಡಗಳ ಭಕ್ತ ಕೋಟಿ ಪಂಡರೀಪುರಕ್ಕೆ ಬರುವರು. ಪುಂಡಲೀಕನ ಬೇಡಿಕೆಯಂತೆ ಚಂದ್ರ ಭಾಗ ತೀರದಲ್ಲಿ ಶ್ರೀಹರಿ ರುಕ್ಮಿಣಿ ಸಮೇತ ಪಾಂಡುರಂಗ ವಿಠಲ ಸ್ವಯಂಭೂ ರೂಪದಲ್ಲಿ ನೆಲೆಸಿದ್ದಾರೆ. ಚಂದ್ರಭಾಗ ನದಿಯಲ್ಲಿ ಸ್ನಾನ, ಉಪವಾಸ ಮತ್ತು ಪಾಂಡುರಂಗ ದೇವರ ದರ್ಶನ ಪರಮ ಪುಣ್ಯಪ್ರದ.

### ಉತ್ಥಾನ ಏಕಾದಶಿ (ದೇವ ಪ್ರಬೋಧ ಏಕಾದಶಿ)

ಕಾರ್ತಿಕ ಮಾಸದಲ್ಲಿ ಬರುವ ಮೊದಲನೆಯ ಏಕಾದಶಿ ಯನ್ನು ದೇವ ಪ್ರಬೋಧ ಏಕಾದಶಿ ಎನ್ನುವರು. ಶ್ರೀಹರಿ ದೇವತೆ ಗಳ ಜೊತೆಗೂಡಿ ತುಳಸಿ ಬೃಂದಾವನ ಪ್ರವೇಶ ಮಾಡುವು ದರಿಂದ ದ್ವಾದಶಿಯಂದು ಶ್ರೀಹರಿ ಮತ್ತು ಶ್ರೀ ತುಳಸಿ ಕಲ್ಯಾಣ, ಪೂಜೆ ಮಾಡುವರು. ಏಕಾದಶಿ ಉಪವಾಸ ಮತ್ತು ದ್ವಾದಶಿ ಪಾರಾಯಣಯುಕ್ತ ಶ್ರೀ ತುಳಸಿ ಪೂಜೆ ಮಂಗಳಕರ ಮತ್ತು ಅಕ್ಷಯ ಫಲದಾಯಕ.

### ಭಕ್ತ ಅಂಬರೀಶ

ಅಂಬರೀಷರು ಇಕ್ಷ್ವಾಕು ವಂಶದ ಮಹಾರಾಜರು, ಪ್ರಶಿ ಷ್ಯಕ ಮಹಾರಾಜರ ಪುತ್ರರು. ಅಂಬರೀಷರು ಮಹಾವಿಷ್ಣು ಭಕ್ತರು. ಶ್ರೀಹರಿಯ ಪೂಜೆ, ವ್ರತ, ಯಾಗ ಫಲದಿಂದ ಅಂಬ ರೀಶರ ಭಕ್ತಿಗೆ ಮೆಚ್ಚಿದ ಶ್ರೀ ಹರಿ ಅಂಬರೀಶರ ರಾಜ್ಯ ಸುಖ, ಶಾಂತಿ, ಸಿರಿ ಸಂಪದೆಗಳಿಂದ ಇರುವ ಹಾಗೆ ಸಂಪೂರ್ಣವಾಗಿ ದೈವ ಅನುಗ್ರಹ ಮತ್ತು ಸುದರ್ಶನ ಚಕ್ರ ರಕ್ಷೆಯನ್ನು ಅಂಬ ರೀಶರಿಗೆ ವರವಾಗಿ ಕೊಟ್ಟರು. ಒಂದು ದಿನ ಭಕ್ತ ಅಂಬರೀಶರು ಏಕಾದಶಿ ವ್ರತವ ಆಚರಿಸಿ ದ್ವಾದಶಿ ಪಾರಾಯಣ ಮಾಡಿ ವ್ರತ ದೀಕ್ಷೆ ವಿರಮಿಸಿ ನಗರದ ಪ್ರಜೆಗೆ ಅನ್ನದಾನ ಮಾಡುವ ಕಾರ್ಯ ದಲ್ಲಿದ್ದರು. ದ್ವಾದಶಿ ಘಳಿಗೆ ಬಂದಾಗ ಉಪವಾಸ ದೀಕ್ಷೆ ಮುಗಿ ಸಲು ಸಿದ್ಧರಾದರು. ದೂರ್ವಾಸ ಮಹಾಮುನಿ ಸಂಚರಿಸುತ್ತ ಹಠಾತ್ತಾಗಿ ಅಲ್ಲಿಗೆ ಬಂದರು. ಅಂಬರೀಶರು ಮುನಿಗೆ ನಮ ಸ್ಕರಿಸಿ ತಮ್ಮ ಅತಿಥಿಯಾಗಿ ಬಂದು ದ್ವಾದಶಿ ಪಾರಾಯಣದ ನಂತರ ತೀರ್ಥ ಪ್ರಸಾದ ಸ್ವೀಕರಿಸಲು ಬೇಡಿಕೊಂಡರು. ದೂರ್ವಾಸ ಮುನಿ ಸ್ನಾನ ಮುಗಿಸಿ ಬರುವವರೆಗೂ ಕಾದಿರ ಬೇಕು ಎಂದು ಆಜ್ಞೆ ಕೊಟ್ಟು ನದೀ ಪ್ರದೇಶಕ್ಕೆ ತೆರಳಿದರು. ವ್ರತ ದೀಕ್ಷ ವಿರಮಣ ಮಾಡಲು ನಿರ್ಣಯಿಸಿದ ಶುಭ ಮುಹೂರ್ತ ಸಮೀಪಿಸುತ್ತಿರಲು ಕುಲಗುರು ವಸಿಷ್ಠರ ಸೂಚನೆ ಮೇರೆಗೆ ಕೇವಲ ತುಳಸಿ ತೀರ್ಥ ಸೇವನೆ ಮಾಡಿ ದೀಕ್ಷೆ ಮುಗಿಸಿ ದೂರ್ವಾಸ ಮುನಿಗಾಗಿ ಕಾಯುತ್ತಿದ್ದರು. ಆದರೆ ದೂರ್ವಾಸ ಮುನಿ ನಡೆದದ್ದು ದಿವ್ಯ ದೃಷ್ಟಿಯಿಂದ ಗ್ರಹಿಸಿ ಅಂಬರೀಶ ರಾಜರು ತಪ್ಪು ಮಾಡಿದರು ಮತ್ತು ಅತಿಥಿಗೆ ಅವಮಾನವಾಗಿದೆ, ಎಂದು ಕೋಪಿತರಾದರು. ಆಗ್ರಹದಿಂದ ಮುನಿ ರಾಕ್ಷಸನನ್ನು ಸೃಷ್ಟಿ ಮಾಡಿ ಅಂಬರೀಷರ ವಧೆ ಮಾಡಲು ಆಜ್ಞಾಪಿಸಿದರು. ರಾಕ್ಷ ಸನ್ನು ಅಂಬರೀಶರ ಬಳಿ ಬಂದಾಗ ಶ್ರೀ ಹರಿ ಸುದರ್ಶನ ಚಕ್ರ ರಕ್ಷಣೆ, ವರಪ್ರಭಾವಿತವಾದುದರಿಂದ ಸುದರ್ಶನ ರಾಕ್ಷಸನನ್ನು ಸಂಹರಿಸಿ ದೂರ್ವಾಸ ಮುನಿಯನ್ನು ಹಿಂಬಾಲಿಸತೊಡಗಿತು. ಮುನಿ ಪ್ರಾಣ ಭಯದಿಂದ ಬ್ರಹ್ಮಲೋಕ, ಕೈಲಾಸದಲ್ಲಿ ಬ್ರಹ್ಮ ದೇವರನ್ನು ಪರಮೇಶ್ವರರನ್ನು ರಕ್ಷಿಸಲು ಬೇಡಿಕೊಂಡಾಗ, ವೈಕುಂಠನಾಥ ಶ್ರೀ ಹರಿಯ ಬಳಿ ಹೋಗಲು ಸೂಚನೆ ನೀಡಿದರು. ಮುನಿ ವೈಕುಂಠಕ್ಕೆ ತೆರಳಿ ಶ್ರೀಹರಿಯನ್ನು ಸುದರ್ಶನ ಬಾಧಿಯಿಂದ ಕಾಪಾಡಲು ಪ್ರಾಣ ಭಿಕ್ಷೆ ಯಾಚಿಸಿದರು. ಶ್ರೀ ಹರಿ ಮುನಿಯನ್ನು ನೋಡುತ್ತಾ, ಭಕ್ತ ಪರಾಧೀನನಾದ ನಾನು ಏನೂ ಮಾಡಲಾರೆ! ಯಾರ ಕಾರಣದಿಂದ ಸುದರ್ಶನ ರಕ್ಷಣೆಗಾಗಿ ಬಂದಿದೆಯೋ ಅವರನ್ನೇ ಶರಣು ಹೋಗಲು ಸೂಚಿಸಿದರು. ದೂರ್ವಾಸ ಮುನಿ ಅಂಬರೀಶರ ಬಳಿ ಬಂದು ನಡೆದು ಘಟನೆಗೆ ಕ್ಷಮೆ ಯಾಚಿಸಿದಾಗ, ಭಕ್ತ ಅಂಬರೀಷ ಶ್ರೀಹರಿಯನ್ನು ಪ್ರಾರ್ಥಿ ಸಿದರು. ಸುದರ್ಶನ ಚಕ್ರ ಉಪಸಂಹಾರವಾಗಿ ಮುನಿಗೆ ಭಯ ಭೀತವಾದ ಪ್ರಾಣಭಯ ಹೋಗಿ ಸಂತುಷ್ಟರಾದರು. ಭಗ ವಂತನ ಭಕ್ತಿಗೆ ಪರಮಾತ್ಮನ ಕೃಪೆ, ಅಭಯ ಎಂದಿಗೂ ಇರು ವುದು ಎನ್ನುವುದಕ್ಕೆ ಅಂಬರೀಶರ ವ್ರತ, ಶ್ರೀಹರಿಯ ರಕ್ಷಣೆಯ ಅಭಯ ನಿರ್ವಚನ.

## ಭೀಷ್ಮ ಏಕಾದಶಿ

ಮಾಘಶುಕ್ಲ ಏಕಾದಶಿಯನ್ನು ಭೀಷ್ಮ ಏಕಾದಶಿ ಎಂದು ಕರೆಯುವರು. ಭೀಷ್ಮ ಪಿತಾಮಹ ನಿಷ್ಠಾ ಗರಿಷ್ಟ, ಬ್ರಹ್ಮಚಾರಿ ಮತ್ತು ಪಿತೃವಾಕ್ಯ ಪರಿಪಾಲನೆ ಮಾಡಿದ ಮಹಾನುಭಾವರು. ಅಷ್ಟವಸುವರಲ್ಲಿ ಒಬ್ಬರು.ತಂದೆಗೆ ಕೊಟ್ಟ ಮಾತಿಗೆ ಆಜನ್ಮ ಬ್ರಹ್ಮಚಾರಿಯಾಗಿ ಕುರುವಂಶದ ರಕ್ಷಣೆ ಮಾಡುತ್ತ ಭಗವಂತನ ಸೇವೆ ಮಾಡುವ ವೀರಯೋಧ ಭೀಷ್ಮ ಪಿತಾಮಹ. ಶ್ರೀ ರಾಮ ಚಂದ್ರ ಪ್ರಭು ಪಿತೃವಾಕ್ಯ ಪರಿಪಾಲನೆ ಮಾಡಲು ಅರಣ್ಯಕ್ಕೆ ತೆರಳಿರುವುದನ್ನು ಇಲ್ಲಿ ಸ್ಮರಿಸಬೇಕು.

ಕುರುಕ್ಷೇತ್ರ ಸಂಗ್ರಾಮದಲ್ಲಿ ಧನುರ್ವಿದ್ಯಾ ಪ್ರಾವೀಣ್ಯ ಹೊಂದಿರುವ ಭೀಷ್ಮರ ಮುಂದೆ ನಿಂತು ಯುದ್ಧ ಮಾಡುವ ಸಾಹಸ ಯಾರಿಗೂ ಇಲ್ಲ. ಧರ್ಮರಾಜ ಭೀಷ್ಮ ಪರಾಕ್ರಮ ದಿಂದ ಪಾಂಡವರ ಸೇನೆ ಗಾಯಗೊಳ್ಳುವುದನ್ನು ಪ್ರಸ್ತಾಪಿಸಿ ಸಹಾಯ ಮಾಡಲು ಭೀಷ್ಮರನ್ನು ಬೇಡಿಕೊಂಡರು. ಶಿಖಂಡಿಯನ್ನು ಯುದ್ಧ ಭೂಮಿಯಲ್ಲಿ ಕಂಡಾಗ ಅಸ್ತ್ರ ಸನ್ಯಾಸ ಮಾಡುವೆನು ಎಂದು ನುಡಿದರು. ಇದನ್ನು ತಿಳಿದ ಪಾಂಡವರು ಶಿಖಂಡಿಯನ್ನು ಯುದ್ಧ ಭೂಮಿಗೆ ಕರೆತರಲು ಭೀಷ್ಮರು ಶಸ್ತ್ರಾಸ್ತ್ರ ಗಳನ್ನು ಬಿಟ್ಟರು. ಅರ್ಜುನನಿಂದ ಭೀಷ್ಮಾಚಾರ್ಯರ ಮೇಲೆ ಬಾಣಗಳ ಸುರಿಮಳೆ ಆಯಿತು. ಭೀಷ್ಮರು ರಥವನ್ನು ಬಿಟ್ಟು ದೇಹದಲ್ಲಿ ಹೊಕ್ಕ ಬಾಣಗಳ ನೋವನು ಸಹಿಸುತ್ತ ಯುದ್ಧ ಭೂಮಿಯಿಂದ ಹೊರ ಬಂದು ಬಾಣಗಳನ್ನೇ ಹಾಸಿಗೆ ಮಾಡಿ ಕೊಂಡು ಮಲಗಿದರು.ಭೀಷ್ಮರಿಗೆ ಇಚ್ಛಾ ಮರಣ ವರವಿದೆ. ಅಂತ್ಯಕಾಲವನ್ನು ತಾವೇ ನಿರ್ಣಯಿಸಬಹುದು. ದಕ್ಷಿಣಾಯನ ಕಾಲ ಮರಳಿ ಉತ್ತರಾಯಣ ಪುಣ್ಯ ಕಾಲಕ್ಕಾಗಿಕಾದರು. 50 ದಿನಗಳ ಕಾಲ ನಿರೀಕ್ಷಣೆ ಮಾಡಿ ಏಕಾದಶಿ ದಿನ ದೇಹ ತ್ಯಾಗ ಮಾಡಲು ನಿರ್ಣಯಿಸಿದರು.ಧರ್ಮರಾಜ ಸಹೋದರ ನೊಡನೆ,ಶ್ರೀ ಕೃಷ್ಣನ ಜೊತೆ ಭೀಷ್ಮರನ್ನು ನೋಡಲು ಬಂದರು. ಏಕಾದಶಿಯ ದಿನ ವಿಷ್ಣು ಸಹಸ್ರ ನಾಮವನ್ನು ಧರ್ಮರಾಜರಿಗೆ ಉಪದೇಶ ಮಾಡಿದರು. ಭಗವಂತನಾದ ಶ್ರೀ ಕೃಷ್ಣನ ಎದುರು ವಿಷ್ಣು ಸಹಸ್ರನಾಮ ಉಪದೇಶ ಮತ್ತು ಶ್ರೀ ಕೃಷ್ಣನ ಆಮೋದ ಒಂದು ವಿಶೇಷ ಘಟನೆ. ಧರ್ಮರಾಜರು ಭೀಷ್ಮರನ್ನು ಕೆಲವು ಪ್ರಶ್ನೆ ಕೇಳಿದರು.ಯಾರನು ಪೂಜೆ ಮಾಡಬೇಕು.? ಸ್ತುತಿಸ ಬೇಕು? ಅರ್ಚನೆ ಮಾಡಬೇಕು?ಯಾವ ಕರ್ಮದಿಂದ ಮಾನ ವರಿಗೆ ಶುಭವಾಗುವುದು, ಎಲ್ಲ ಧರ್ಮಗಳಲ್ಲಿ ಉತ್ತಮವಾದ ಧರ್ಮ ಯಾವುದು? ಯಾವ ಜಪದಿಂದ ಮನುಷ್ಯ ಸಂಸಾರ ಬಂಧಗಳಿಂದ ವಿಮುಕ್ತಿ ಹೊಂದುವರು?

ಭೀಷ್ಮ ಪಿತಾಮಹ ನುಡಿದರು. "ಜಗತ್ ಪ್ರಭುಮ್ ದೇವದೇವಂ ಅನಂತಂ ಪುರುಷೋತ್ತಮಂ, ಅನಾದಿ ನಿಧನಂ ವಿಷ್ಣುಮ್ ಸರ್ವಲೋಕ ಮಹೇಶ್ವರಂ, ಲೋಕಾ ಧ್ಯಕ್ಷಮ್ ಸ್ತುವನ್ನಿತ್ಯಂ ಸರ್ವ ದುಃಖಾತಿಗೊಭವೇತ್"

ಆದಿ, ಅಂತ್ಯವಿಲ್ಲದ, ಸರ್ವ ವ್ಯಾಪ್ತನಾದ, ದೇವ ದೇವ ನಾದ ಭಗವಂತ ಶ್ರೀ ಮಹಾವಿಷ್ಣು ಸ್ತುತಿಯಿಂದ ಸರ್ವದುಃಖ ಪರಿಹಾರ ಆಗುವುದು.

"ಏಷಮೇ ಸರ್ವ ಧರ್ಮಾನಾಮ್ ಧರ್ಮೋಧಿಕ ತಮೋ ಮತಃ - ಎಲ್ಲ ಧರ್ಮಗಳಲ್ಲಿ ಇದೇ ಉತ್ತಮ ಧರ್ಮ ಎಂದು ನುಡಿದರು. ವಿಷ್ಣು ಸಹಸ್ರನಾಮ ಉಪದೇಶಿಸಿ, ಏಕಾದಶಿ ಘಳಿಗೆಯಲ್ಲಿ ಮೋಕ್ಷ ಪ್ರಾಪ್ತಿಗಳಿಸಿದರು ಭೀಷ್ಮ ಪಿತಾಮಹ. ಹೀಗಾಗಿ ಈ ಏಕಾದಶಿಗೆ "ಭೀಷ್ಮ ಏಕಾದಶಿ" ಎಂದು ಹೆಸರು ಬಂದಿದೆ.

## ವೈಕುಂಠ ಏಕಾದಶಿ

ಪುಷ್ಯ ಶುದ್ಧ ಏಕಾದಶಿ ತಿಥಿಯಂದು ವೈಕುಂಠ ಏಕಾದಶಿ ಅಥವಾ ಮುಕ್ಕೋಟಿ ಏಕಾದಶಿ ಎಂದು ಆಚರಿಸಲಾಗುವುದು. ಇಂದಿನ ದಿನ ದೇವತೆಗಳು ವೈಕುಂಠದ ಉತ್ತರ ದ್ವಾರದಿಂದ ಶ್ರೀ ಹರಿಯ ದರುಶನ ಮಾಡುವರೆಂದು ಪುರಾಣ ಕಥನ. ಇದೇ ಪದ್ಧತಿಯನ್ನು ಭುವಿಯಲ್ಲಿ ವೈಷ್ಣವ ಮಂದಿರಗಳಲ್ಲಿ ಉತ್ತರ ದ್ವಾರವನ್ನು ಅಲಂಕರಿಸಿ ಭಕ್ತಾದಿಗಳಿಗೆ ದರುಶನ ಮಾಡುವ ವ್ಯವಸ್ಥೆ ಮಾಡಲಾಗುವುದು. ತಿರುಮಲೆ ಶ್ರೀನಿವಾಸ ದೇವರ ಸನ್ನಿಧಿಯಲ್ಲಿ ಉತ್ತರ ದ್ವಾರವನ್ನು ವೈಕುಂಠ ಏಕಾದಶಿಯ ದಿನ ಮಾತ್ರ ತೆರೆದು ಭಕ್ತ ಕೋಟಿಗೆ ಉತ್ತರ ದ್ವಾರ ದರ್ಶನ ಮಾಡಿ ಕೊಳ್ಳುವ ವ್ಯವಸ್ಥೆ ಮಾಡಲಾಗುವುದು. ಏಕಾದಶಿಯಂದು ಪ್ರಾತಃಸ್ನಾನ ಮಾಡಿ ತುಳಸಿಯನ್ನು ಅರ್ಪಿಸಿ, ವಿಷ್ಣುವಿಗೆ ಪೂಜೆ ಸಲ್ಲಿಸಿ, ದಿನಪೂರ್ತಿ ಉಪವಾಸ ಇರುತ್ತಾರೆ. ಏಕಾದಶಿಯಂದು ಉಪವಾಸ, ಗೀತಾ ಪಾರಾಯಣ, ವಿಷ್ಣು ಸಹಸ್ರನಾಮ, ತುಳಸಿ ತೀರ್ಥ ಸೇವನೆ ಮತ್ತು ಹರಿಸ್ಮರಣೆ ಮಾಡುವುದರಿಂದ ಶ್ರೀ ಹರಿಯ ಕೃಪಾಕಟಾಕ್ಷ ಲಭಿಸುವುದು. ವೈಕುಂಠ ಏಕಾದಶಿಯ ದಿನ ಪೂಜೆ ಮಾಡಿ ದ್ವಾದಶಿ ಘಳಿಗೆಯಲ್ಲಿ ಭಕ್ಷ್ಯಗಳನ್ನು ನಿವೇದನೆ ಮಾಡಿ ವಿಷ್ಣು ಪಾರಾಯಣ ಮಾಡಬೇಕು ಮಂತ್ರವ ಉಚ್ಚರಿಸಿ.

"ಏಕಾದಶ್ಯಾಮ್ ನಿರಾಹಾರೋ ಭೂತ್ವಾಹ ಮಪರೇಹನಿ ಭೋಕ್ಷ್ಯಾಮಿ ಪುಂಡರೀಕಾಕ್ಷ ಶರಣಂ ಮೇ ಭಾವ ಚ್ಯುತಾ".

ಶ್ರೀಹರಿಗೆ ಪುಷ್ಪವನ್ನು ತುಳಸಿಯನ್ನು ಸಮರ್ಪಣೆ ಮಾಡ ಬೇಕು. ಜೇಷ್ಠಮಾಸದಲ್ಲಿ ಶುಕ್ಲ ಪಕ್ಷದಂದು ನಿರ್ಜಲ ಏಕಾದಶಿ ವ್ರತವನ್ನು ಭೀಮಸೇನರು ಆಚರಿಸಿದರು. ಅಂದಿನಿಂದ ಪಾಂಡವ ನಿರ್ಜಲ ಏಕಾದಶಿ ಎಂದು ಹೆಸರು ಬಂದಿದೆ.

ಶ್ರೀ ಕೃಷ್ಣ ಭಕ್ತ ಕುಚೇಲ ಏಕಾದಶಿ ವ್ರತ ಆಚರಿಸಿ ಬಡತನದಿಂದ ಪಾರಾದರು. ಧರ್ಮರಾಜರು ಏಕಾದಶಿ ವ್ರತದಿಂದ ಅನೇಕ ಸಂಕಟಗಳಿಂದ, ಆಪತ್ತುಗಳಿಂದ ರಕ್ಷಿಸಲ್ಪಟ್ಟರು. ರುಕ್ಮಾಗಂದರು ಏಕಾದಶಿ ವ್ರತ ಆಚರಿಸಿ ಸಂತಾನ ಪಡೆದು ಮೋಕ್ಷಗಾಮಿ ಆದರು. ವೈಖಾನಸ ರಾಜರು ಏಕಾದಶಿ ವ್ರತ ಫಲದಿಂದ ಪಿತೃಗಳಿಗೆ ನರಕದಿಂದ ಮೋಕ್ಷ ಕೊಟ್ಟರು.

ಏಕಾದಶಿ ವ್ರತವನ್ನು ನಿಯಮ, ನಿಷ್ಠೆಯಿಂದ ಆಚರಿಸಿದವರಿಗೆ ಸಕಲ ಬಾಧೆಗಳಿಂದ ವಿಮುಕ್ತಿ ಪಡೆದು ಮರಣಾನಂತರ ವೈಕುಂಠ ಪ್ರಾಪ್ತಿ ಲಭಿಸುವುದು. ಫಲದಾಯಕ ಸುಲಭ ವ್ರತವಾದ ಏಕಾದಶಿ ವ್ರತ ಆಚರಿಸಿ ಶ್ರೀ ಹರಿಯ ಕೃಪೆಗೆ ಪಾತ್ರರಾಗೋಣ!

..........ವೈಕುಂಠ ಪತಿಗೆ ಮಂಗಳಂ ! ಲಕ್ಷ್ಮೀನಾರಾಯಣ ಶುಭಮಂಗಳಂ!.....







ನಮ್ಮ ದೇವಾಲಯ

# ತಿರುಮಲೆಯ ಪ್ರತಿರೂಪ ದೇವುನಿಕಡಪ


- ತೆಲುಗು ಮೂಲ ಪಿ. ನಾಗಾಂಜನೇಯುಲು
- ಅನುವಾದ : ಶ್ರೀಮತಿ. ಗೀತಾ
8277334079


ನಮ್ಮ ದೇಶದಲ್ಲಿ ಅದೆಷ್ಟೋ ಆಧ್ಯಾತ್ಮಿಕ ಕ್ಷೇತ್ರಗಳಿವೆ. ಅವುಗಳಲ್ಲಿ ಪ್ರಮುಖ ಪ್ರಾಂತ್ಯಗಳಲ್ಲೊಂದಾದ ನಮ್ಮ ಜಿಲ್ಲೆಗೆ ಹೊಂದಿ ಕೊಂಡಿರುವ ದೇವುನಿ ಕಡಪದ ಶ್ರೀ ವೇಂಕಟೇಶ್ವರ ಸ್ವಾಮಿಯ ಆಲಯವೂ ಒಂದು. ವಿಶೇಷ ಖ್ಯಾತಿಯ ಕಾರಣದಿಂದ, ಪುರಾಣ ಪ್ರಸಿದ್ಧಿಯ ಕಾರಣದಿಂದಾಗಿ ಇದೊಂದು ಪರ್ಯಟನಾ ಕೇಂದ್ರವಾಗಿ ಹೆಸರು ಪಡೆದಿದೆ. ಇದನ್ನು ತಿರುಮಲೆಯ ಪ್ರತಿರೂಪವಾಗಿ ಭಾವಿಸುತ್ತಾರೆ. ತಿರುಮಲೆ ಕ್ಷೇತ್ರ ಪಾಲಕನು ಶ್ರೀವರಾಹಸ್ವಾಮಿಯಾದರೆ ಈ ಕ್ಷೇತ್ರದ ಪಾಲಕ ಹನುಮಂತನು. ಇಂತಹ ಇನ್ನೆಷ್ಟೋ ವಿಶೇಷತೆಗಳುಂಟು ಈ ಕ್ಷೇತ್ರಕ್ಕೆ. ಈ ಕುರಿತಾಗಿ ಕಡಪ ಚರಿತ್ರೆಯಲ್ಲಿ ಮಾಹಿತಿಯಿದೆ.

**ಜನಮೇಜಯ ಪ್ರತಿಷ್ಠಾಪನೆ:** ದೇವುನಿ ಕಡಪದ ಶ್ರೀ ವೇಂಕಟೇಶ್ವರ ಸ್ವಾಮಿಯ ಆಲಯದ ಮೂಲ ವಿಗ್ರಹವನ್ನು ಸಾಕ್ಷಾತ್ ಜನಮೇಜಯನೇ ಪ್ರತಿಷ್ಠಾಪಿಸಿದ್ದಾನೆಂದು ಕಡಪ ಶಾಸನಗಳಲ್ಲಿದೆ. ಇದರ ಮಾಹಿತಿ ಪ್ರಕಾರ, ಈ ಕ್ಷೇತ್ರಕ್ಕೆ ' ದೇವುನಿಕಡಪ' ವೆಂಬ ಹೆಸರುಂಟು ಕಾಲಕ್ರಮೇಣ ಕಡಪ ಗಡಪವೆಂದು ಪರಿವರ್ತನೆ ಹೊಂದಿದೆ. ಜನಮೇಜಯನು ಪುಣ್ಯ ಕ್ಷೇತ್ರಗಳನ್ನು ದರ್ಶಿಸುತ್ತಾ ತಿರುಮಲೆಗೆ ಬಂದಿದ್ದಾನೆಂದೂ, ಸ್ವಾಮಿಯ ದರ್ಶನೆ ಪಡೆದು ಆ ರಾತ್ರಿ ಅಲ್ಲಿಯೇ ನಿದ್ರೆ ಮಾಡಿದ್ದಾನೆಂದು ಕನಸಿನಲ್ಲಿ ಶ್ರೀ ವೇಂಕಟೇಶ್ವರನು ಕಾಣಿಸಿ ತಿರುಮಲೆಯ ಹೊರ ಕಟ್ಟೆಯ ಕೆಳಗಡೆ ತೋಡಿದರೆ ವಿಗ್ರಹವೊಂದು ಕಾಣಸಿಗವುದಾಗಿಯೂ ಅದನ್ನು ಸೂಕ್ತವಾದ ಜಾಗದಲ್ಲಿ ಪ್ರತಿಷ್ಠಾಪಿಸಬೇಕೆಂದೂ ಸೂಚಿಸಿದಂತೆ ತಿಳಿದು ಬರುತ್ತದೆ. ಬೆಳಗಾಗುತ್ತಲೇ ಆತನು ಹೊರಕಟ್ಟೆಯ ಅನತಿ ದೂರದಲ್ಲಿ ತೋಡಿ ಹುದುಗಿ ಹೋಗಿದ್ದ ಶ್ರೀ ವೇಂಕಟೇಶ್ವರ ವಿಗ್ರಹವನ್ನು ಗಮನಿಸಿ ಪ್ರತಿಷ್ಠೆ ಮಾಡಲು ಸೂಕ್ತವಾದ ಸ್ಥಳಕ್ಕಾಗಿ ಶೋಧನೆ ನಡೆಸಿದ್ದಾನೆ.

ತಿರುಮಲೆಗೆ ವಾಯುವ್ಯ ದಿಕ್ಕಿಗೆ ಹತ್ತು ಗಾವುದ (ಗಾವುದ ಅಂದರೆ ಹತ್ತು ಮೈಲಿಗಳು) ದೂರದಲ್ಲಿ ಪುಷ್ಕರಿಣಿ ಸಹಿತವಾದ ವಾಯುಪುತ್ರ ಆಂಜನೇಯನ ಕ್ಷೇತ್ರವಿರುವುದೆಂದು ತಿಳಿದುಕೊಂಡು ಆ ವಿಗ್ರಹವನ್ನು ಅಲ್ಲಿಯೇ ಪ್ರತಿಷ್ಠಾಪಿಸುವುದು ಸೂಕ್ತವೆಂದು ಭಾವಿಸಿದ್ದಾನೆ. ಇದಕ್ಕೆ ನಿದರ್ಶನವಾಗಿ ಇಂದಿಗೂ ಕಡಪರಾಯನ ಮೂಲವಿಗ್ರಹದ ಹಿಂದೆ ಹತ್ತು ಅಡಿದೂರದಲ್ಲಿ ಎತ್ತರದ ಸ್ಥಳದಲ್ಲಿ ಆಂಜನೇಯನ ವಿಗ್ರಹವಿದೆ. ಪೂರ್ವದಲ್ಲಿ ಈ ಸ್ವಾಮಿಯನ್ನು ಕಡಪ ವೇಂಕಟೇಶನೆಂದೇ ಕರೆಯುತ್ತಿದ್ದರು. ಆಂಜನೇಯನು ಶಿವನ ಅಂಶವನ್ನಡಗಿಸಿಟ್ಟು ಕೊಂಡವನ್ನಾರಿಂದ ಸ್ವಾಮಿಯ ಆಲಯದ ಪಕ್ಕದಲ್ಲೇ ಶಿವಾಲಯವನ್ನು ನಿರ್ಮಿಸಲಾಗಿದೆ.

ಈ ಆಲಯದ ಮುಖ ಮಂಟಪ ಅದ್ಭುತವಾದ ಶಿಲ್ಪಕಲಾ ಸಂಯೋಗದಿಂದ ಕಣ್ಮನ ಸೆಳೆಯುತ್ತದೆ. ಬ್ರಹ್ಮೋತ್ಸವದ ಸಂದರ್ಭದಲ್ಲಿ ಆಲಯದ ರಂಗಮಂಟಪ, ಆಲಯದ ಪ್ರಾಂಗಣದಲ್ಲಿರುವ ಇತರೆ ಮಂದಿರಗಳು ಕಂಗೊಳಿಸುತ್ತವೆ. ರಂಗಮಂಟಪದಂತಹ ಕಲಾಶಿಲ್ಪಗಳ ನೆನಪಿಸುವ ನೃತ್ಯ ಸಂಗೀತಗಳಿಗೆ ಸಂಬಂಧಿಸಿದ ಶಿಲ್ಪಿಗಳು ಕಾಣಸಿಗುತ್ತವೆ. ಅಲ್ಲಿಯ ಕ್ಷೇತ್ರಪಾಲಕನಾದ ಹನುಮಂತನು, ಈ ಕಡೆ ದಶಾವತಾರಗಳು, ಮಹರ್ಷಿಗಳ ಶಿಲ್ಪಗಳನ್ನು ಕೂಡಾ ಮಂಟಪದ ಸ್ತಂಭಗಳ ಮೇಲೆ ನೋಡಬಹುದು.

ದೇವುನಿಕಡಪದ ಶ್ರೀಲಕ್ಷ್ಮೀವೇಂಕಟೇಶ್ವರ ಸ್ವಾಮಿ ಆಲಯದಲ್ಲಿ ಬಹಳಷ್ಟು ಪ್ರಾಚೀನ ಶಾಸನಗಳಿವೆ. ಆಲಯದ ಇತಿಹಾಸವನ್ನು ತಿಳಿಸುತ್ತಾ ಅಂದಿನ ರಾಜರುಗಳ ಆಧ್ಯಾತ್ಮಿಕ ಚಿಂತನೆ, ಆಲಯದ ಪೋಷಣೆಯ ಕುರಿತು ತಿಳಿಸುವ ಇಂದಿಗೂ ಅಚ್ಚಳಿಯದೇ ನಿಂತಿರುವರ ಆ ಶಾಸನಗಳು ಆಲಯದ ವಿಶಿಷ್ಟತೆಗಳನ್ನು ಕೊಂಡಾಡುತ್ತಿವೆ. ಈ ಶಾಸನಗಳ ಕುರಿತು ಇಷ್ಟಕ್ಕೂ ಮೊದಲೆಲ್ಲೂ ಪ್ರಚಾರವಿಲ್ಲ. ಕಡಪ ಜಿಲ್ಲೆಯ ಶಾಸನಗಳ ಗ್ರಂಥಗಳ ಮಾಹಿತಿಯೊಂದಿಗೆ ಕಡಪ ಚರಿತ್ರೆಯಲ್ಲಿ ಈ ಶಾಸನಗಳನ್ನು ಕುರಿತು ಸಹಾ ಕ್ಲುಪ್ತವಾದ ಪ್ರಸ್ತಾಪನೆ ಇವೆ.

**ಅಪರ ವೈಕುಂಠ:** ಅಪರ ವೈಕುಂಠವಾಗಿ ಕಂಗೊಳಿಸುತ್ತಿರುವ ಶ್ರೀನಿವಾಸನ ಪ್ರತಿರೂಪವೇ ಕಡಪರಾಯ ಶ್ರೀ ಲಕ್ಷ್ಮಿ ವೇಂಕಟೇಶ್ವರಸ್ವಾಮಿ. ಆ ಬ್ರಹ್ಮಾಂಡ ನಾಯಕನ ಕ್ಷೇತ್ರವೆಲ್ಲಾ ಅಪರ ವೈಕುಂಠವೇ.. ದೇವುನಿ ಕಡಪ ಶ್ರೀ ಲಕ್ಷ್ಮಿ ವೇಂಕಟೇಶ್ವರ ಸ್ವಾಮಿ ಆಲಯದ ಪ್ರಾಂಗಣವು ವೈಕುಂಠವನ್ನು ನೆನಪಿಸುತ್ತದೆ. ತಿರುಮಲೆಯ ಪ್ರತಿರೂಪವೆಂದೇ ಭಾವಿಸಲಾಗುವ ಈ ಕ್ಷೇತ್ರದಲ್ಲಿ ನೆಲೆನಿಂತಿರುವ ಕಡಪರಾಯನನ್ನು ಪೂಜಿಸಿದರೆ ಸಾಕ್ಷಾತ್ ತಿರುಮಲೇಶನನ್ನು ಪೂಜಿಸಿದಂತೆಯೇ ಎಂದು ಹೇಳುತ್ತಾರೆ. ತಿರುಮಲೆಗೆ ಹೋಗುವ ಮೊದಲು ಈ ಪ್ರಾಂತ್ಯಕ್ಕೆ ಸೇರಿದ ಭಕ್ತರು ಈ ಕಡಪರಾಯನನ್ನು ಸಂದರ್ಶಿಸಿ ಪ್ರಯಾಣಗೈಯುವುದು ವಾಡಿಕೆ. ಉತ್ತರ ಪ್ರಾಂತ್ಯದಿಂದ ತಿರುಮಲೆಗೆ ತೆರಳುವ ಭಕ್ತರು ಕಡಪ ನಗರದಲ್ಲಿರುವ ಈ ಕ್ಷೇತ್ರದಲ್ಲಿ ವಿರಮಿಸಿ ತದನಂತರ ಸ್ವಾಮಿಯವರನ್ನು ದರ್ಶಿಸಿಕೊಂಡು ತಿರುಮಲೇಶನ ಸನ್ನಿಧಿಗೆ ಪಯಣಿಸುವವರೆಂದು ತಿಳಿದು ಬರುತ್ತದೆ. ಯಾವುದಾದರೊಂದು ಕಾರಣಕ್ಕೆ ತಿರುಮಲೆಗೆ ಹೋಗಲಾರದವರು ಇಲ್ಲಿಯೇ ಹರಕೆಗಳನ್ನು ಪೂರೈಸುತ್ತಾರೆ.ಇಂದಿಗೂ ಈ ವಾಡಿಕೆ ಚಾಲ್ತಿಯಲ್ಲಿದೆ.

**ಆಲಯದಲ್ಲಿ:** ಗರ್ಭಗುಡಿಯ ಎದುರಿಗಿರುವ ರಂಗಮಂಟಪವು ಸಂಪೂರ್ಣ ಉಚ್ಚಸ್ಥಾಯಿ ಶಿಲ್ಪಕಲಾ ಸಂಪದದೊಂದಿಗೆ ಕಂಗೊಳಿಸುತ್ತದೆ. ಭಕ್ತರು ಸ್ವಲ್ಪ ಹೊತ್ತಾದರೂ ಈ ಪ್ರಾಂಗಣದಲ್ಲಿ ಕುಳಿತು ಪ್ರಶಾಂತತೆಯನ್ನು ಹೊಂದಬೇಕೆಂದು ಆಶಿಸುತ್ತಿರುತ್ತಾರೆ. ಆಲಯದ ಉತ್ತರ ದಿಕ್ಕಿಗೆ ಪ್ರವೇಶಕ್ಕೆ ಹತ್ತಿರದಲ್ಲಿ ಮರದ ಕೆಳಗೆ ನಾಗಗಳ ವಿಗ್ರಹಗಳಿವೆ. ಅದರ ಪಕ್ಕದಲ್ಲೇ ಸ್ವಾಮಿಯ ಸರ್ವಸೇನಾನಿ ವಿಶ್ವಕ್ಸೇನನ ಮಂದಿರವು. ಶ್ರೀ ಗಣಪತಿಯ ಮಂದಿರವು ಇದೆ. ಇವೆರಡೂ ದಕ್ಷಿಣಾಭಿಮುಖವಾಗಿವೆ. ನಂತರ ಉತ್ತರ ದ್ವಾರದ ಬಳಿ

ಶ್ರೀ ಆಂಡಾಳ್ ತಾಯಾರ್ ಅಮ್ಮನವರ ಮಂದಿರ ಪಶ್ಚಿಮಾಭಿಮುಖವಾಗಿ ಇದೆ. ಈ ಮಂದಿರಗಳ ಮಂಟಪಗಳು, ಗೋಡೆಗಳ ಶಿಲ್ಪಕಲಾಮಯವಾಗಿ ಕಂಡು ಬರುತ್ತದೆ. ಸ್ವಾಮಿಯ ದರ್ಶನಕ್ಕೂ ಮೊದಲು ಭಕ್ತರು ಈ ಗುಡಿಗಳಲ್ಲಿಯೂ ಸಹಾ ಪೂಜೆಗಳನ್ನು ನೆರವೇರಿಸುತ್ತಾರೆ.

**ಪಾದ ಮಂಡಪ:** ರಾಜಗೋಪುರದಿಂದ ಆಲಯದೊಳಗೆ ಅಡಿಯಿಡುತ್ತಲೇ ಎದುರಾಗಿ ಪಾದ ಮಂಟಪವು ಕಂಡು ಬರುತ್ತದೆ. ಇದರಲ್ಲಿ ಭಗವಂತನ ಪಾದಗಳಿವೆ. ಈ ಪಾದಗಳ ಮೇಲೆ ಪ್ರಸ್ತುತ ಹಿತ್ತಾಳೆ ತಗಡುಗಳಿವೆ. ಭಕ್ತರು ಮೊದಲು ಪಾದಗಳನ್ನು ದರ್ಶಿಸಿ, ಪ್ರದಕ್ಷಿಣೆ ಹಾಕಿದ ನಂತರವೇ ಬಲಿಪೀಠದ ಮೇಲೆ ತೆಂಗಿನಕಾಯನ್ನು ಒಡೆಯುತ್ತಾರೆ. ಅನಂತರ ರಂಗಮಂಟಪದ ಎದುರಿಗಿರುವ ಜ್ಯೋತಿ ಮಂದಿರದಲ್ಲಿ ದೀಪ ಬೆಳಗಿಸಿ ನಮಸ್ಕರಿಸುತ್ತಾರೆ. ಆಲಯಕ್ಕೆ ದಕ್ಷಿಣಗೋಪುರ ಕೆಳಗಿರುವ ದ್ವಾರಕ್ಕೆ ಅಂಟಿಕೊಂಡು ದೊಡ್ಡಹಾಲಿನಲ್ಲಿ ಸುಮಾರು ಹತ್ತು ಮಂದಿ ಆಳ್ವಾರರ ವಿಗ್ರಹಗಳಿವೆ. ಇದೇ ಮಂದಿರದಲ್ಲಿ ಅತ್ಯಂತ ಪುರಾತನವಾದ ವಿಶ್ವಕ್ಸೇನನ ಮೂರ್ತಿಯಿದೆ. ಸ್ವಾಮಿಯನ್ನು ಸಂದರ್ಶಿಸಿದ ನಂತರ ಭಕ್ತರು ಚೆನ್ನಕೇಶವನೊಂದಿಗೆ ಆಳ್ವಾರರಿಗೆ ಸಹಾ ಪೂಜೆಗಳನ್ನು ನಿರ್ವಹಿಸುತ್ತಾರೆ. ಉತ್ತರದ್ವಾರದ ಕಡೆ ಪುರಾತನ ಬಸ್ತಿಗಿಡವಿದೆ. ಭಕ್ತರು ಇದಕ್ಕೆ ಪ್ರದಕ್ಷಿಣೆ ಹಾಕಿ ಸಂತಾನ ಮೊದಲಾದ ಬೇಡಿಕೆಗಳು ಪೂರೈಕೆಗಾಗಿ ನಮಸ್ಕರಿಸುತ್ತಾರೆ.

**ಬಂಗಾರದ ಹಲ್ಲಿ:** ಕಂಚಿಯ ದೇವಸ್ಥಾನಕ್ಕೆ ಹೋದವರು ಅಲ್ಲಿನ ಬಂಗಾರದ ಹಲ್ಲಿಯನ್ನು ಸ್ಪರ್ಶಿಸಿ ದೋಷ ವಿಮುಕ್ತರಾಗುತ್ತಾರೆ. ಅದನ್ನು ಬಿಟ್ಟರೆ ಅಂತಹ ಅವಕಾಶ ಕಡಪರಾಯನ ಆಲಯದಲ್ಲಿ ಮಾತ್ರವೇ ಒದಗಿ ಬರುತ್ತದೆ. ಇಲ್ಲಿ ಅಮ್ಮನವರ ಆಲಯದ ದ್ವಾರದ ಕಡೆಗೆ ಮೇಲ್ಭಾವಣಿಯಲ್ಲಿ ಎರಡು ಹಲ್ಲಿಗಳು ಅಂಟಿಕೊಂಡಂತೆ ಕಾಣಸಿಗುತ್ತವೆ. ಕಂಚಿಗೆ ಹೋಗ ಲಾಗದವರು. ಹೋದರೂ ಅಲ್ಲಿಯ ಆಲಯದಲ್ಲಿ ಹಲ್ಲಿಗಳನ್ನು ಸ್ಪರ್ಶಿಸಲಾಗದವರು. ಕಡಪರಾಯನ ಆಲಯದಲ್ಲಿರುವ ಹಲ್ಲಿಯನ್ನು ತಾಗಿ ದೋಷ ದೂರರಾಗಬಹುದು. ಅಮ್ಮನವರ ದರ್ಶನಾನಂತರ ಭಕ್ತರು ತಪ್ಪದೇ ಈ ಸಂಪ್ರದಾಯವನ್ನು ನಡೆಸಿಕೊಂಡು ಬರುತ್ತಾರೆ.

**ಪುಷ್ಕರಣಿ (ಹೊಂಡ):** ಆಲಯದ ಎದುರು ಒಂದು ದೊಡ್ಡ ಪುಷ್ಕರಣಿ ಇದೆ. ಇಡೀ ಜಿಲ್ಲೆಗೆ ಇತರ ಪುಷ್ಕರಣಿಗಿಂತಲೂ ಇದು ದೊಡ್ಡದು. ಇದು ಈಚೆಯಿಂದ ಶ್ರೀ ವೆಂಕಟೇಶ್ವರ ಸ್ವಾಮಿ ಮಂದಿರಕ್ಕೂ ಆಚೆ ಕಡೆಯಿಂದ ಎದುರಿಗಿರುವ ಶ್ರೀ ಸೋಮೇಶ್ವರ ಸ್ವಾಮಿ ಮಂದಿರಕ್ಕೂ ಸೇರಿರುವುದೆಂದೂ ಆ ಎರಡೂ ಮಂದಿರಗಳು ಪೂಜಾದಿ ಕ್ರಿಯೆಗಳಿಗಾಗಿ ಈ ಪುಷ್ಕರಿಣಿಯನ್ನು ಬಳಸಿಕೊಳ್ಳಬಹುದೆಂದು ಎರಡೂ ಆಲಯಗಳ ಅರ್ಚಕರು ತಿಳಿಸುತ್ತಾರೆ. ಪ್ರಮುಖವಾಗಿ ತೆಪ್ಪೋತ್ಸವ, ಬ್ರಹ್ಮೋತ್ಸವ ಸಮಾರೋಪ ಸಂದರ್ಭಗಳಲ್ಲಿ ಚಕ್ರಸ್ನಾನವನ್ನು ಇಲ್ಲಿಯೇ ನೆರವೇರಿಸುತ್ತಾರೆ. ಈ ಪುಷ್ಕರಿಣಿ ನಿರ್ಮಾಣದ ವಿವರಗಳನ್ನೊಳಗೊಂಡ ಶಾಸನವು ಕಡಪರಾಯನ ಆಲಯದ ರಂಗಮಂಟಪದ ಮುಂಭಾಗದಲ್ಲಿ ಒಂದು ಬಂಡೆಯಲ್ಲಿತ್ತೆಂದೂ, ಒಡೆದು ಹೋದ ಕಾರಣಕ್ಕೆ ಅದನ್ನು ಅಲ್ಲಿಂದ ತೆಗೆಯಲಾಗಿದೆಯೆಂದು ತಿಳಿಸುತ್ತಾರೆ ಆದರೆ ಆಲಯದ ಗೋಡೆಯ ಮೇಲೆ ಇತರ ಶಾಸನಗಳೊಂದಿಗೆ ಈ ಕುರಿತು ಶಾಸನವಿರುವುದೆಂದು ರೆಕಾರ್ಡ್‌ಗಳಿಂದ ತಿಳಿದು ಬರುತ್ತದೆ. (ಪುಷ್ಕರಿಣಿ ಎಂಬ ನೀರಿನ ತೊಟ್ಟಿ).

ಕಡಪರಾಯನಾದ ದೇವುನಿಕಡಪ ಶ್ರೀ ಲಕ್ಷ್ಮಿ ವೇಂಕಟೇಶ್ವರನ ಆಲಯದ ವಾರ್ಷಿಕೋತ್ಸವ ಬ್ರಹ್ಮೋತ್ಸವಗಳು ಪ್ರತಿವರ್ಷ ಮಾಘ ಶುದ್ಧ ಪಾಡ್ಯದಿಂದ ನವಮಿ ಯವರೆಗೆ ವೈಭವದಿಂದ ನಡೆಯುತ್ತವೆ. ಆಲಯದ ಅರ್ಚಕರು, ತಿರುಮಲೆ - ತಿರುಪತಿ ದೇವಸ್ಥಾನದ ವೇದಪಂಡಿತ ದೀಕ್ಷಾ ತಿರುಮಂಜನ ಕಾರ್ಯಕ್ರಮವನ್ನು ನೆರವೇರಿಸುತ್ತಾರೆ. ನಂತರ ವಿಶ್ವಕ್ಸೇನನ ಪೂಜೆ ಮಾಡಿ, ಆ ಬಳಿಕ ಪುಣ್ಯಾಹವಚನೆ, ರಕ್ಷಾ ಕಂಕಣಧಾರಣ ಅದಾದ ಮೇಲೆ ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಿ ಕಡೆಗೆ ಪುಷ್ಕರಿಣಿಯೆಡೆಗೆ ತಿರುಗಿ ಬರುತ್ತಾರೆ. ಅಲ್ಲಿ ಅರ್ಚಕರು ಶಾಸ್ತ್ರೋಕ್ತವಾಗಿ ಪೂಜೆಗಳನ್ನು ನಿರ್ವಹಿಸಿ ಮೃತ್ಸಂಗ್ರಹಣ ಕಾರ್ಯಕ್ರಮವನ್ನು ನೆರವೇರಿಸುತ್ತಾರೆ. ಅದನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಿ ಕಡೆಗೆ ಆಲಯವನ್ನು ತಲುಪಿ ಅಂಕುರಾರ್ಪಣವನ್ನು ಮಾಡುತ್ತಾರೆ. ಪ್ರತ್ಯೇಕ ವಿದ್ವಾಂಸರ, ನಾದಸ್ವರ, ಮಂಗಳ ವಾದ್ಯಗಳ ವಿನ್ಯಾಸಗಳು ಭಕ್ತರನ್ನು ಉತ್ಸವದೆಡೆಗೆ ಸೆಳೆಯುತ್ತವೆ. ಈ ಉತ್ಸವಗಳಲ್ಲಿ ಹನುಮ, ಗರುಡರ ಅಲಂಕಾರದ ದಿನಗಳಲ್ಲಿ ಗ್ರಾಮೋತ್ಸವದ ಅಂಗವಾಗಿ ಭಕ್ತರು ವಿಶೇಷ ಸಂಖ್ಯೆಯಲ್ಲಿ ಸೇರುತ್ತಾರೆ.ಕಲ್ಯಾಣೋತ್ಸವ ಪುಷ್ಪಯಾಗವನ್ನು ಕೂಡಾ ವೈಭವೋಪೇತವಾಗಿ ನಿರ್ವಹಿಸುತ್ತಾರೆ. ಬೇಸಿಗೆಯಲ್ಲಿ ಐದು ದಿನಗಳವರೆಗೆ ಆಲಯದ ಪುಷ್ಕರಣಿಯಲ್ಲಿ ತೆಪ್ಪೋತ್ಸವವನ್ನು ನಿರ್ವಹಿಸುತ್ತಾರೆ. 2007 ರಿಂದ ಈ ಕ್ಷೇತ್ರ ತಿರುಮಲೆ- ತಿರುಪತಿ ದೇವಸ್ಥಾನದ ಪರಿಧಿಗೆ ಸೇರಲ್ಪಟ್ಟಿದೆ. ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಭಕ್ತರು ಬಹು ದೊಡ್ಡ ಸಂಖ್ಯೆಯಲ್ಲಿ ಹಾಜರಾಗುತ್ತಾರೆ.

**ರಥಚಕ್ರಗಳು ಆ ಎರಡು ಗ್ರಾಮಗಳು:** ಕಡಪರಾಯನ ರಥಕ್ಕೆ ಒಂದು ವಿಶೇಷತೆಯಿದೆ. ಬ್ರಹ್ಮೋತ್ಸವದ ವೇಳೆಯಲ್ಲಿ ಜರಗುವ ರಥೋತ್ಸವಕ್ಕೆ ಭಕ್ತರು ಭಾರೀ ಸಂಖ್ಯೆಯಲ್ಲಿ ಹಾಜರಾಗುತ್ತಾರೆ. ಹಾದಿ ಬೀದಿಗಳು ಮನೆ - ಮಾಳಿಗೆಗಳು ಜನರಿಂದ ತುಂಬಿ ಹೋಗುತ್ತವೆ. ರಥವನ್ನು ಕದಲಿಸಲು ಒಂದು ವಿಧಾನವಿದೆ. ರಥದ ಎರಡು ಚಕ್ರಗಳನ್ನು ಪಕ್ಕ ಪಕ್ಕದಲಿರುವ ದೇವುನಿಕಡಪ ಹಾಗೂ ಹಳೇ ಕಡಪ ವಾಸಿಗಳೇ ಕದಲಿಸುತ್ತಾರೆ. ಈ ಸಂಪ್ರದಾಯವು ಬಹಳಾ ಹಿಂದಿನ ಕಾಲದಿಂದಲೂ ನಡೆದು ಬಂದಿದೆ.

**ನಾಲ್ಕು ಹೊಸ್ತಿಲುಗಳು:** ಈ ಪ್ರಾಂತ್ಯದಲ್ಲಿ ಮೊದಲೂ ದೇವರಗಡಪವೊಂದೇ (ದೇವುನಿ ಕಡಪ) ಇತ್ತು. ಆಲಯಕ್ಕು ಮತ್ತು ಪೆನ್ನಾ ನದಿಗೂ ಮಧ್ಯೆದಲ್ಲಿರುವ ಭೂಮಿಯಲ್ಲಿ ವ್ಯವಸಾಯ ಮಾಡುವ ರೈತರುಗಳು ನದೀ ತೀರದಲ್ಲಿ ತಮ್ಮ ನಿವಾಸಗಳನ್ನು ಕಟ್ಟಿಕೊಂಡಿದ್ದಾರೆ ಅದೇ ಕಾಪು ಹೊಸ್ತಿಲಾಗಿದೆ. ಒಮ್ಮೆ ನದಿಗೆ ಭಾರೀ ಪ್ರವಾಹವುಂಟಾಗಲು ಆ ಗ್ರಾಮವು ಹೊಡೆದುಕೊಂಡು ಹೋಗಿದೆ. ಆಗ ಗ್ರಾಮಸ್ಥರು ದೇವಾಲಯಕ್ಕೆ ಫರ್ಲಾಂಗ್ ದೂರದಲ್ಲಿ ತಮ್ಮ ನಿವಾಸಗಳನ್ನು ಮತ್ತೆ ಕಟ್ಟಿಕೊಂಡಿದ್ದಾರೆ. ನವಾಬರು ಈ ಪ್ರಾಂತ್ಯದ ಒಡೆಯರಾದಾಗ ಕಡಪ ನಗರವನ್ನು 'ಕಡಪ ಷಹರ್'ನ್ನಾಗಿ ಪರಿವರ್ತಿಸಿದ್ದಾರೆ. ತಮ್ಮ ಸೈನಿಕರ ವಿನಃ ಯಾರಿಗೂ ಪ್ರವೇಶವಿಲ್ಲದ ಆ ಸ್ಥಳದ ಅಸೌಕರ್ಯಗಳನ್ನು ತಿಳಿದ ನವಾಬು ಅಲ್ಲಿಯ ಸ್ಥಾನಿಕರ ಸೂಚನೆ ಮೇರೆಗೆ ದೇವರ ಪ್ರಾಗಂಣದಲ್ಲಿರುವ ಅರ್ಚಕ ಕುಟುಂಬದವರನ್ನು ಕಡಪ ಶಹರ್‌ಗೆ ಬರಬೇಕೆಂದು ಆಹ್ವಾನಿಸಿದ್ದಾನೆ. ಸಂಪ್ರದಾಯಗಳಲ್ಲಿನ ವ್ಯತ್ಯಾಸದ ಕಾರಣ ಬರಲಾಗದೆಂದು ಅರ್ಚಕರು ಹೇಳಲು, ಅವರ ಸಂಪ್ರದಾಯಕ್ಕೆ ಅನುಕೂಲವಾಗುವಂತೆ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಿ ಕೊಡುವುದಾಗಿ ಭರವಸೆಯನ್ನಿತ್ತು ನಗರದ ಕೋಟೆ ಸಮೀಪದಲ್ಲಿರುವ ಸ್ಥಳದಲ್ಲಿ ಆಂಜ ನೇಯನ ಗುಡಿಯನ್ನು ಕಟ್ಟಿಸಿ ಅವರಿಗೆ ಪ್ರತ್ಯೇಕವಾದ ನಿವಾಸಗಳನ್ನು ಏರ್ಪಾಟು ಮಾಡಿದ್ದಾನೆ. ಆ ಪ್ರಾಂತ್ಯವು ತದನಂತರ ಬ್ರಾಹ್ಮಣ ಬೀದಿಯಾಗಿ ಪರಿವರ್ತಿತಗೊಂಡಿದೆ. ದೇವರ ಕಡಪ ಮೊದಲನೇಯ ಕಡಪವಾಗಿ,ಹೊಡೆದುಕೊಂಡು ಹೋದದ್ದು ಎರಡನೇ ಕಡಪವಾಗಿ,ಕಾಪು ಗಡಪ ಮೂರನೇಯ ಕಡಪವಾಗಿ, ಕಡಪ ಷಹರ್ ನಾಲ್ಕನೇ ಕಡಪವಾಗಿ ಬದಲಾಗಿವೆ. ಕಡಪ ನಗರದ ಉತ್ತರಕ್ಕೆ ದೇವುನಿ ಕಡಪ ಎರಡು ಮೈಲಿ ದೂರದಲ್ಲಿಯೂ ದೇವುನಿಕಡಪ, ಹಳೇ ಕಡಪ ಸುಮಾರಾಗಿ ಮಿಳಿತವಾಗಿಯೇ ಇವೆ. ಆದ್ದರಿಂದಲೇ ಬ್ರಹ್ಮೋತ್ಸವದಲ್ಲಿ ಒಂದು ದಿನ ದೇವುನಿ ಕಡಪದಲ್ಲೂ, ಮರುದಿನ ಕಡಪ ನಗರದಲ್ಲೂ ಗ್ರಾಮೋತ್ಸವವನ್ನು ನೆರವೇರಲಾಗುತ್ತದೆ.

**ಉತ್ಸವಗಳು:** ವೈಕುಂಠ ಏಕಾದಶಿಯಂದು ಸ್ವಾಮಿ ಮತ್ತು ಅಮ್ಮನವರ ಉತ್ಸವ ಮೂರ್ತಿಗಳನ್ನು ಉತ್ತರ (ವೈಕುಂಠ) ದ್ವಾರ ಕಡೆಗಿಟ್ಟು ಭಕ್ತರಿಗೆ ಉತ್ತರದ ಕಡೆಯಿಂದ ದರ್ಶನವನ್ನು ನೀಡುವ ಭಾಗ್ಯವನ್ನು ಕಲ್ಪಿಸಿಕೊಡುತ್ತಾರೆ. ತೆಲುಗು ಸಂವತ್ಸರ ಯುಗಾದಿ ಸಂದರ್ಭವಾಗಿ ಆಲಯದಲ್ಲಿ ಸ್ವಾಮಿ - ಅಮ್ಮನವರ ಆಸ್ಥಾನದಲ್ಲಿ ಪಂಡಿತರು ಪಂಚಾಂಗ ಶ್ರವಣವನ್ನು ನಡೆಸಲಾಗುತ್ತದೆ.

**ಬ್ರಹ್ಮೋತ್ಸವಗಳು:** ಇಲ್ಲಿ ಮಾಘಶುದ್ಧ ಪಾಡ್ಯದಿಂದ ನವಮಿಯವರೆಗೆ ಕಡಪರಾಯನ ಬ್ರಹ್ಮೋತ್ಸವಗಳನ್ನು ನಿರ್ವಹಿಸಲಾಗುತ್ತದೆ. ಜನವರಿ 25, 2020 ರಿಂದ ಈ ಉತ್ಸವಗಳು ಪ್ರಾರಂಭವಾಗಲಿವೆ. ಮೊದಲನೇ ದಿನದ ಅಂಕುರಾರ್ಪಣೆಯೊಂದಿಗೆ ಉತ್ಸವಗಳು ಆರಂಭಗೊಳ್ಳುತ್ತವೆ.

# ಶ್ರೀ ಆಂಡಾಳ್ ವೈಭವ

–ಶ್ರೀಮತಿ. ಎ ಗೀತಾ ವೀರರಾಘವನ್
080-26722817



ಶ್ರೀ ವಿಲ್ಲಿಪುತ್ತೂರಿನಲ್ಲಿ ಪೆರಿಯಾಳ್ವಾರ್ ಅವರ ತುಳಸೀ ಕಾನನದಲ್ಲಿ ಶುಭ ಪುಬ್ಬಾ ನಕ್ಷತ್ರದಲ್ಲಿ ಭೂಮಿಜೆಯಾಗಿ ಆಂಡಾಳ್ ಅವತರಿಸಿದಳು. ಭೂದೇವಿ ಅಂಶವಾಗಿ ಭೂಮಿಯಲ್ಲಿ ದೊರಕಿದ ಮಹಾಲಕ್ಷ್ಮಿಗೆ ಪೆರಿಯಾಳ್ವಾರವರು ''ಗೋದಾದೇವಿ'' ಎಂದು ನಾಮಕರಣ ಮಾಡಿದರು. ಮಕ್ಕಳಿಲ್ಲದ ಪೆರಿಯಾಳ್ವಾರ್ ಅವರು ಅವಳನ್ನು ಬಹಳ ಪ್ರೀತಿಯಿಂದ ಮಗಳೆಂದು ಸಾಕಿದರು. ಪರಮ ಭಕ್ತರಾದ ಪೆರಿಯಾಳ್ವಾರವರು ಗೋದೆಯನ್ನು ತಮ್ಮ ಅತ್ಯುತ್ತಮ ಪ್ರೀತಿ, ದಿವ್ಯಜ್ಞಾನದಿಂದ ಪೋಷಿಸಿದರು. ಪ್ರತಿ ದಿನವೂ ಮಗಳಿಗೆ ಭಗವಂತನ ದಿವ್ಯ ಅವತಾರಗಳ ಕಥೆಗಳನ್ನು ಹೇಳಿ ಅವಳು ಆನಂದಿಸುವಂತೆ ಮಾಡುತ್ತಿದ್ದರು. ಅವರ ಪೋಷಣೆಯಲ್ಲಿ ಅವಳೂ ದಿವ್ಯಜ್ಞಾನಿಯಾಗಿ ಬೆಳೆದಳು.

ಭೂಮಿ ತಾಯಿಯ ಅಂಶವಾದ ಗೋದಾದೇವಿಗೆ ಸ್ವಾಮಿ ಶ್ರೀ ವರಾಹ ಅವತಾರದಲ್ಲಿ ಭೂದೇವಿಗೆ ಉಪದೇಶಿಸಿದ್ದ ದಿವ್ಯಜ್ಞಾನ ಮೊದಲೇ ಇತ್ತು. ಇದರೊಡನೆ ಶ್ರೀ ವಿಷ್ಣುಚಿತ್ತರು (ಪೆರಿಯಾಳ್ವಾರ್ ಅವರು) ನೀಡಿದ ದಿವ್ಯ ಪೋಷಣೆಯಿಂದ ಅಸಾಧಾರಣ ಜ್ಞಾನಿಯಾದಳು.

ಗೋದಾದೇವಿ ಲೋಕಕ್ಕೆ ಅನುಗ್ರಹಿಸಿರುವ ದಿವ್ಯ ಪ್ರಬಂಧಗಳು "ತಿರುಪ್ಪಾವೈ" ಮತ್ತು "ನಾಚ್ಚಿಯಾರ್ ತಿರುಮೊಳಿ". ಇವರೆಡೂ ಭಕ್ತಿ ಪ್ರಧಾನವಾದ ಗೀತ ನಾಟಕಗಳು. ಇಂದು ಈ ರೀತಿಯ ಗೀತನಾಟಕಗಳು ಆಂಡಾಳ್ ರಚಿಸಿರುವ ಈ ದಿವ್ಯ ಪ್ರಬಂಧಗಳನ್ನು ಹೊರತು ಬೇರೆಲ್ಲೂ ಲಭ್ಯವಿಲ್ಲ. ಲೋಕವನ್ನೆಲ್ಲಾ ತನ್ನ ಈ ಅತ್ಯಂತ ರಮಣೀಯವಾದ ಭಕ್ತಿ ಪ್ರಧಾನವಾದ ಸೂಕ್ತಿಗಳಿಂದ ಆಕರ್ಷಿಸಿ ಎಲ್ಲರನ್ನು ಸದ್ಗತಿಯೆಡೆಗೆ ನಡೆಸಿರುವ ಗೋದಾದೇವಿಗೆ "ಆಂಡಾಳ್" (ಎಲ್ಲರನ್ನೂ ಆಳುವವಳು) ಎಂದು ಹೆಸರು. ಇವಳು ಭಗವಂತನ ಪ್ರೀತಿಯನ್ನೂ ಗೆದ್ದು ಸ್ವಾಮಿಯ ದಿವ್ಯಮಹಿಷಿಯಾದಳು.

ಇವಳು ರಚಿಸಿರುವ "ತಿರುಪ್ಪಾವೈ" ಮುವತ್ತು ಪಾಶುರಗಳನ್ನು ಉಳ್ಳದ್ದು. "ತಿರುಪ್ಪಾವೈ" ಎಂದರೆ ಅತಿಸೊಗಸಾದ ಗೀತೆ (ಗಾನ) ಎಂದರ್ಥ. 'ತಿರುಪ್ಪಾವೈ' ಎಂದರೆ 'ಉತ್ತಮ ಸ್ತ್ರೀ' ಎಂದೂ ಅರ್ಥ. ಅದೂ ಆಂಡಾಳನ್ನೇ ಕುರಿತ್ತದ್ದಾಗಿದೆ.

ಗೋದಾದೇವಿಗೆ ನಂದಗೋಕುಲದ ಗೋಪಿಯರನ್ನು ಕಂಡರೆ ಅತ್ಯಂತ ಅಚ್ಚುಮೆಚ್ಚು. ಅವರ ಭಕ್ತಿಗೆ ಮನಸೋತವಳು. ಆದುದರಿಂದ ಈ 'ತಿರುಪ್ಪಾವೈ' ನಲ್ಲಿ ತನ್ನನ್ನು ಒಬ್ಬ ಗೋಪಿಯಾಗಿ ನೆನೆದು ಮಧುರ ಭಾವದಿಂದ ಹಾಡಿರುತ್ತಾಳೆ. ಭಗವಂತನನ್ನೇ ಬೇಕೆಂದು ಪ್ರಾರ್ಥಿಸಿ ಹಾಡಿರುವ ಈ ಗಾನ ವೇದೋಪನಿಷತ್ತುಗಳ ಸಾರವಾಗಿ ಪೂರ್ವಾಚಾರ್ಯರು "ವೇದ ಮನೈತ್ತಿಕ್ಕುಂ ವಿತ್ತಾಹಂ" ಇದನ್ನು ಇಟ್ಟು ಸಕಲ ವೇದಗಳನ್ನು ಪಡೆಯಬಹುದೆಂದು ಕೊಂಡಾಡಿದ್ದಾರೆ.

ಈ ತಿರುಪ್ಪಾವೈಯನ್ನು ಐದೈದು ಪಾಶುರಗಳಾಗಿ ವಿಂಗಡಿಸಿದ್ದಾರೆ. ಇಪ್ಪತ್ತೊಂಬತ್ತು ಪಾಶುರಗಳು "ಎಲೋರ್" ಎಂದು ಕೊನೆಗೊಳ್ಳುತ್ತವೆ. ಮುವತ್ತನೆಯ ಪಾಶುರದಲ್ಲಿ ಆಂಡಾಳ್ ಗೋಪೀ ಭಾವದಿಂದ ವಿಲ್ಲಿಪುತ್ತೂರ್ ವಿಷ್ಣುಚಿತ್ತರ ಮಗಳಾಗಿ ಫಲಶ್ರುತಿ ಹಾಡಿದ್ದಾಳೆ.

ಈ ತಿರುಪ್ಪಾವೈ ಪ್ರಬಂಧದ ಹಿನ್ನೆಲೆ - ಗೋಕುಲದಲ್ಲಿ ಮಳೆಯಾಗದೆ ಬಹಳ ಕಷ್ಟವಾಯಿತು. ಮಳೆ ಬೀಳಲು ಹೆಣ್ಣು ಮಕ್ಕಳಿಂದ "ಕಾತ್ಯಾಯಿನೀ"

ವ್ರತವನ್ನು ಮಾಡಿಸಬೇಕೆಂದು ಗೋಪ ಹಿರಿಯರು ಸಭೆಸೇರಿ ನಿಶ್ಚಯಿಸುತ್ತಾರೆ. ಬೆಳಗಿನ ಜಾವ ಹೆಣ್ಣು ಮಕ್ಕಳು ನದಿಯಲ್ಲಿ ಸ್ನಾನಮಾಡಿ ಈ ವ್ರತಾಚರಣೆ ಪ್ರಾರಂಭಿಸಬೇಕು. ಈ ವ್ರತಾಚರಣೆಗೆ "ನೋಂಪು"ಎಂದು ಹೇಳುವುದುಂಟು. ಅವರಿಂದ ವ್ರತಾಚರಣೆ ಮಾಡಿಸುವ ಜವಾಬ್ದಾರಿಯನ್ನು ನಂದ ಗೋಪನ ಕುಮಾರನಾದ ಶ್ರೀಕೃಷ್ಣನಿಗೆ ವಹಿಸುತ್ತಾರೆ. ಅವನು ಮೊದಲು ಒಪ್ಪಿಕೊಳ್ಳುವುದಿಲ್ಲ. ತನ್ನನ್ನು ಎಲ್ಲರೂ ಏನೇನೋ ಹೇಳುವರೆಂದು ಕೋಪ ನಟಿಸುತ್ತಾನೆ. ಕೊನೆಗೆ ಎಲ್ಲರೂ ಬಲಾತ್ಕರಿಸಲು ಅವರ ಬಲವಂತಕ್ಕೆ ಒಪ್ಪಿದಂತೆ ಒಪ್ಪುತ್ತಾನೆ. ಹೆಣ್ಣು ಮಕ್ಕಳಿಗೆ ಮನೆಗೆ ಹೋಗಿ ಬೆಳಗ್ಗೆ ಬೇಗ ಬರಲು ತಿಳಿಸುತ್ತಾನೆ.

ಎರಡನೆಯ ಪಾಶುರದಲ್ಲಿ ಆಂಡಾಳ್ ಗೋಪ ಕನ್ನಿಕೆಯರಿಂದ ಪ್ರತಿಜ್ಞೆ ಹಾಡಿದ್ದಾಳೆ. "ನೈಯುಣ್ಣೋಂ ಪಾಲುಣ್ಣೋಂ" "ಮಲರಿಟ್ಟು ನಾಂ ಮುಡಿಯೋಮ್" (ನಾವು ತುಪ್ಪ ಹಾಲುಗಳನ್ನು ಸೇವಿಸುವುದಿಲ್ಲ. ಹೂ ಮುಡಿಯುವುದಿಲ್ಲ.)

ಮೊದಲ ಐದು ಪಾಶುರಗಳಲ್ಲಿ ಈ ವ್ರತದ ಉದ್ದೇಶ ವ್ಯಕ್ತವಾಗಿದೆ. "ತೀಯಿನಿಲ್ ತೂಶಾಗುಂ ಶಪ್ಪು" ಎಂದು ಈ ಮಾರ್ಗಶಿರ ತಿಂಗಳಿನಲ್ಲಿ ನಲಿದು ನೀರಾಡಿದರೆ ನಮ್ಮ ಹಿಂದೆ ಮಾಡಿದ ಮತ್ತು ಮುಂದೆ ಬರಲಿರುವ ಪಾಪಗಳು ಬೆಂಕಿಯಲ್ಲಿ ಹಾಕಿದ ಹತ್ತಿಯಂತೆ ಭಸ್ಮವಾಗುತ್ತದೆ ಎಂಬುದು ತಿಳಿದು ಬರುತ್ತದೆ.

ಈ ಪ್ರಬಂಧದ ಆರನೆಯ ಪಾಶುರದಿಂದ (ಪದ್ಯ) ಹದಿನೈದನೆಯ ಪಾಶುರದವರೆಗೂ ನಿದ್ರೆಯಲ್ಲಿರುವ ಸಖಿಯರನ್ನು ಎಬ್ಬಿಸಿ ಈ ಸಿರಿನೋಂಪಿನ ಆಚರಣೆಗೆ ಕರೆ ನೀಡಲಾಗಿದೆ. ಆ ಸಖಿಯರೆಲ್ಲಾ ಭಗವದ್ಭಕ್ತರು ಕೆಲವರು ಭಾಗವತ ಭಕ್ತರು, ಭಗವದ್ಭಕ್ತಿ ಮಾಡಿ ಈಗ ಮರೆತಿರುವವರು ಎಲ್ಲರೂ ಈ ಗೋಷ್ಠಿಯಲ್ಲಿದ್ದಾರೆ.

ಮುಂದೆ ೧೬,೧೭,೧೮ನೆಯ ಪಾಶುರಗಳಲ್ಲಿ ಭಗವಂತನ ಸಿರಿಮಾಳಿಗೆಯನ್ನು ಕಾಯುವವನಿಂದ ನಪ್ಪಿನ್ನೈ ದೇವಿಯವರೆಗೂ ಎಲ್ಲರನ್ನೂ ಎಬ್ಬಿಸುವುದು ಕಂಡು ಬರುತ್ತದೆ.

ಈ ಪ್ರಬಂಧದ ೧೯ ರಿಂದ ೨೫ ನೆಯ ಪಾಶುರದ ವರೆಗೆ ಆ ಭುವನ ಮನೋಹರನನ್ನು ಎಬ್ಬಿಸಿ ಅವನಿಗೆ ತಮ್ಮ ಮನವಿಯನ್ನು ಒಪ್ಪಿಸುತ್ತಾರೆ.

"ಶಿತ್ತಾರ್ಕುೞ ವೆಪ್ಪಂ ಕೊಡುಕ್ಕುಂ ವಿಮಲಾ ತುಯಿಲೆ ಶಾಯ್"

"ಊತ್ತಮುಡೈಯಾಯ್ ಪೆರಿಯಾಯ್, ಉಲಹಿನಿಲ್ ತೋತ್ತುಮಾಯ್ ನಿನ್ರ ಶುಡರೇ ತುಯಿಲೆಶಾಯ್". ಶೆಂಗಣ್ ಶಿರುಚ್ಚಿರುದೇ ಎಮ್ಮೇಲ್ ವಿಳಿಯಾವ್ರೋ, ಯಾಂ ವಂದ ಕಾರ್ಯಂ ಆರಾಂಯ್ದು ಅರುಳ್ ಇವುಗಳಲ್ಲಿ ಕಾಣಬಹುದು.

ಆಶ್ರಿತ ವತ್ಸಲನೇ ಲೋಕದಲ್ಲಿ ಎಲ್ಲರೂ ಕಾಣುವಂತೆ ಪ್ರಕಾಶಿಸುವ ಜ್ಯೋತಿಯೇ ಎದ್ದೇಳು ಎನ್ನುತ್ತಾರೆ.

ಪ್ರಬಂಧದ ೨೬ ರಿಂದ ೩೦ ರ ವರೆಗೆ ಈ ಸಿರಿ ನೋಂಪಿನ ಫಲವನ್ನು ಹಾಡಿರುತ್ತಾಳೆ.

ಕೊನೆಯಲ್ಲಿ ಗೋದಾದೇವಿ "ಮತ್ತನಂಕಾಮಂಗಳ್ ಮಾತ್ತು" "ಉನಕ್ಕು ನಾಂ ಆಳ್ ಚೈವ್ರೋಂ" ಎಂದು ನಾವು ಎಂದೆಂದೂ ನಿನಗೇ ಸೇರಿದವರು. ನಿನ್ನನ್ನು ಬಿಟ್ಟು ನಮಗೆ ಬೇರೆ ಗತಿಯಿಲ್ಲ ನಿನ್ನ ನಿತ್ಯ ಕೈಂಕರ್ಯವನ್ನು ನಮಗೆ ಅನುಗ್ರಹಿಸು ಎಂದು ಪ್ರಾರ್ಥಿಸುತ್ತಾಳೆ.

ಈ ಪ್ರಬಂಧದಲ್ಲಿ ಪ್ರಕೃತಿ ಸನ್ನಿವೇಷವನ್ನು ಅತ್ಯದ್ಭುತವಾಗಿ ವರ್ಣಿಸಲಾಗಿದೆ. ಸೂರ್ಯೋದಯದ ವರ್ಣನೆ ರಮಣೀಯವಾಗಿದೆ. ಮುಂಜಾನೆ ಭಾಗವತರು ಹರಿಸ್ಮರಣೆ ಮಾಡುತ್ತಾ ಏಳುವುದು ತಮ್ಮ ಪೂಜಾವಿಧಿ ನಡೆಸಲು ದೇವಸ್ಥಾನಗಳಿಗೆ ನಸುಕಿನಲ್ಲಿಯೇ ಹೋಗುವುದು ನೆಲ ಬಾವಿಯಲ್ಲಿ ತಾವರೆ ಸ್ವಲ್ಪ ಸ್ವಲ್ಪವಾಗಿ ಅರಳುವುದು ಮುಂತಾದ ಅನೇಕಾನೇಕ ಸುಂದರ ವರ್ಣನೆಗಳಿವೆ.

ಅತ್ಯಂತ ರಮಣೀಯವಾಗಿ, ಮನೋಹರವಾಗಿ ಎಲ್ಲವನ್ನೂ ವರ್ಣಿಸುತ್ತಾ ಆಂಡಾಳ್ ಪ್ರಭಲವಾಗಿ ತತ್ವ ಪ್ರತಿಪಾದನೆಯನ್ನು ಮಾಡಿರುತ್ತಾಳೆ. ಇದು ವಿಶಿಷ್ಟಾದ್ವೈತದ ಸಾರಸರ್ವಸ್ವದ ಅಮೃತವಾಗಿದೆ. ಇದು ಉಪನಿಷತ್ತಿಗೆ ಸಮಾನವಾಗಿದೆ.

ಆಂಡಾಳ್ ಪ್ರತಿ ದಿನವೂ ಭಗವಂತನಿಗೆ ತಾನು ಮುಡಿದ ಮಾಲೆಯನ್ನು ಸಮರ್ಪಿಸಿ "ಶೂಡಿಕೊಡುತ್ತ ನಾಚ್ಚಿಯಾರ್" ಆಗಿ ಅದರೊಡನೆ ಈ ರೀತಿ ಭವ್ಯವಾದ ಮನೋಹರವಾದ ಮೂವ್ವತ್ತು "ಪಾಮಾಲೈ" (ಪದ್ಯಗಳ ಮಾಲೆಯನ್ನೂ) ಭಗವಂತನಿಗೆ ಸಮರ್ಪಿಸಿ ಅವನನ್ನೇ ಪಡೆಯಬೇಕೆಂದು ಪ್ರಾರ್ಥಿಸಿ ಅವನ ದಿವ್ಯ ಮಹಿಷಿಯಾಗಿ ಅಲಂಕರಿಸಿದಳು. ಶ್ರೀ ವೈಷ್ಣವ ಎಲ್ಲಾ ದೇವಾಲಯಗಳಲ್ಲಿ (ಗೋದಾದೇವಿ) ಆಂಡಾಳ್‌ಗೆ ಸ್ವಾಮಿಯೊಡನೆ ನಿತ್ಯ ಪೂಜೆ ಸಲ್ಲುತ್ತದೆ. ಅಲ್ಲದೆ. ಶ್ರೀ ವೈಷ್ಣವ ಎಲ್ಲಾ ದೇವಾಲಯಗಳಲ್ಲಿ 'ಶಾತ್ತುಮರೈ' ಭಗವದಾರಾಧನೆಯ ಮಂಗಳದಲ್ಲಿ ಆಂಡಾಳ್ ರಚಿಸಿರುವ 'ತಿರುಪಾವೈ' ದಿವ್ಯ ಪ್ರಬಂಧದ ಕೊನೆಯ ಎರಡು ಪಾಶುರಗಳನ್ನು ಭಕ್ತಿಯಿಂದ ತಪ್ಪದೆ ಹಾಡುತ್ತಾರೆ. ಆಂಡಾಳ್ ವೈಭವ ಅಪಾರವಾದುದು. ಎಷ್ಟು ಕೊಂಡಾಡಿದರೂ ಮುಗಿಯಲಾರದುದು.

"ಆಂಡಾಳ್ ತಿರುವಡಿಗಳೇ ಶರಣಂ "

# ಶ್ರೀ ವೈಷ್ಣವ ಮತ ಸರ್ವಸಮ್ಮತ ವಿಶಿಷ್ಟಾದ್ವೈತದ ವೈಶಿಷ್ಟ್ಯ

-ಶ್ರೀಮತಿ. ಸಿ. ಎಸ್. ಊರ್ಮಿಳಾ

-9380426830



ಶ್ರೀಮತೇ ರಾಮಾನುಜಾಯ ನಮಃ

ವಿಶಿಷ್ಟಾದ್ವೈತ ತತ್ವವೆಂಬುದು ಇತ್ತೀಚನದಲ್ಲ, ಅನೇಕ ಮಹರ್ಷಿಗಳು, ಆಚಾರ್ಯರು, ಆಳ್ವಾರರು ಪ್ರತಿಪಾದಿಸಿದ್ದಾರೆ. ಪರಾಶರ, ನಾರದ, ವ್ಯಾಸ, ಮಹರ್ಷಿಗಳು, ಟಂಕ, ದೃಮಿಡ, ಗುಹದೇವ, ನಾಥಮುನಿ,ಯಾಮೂನಾಚಾರ್ಯ,ಪಿಳ್ಳೈ ಲೋಕಾಚಾರ್ಯ ರಾಮಾನುಜಚಾರ್ಯ, ವೇದಾಂತಾಚಾರ್ಯ ಮುಂತಾದವರು ಈ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ.

1. ಇದು ಸಂಸ್ಕೃತ ವೇದಗಳ ಮತ್ತು ತಮಿಳು ವೇದವೆನಿಸಿದ ನಾಲಾಯಿರ ದಿವ್ಯ ಪ್ರಬಂಧಗಳ ತಳಹದಿಯ ಮೇಲೆ ನಿಂತಿದೆ.

2. ಈ ಸಿದ್ಧಾಂತವನ್ನು ಶ್ರೀ ರಾಮಾನುಜರು ತಮಿಳು ಹಾಗೂ ಸಂಸ್ಕೃತ ವೇದಗಳ ಸಿದ್ಧಾಂತದ ತಿರುಳನ್ನು ಸಮನ್ವಯ ಗೊಳಿಸಿ ಜನಸಾಮಾನ್ಯರ ಹೃದಯಕ್ಕೆ ಸುಲಲಿತವಾಗಿ ಅರ್ಥವಾಗುವಂತೆ ಮಾಡಿದರು.

ಹಾಗಾದರೆ ವಿಶಿಷ್ಟಾದ್ವೈತ ಎಂದರೇನು?

ವಿಶೇಷಣಗಳಿಂದ ಕೂಡಿದ ಅದ್ವೈತ ವಿಶಿಷ್ಟಾದ್ವೈತ, ಅದ್ವೈತ ಮತದಲ್ಲಿ ಪ್ರತಿಪಾದಿಸಿದ ಬ್ರಹ್ಮ, ಜೀವ, ಜಗತ್ತು ಎಂಬುವ ತತ್ವಗಳನ್ನು ತನ್ನದೇ ಆದ ರೀತಿಯಲ್ಲಿ ವಿಶಿಷ್ಟವಾಗಿ ಹೇಳುವುದರಿಂದ ಇದಕ್ಕೆ ವಿಶಿಷ್ಟಾ ದ್ವೈತವೆಂದು ಹೆಸರು ಬಂದಿದೆ. ಎಲ್ಲಾ ಮತಗಳಂತೆ ಈ ಮತದಲ್ಲೂ ತತ್ವ, ಹಿತ,ಪುರುಷಾರ್ಥಗಳು ಈ ಮತದಲ್ಲಿಯೂ ಉಂಟು ಹಾಗಾದರೆ ಅವು ಯಾವುವು?

**ತತ್ವ - ಈ ಮತದಲ್ಲೂ ಪರತತ್ವವೆಂದರೆ**

ಶ್ರೀಮನ್ನಾರಾಯಣನೇ(ನಾರಾಯಣನೇ ನಮಕ್ಕೇ ಪರ್ರೈ ತರುವಾನ್ ಎಂಬ ಆಂಡಾಳರ ವಾಕ್ಯವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.)

**ಹಿತ:** ಈ ತತ್ವವನ್ನು ಪಡೆಯುವ ಸಾಧನೆ ಹಿತವಾದುದು ಅದಾವುದೆಂದರೆ ಅತಿ ಸುಲಭವಾದ ಮಾರ್ಗ ಭಕ್ತಿ ಜ್ಞಾನ ಪೂರ್ವಕವಾದ ಶರಣಾಗತಿ.

**ಪುರುಷಾರ್ಥ:** ಭಕ್ತಿ ಜ್ಞಾನಪೂರ್ವಕವಾಗಿ ನಾವು ಭಗವಂತನಲ್ಲಿ ಶರಣಾಗತರಾದರೆ ನಮಗೆ ಮೋಕ್ಷ ಶತಃಸಿದ್ಧ ಎಂಬ ಅಚಲವಾದ ನಂಬಿಕೆ. "ರಕ್ಷಿಶ್ಯತಿ ಇತಿ ವಿಶ್ವಾಸಃ"- ನಮ್ಮಲ್ಲಿರ ಬೇಕು.(ಉದಾಹರಣೆಗೆ - ದ್ರೌಪದಿ - ವಸ್ತ್ರಾಪಹರಣ ಗಜೇಂದ್ರ ಮೋಕ್ಷ)

ವಿಶಿಷ್ಟಾದ್ವೈತದಲ್ಲಿ ಮೂಲ ತತ್ವಗಳು ಸಹಮೂರು 1) ಚಿತ್, 2) ಅಚಿತ್ 3)ಈಶ್ವರ

1)ಚಿತ್: ಎಂದರೆ ಜೀವ ಕೋಟಿಗಳು ಎಂದರ್ಥ

2)ಅಚಿತ್: ಅಂದರೆ ಜಡವಸ್ತುಗಳು, ಅಥವಾ ಈ ಪ್ರಕೃತಿ.

3)ಈಶ್ವರ: ಈ ಚಿತ್ ಹಾಗೂ ಅಚಿತ್‌ಗಳು ಪರಮಾತ್ಮನ ಶರೀರಗಳಾಗಿರುತ್ತವೆ.

ಸಕಲ ಚರಾಚರ ವಸ್ತುಗಳಲ್ಲಿಯೂ ಪರಮಾತ್ಮನು ಅಣು ಸ್ವರೂಪನಾಗಿ ಇರುತ್ತಾನೆ ಆದರೆ ಜೀವಾತ್ಮನಿಗೆ ಇರುವಂತೆ ಯಾವುದೇ ಕರ್ಮಬಂಧವು ಪರಮಾತ್ಮನಿಗೆ ಇರುವುದಿಲ್ಲ. (ನಮೇ ಕರ್ಮಾಣಿ ಲಿಂಪಂತಿ, ನಮೇ ಕರ್ಮ ಫಲೇ ಸ್ಪೃಹ:- ಎಂದು ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ಹೇಳುವಂತೆ ಅವನಿಗೆ ಕರ್ಮಬಂಧನವಿಲ್ಲ)

ಈಶ್ವರನ ಶಕ್ತಿಯೇ ಲಕ್ಷ್ಮಿ, ಸೃಷ್ಟಿಗೆ ಮೊದಲೂ ಸೂಕ್ಷ್ಮಾವಸ್ಥೆಯಲ್ಲಿ ಇರುವ ಚಿತ್, ಅಚಿತ್‌ಗಳೊಡನೆ ಈಶ್ವರ ಅಂತರ್ಯಾಮಿಯಾಗಿ ವಿಶಿಷ್ಟನಾಗಿರುತ್ತಾನೆ. ಭಗವಾನ್ ನಾರಾಯಣನೇ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾಗಿದ್ದಾನೆ. (ನಾರಾಯಣಾತ್ ಬ್ರಹ್ಮಜಾಯತೇ, ನಾರಾಯಣಾತ್ ರುದ್ರೋಜಯತೇ ನಾರಾಯಣಾತ್ ಇಂದ್ರೋಜಾಯತೇ ನಾರಾಯಣ ಏವೇದಗಂ ಸರ್ವಂ)

4. ಭಗವಂತನ ಕೃಪೆಗೆ ಪಾತ್ರರಾಗಲು ಸುಲಭವಾದ ಮಾರ್ಗ ಪ್ರಪತ್ತಿ ಅಥವಾ ಶರಣಾಗತಿ ಮಾರ್ಗ.

### ಪ್ರಪತ್ತಿ ಎಂದರೆ ಏನು?

ಪ್ರಪತ್ತಿ ಎಂದರೆ ದೇವರಲ್ಲಿ ದೃಢವಾದ ವಿಶ್ವಾಸವನ್ನು ಇಟ್ಟುಕೊಂಡು, ಅವನನ್ನೇ ನಂಬಿ ಅವನ ಕೃಪೆಗಾಗಿ ಹಾತೊರೆಯುತ್ತಾ ಆತ್ಮ ಸಮರ್ಪಣಾ ರೂಪವಾದ ಶರಣಾಗತಿ ಮಾಡುವ ಸುಲಭವಾದ ಮಾರ್ಗವೇ ಪ್ರಪತ್ತಿ ಮಾರ್ಗ, ಪ್ರಪತ್ತಿ ಎಂಬ ಪದ 'ಪ್ರಾಪದ' ಎಂಬ ಶಬ್ದದಿಂದ ಹುಟ್ಟಿ ಬಂದಿದೆ. 'ಪದ' ಎಂದರೆ 'ನಡೆ' ಎಂದರ್ಥ 'ಪ್ರ' ಎಂದರೆ ಸರಿಯಾದ ಮಾರ್ಗ. ಸರಿಯಾದ ಮಾರ್ಗದಲ್ಲಿ ಈ ಪ್ರಪತ್ತಿ ಮಾರ್ಗದಲ್ಲಿ ನಡೆಯಬೇಕಾದರೆ ಯಾವುದೇ ಪ್ರಪತ್ತಿ, ಜಾತಿ, ಕುಲ,ಲಿಂಗಬೇಧವಿಲ್ಲ ಇದಕ್ಕೆ ಕರ್ಮ ಮಾರ್ಗ, ಜ್ಞಾನ ಮಾರ್ಗಗಳಂತೆ ಕಠಿಣವಾದ ವಿಧಿನಿಯಮಗಳು ಇಲ್ಲ. ಯಾರೇ 'ಆಗಲಿ ಫಲಾಪೇಕ್ಷೆ ಇಲ್ಲದೆ ಎಲ್ಲ ವಿಧವಾದ ಸಾತ್ವಿಕ ಕರ್ಮಗಳಿಂದ ಭಕ್ತಿಯಿಂದ ಕೇವಲ ಕೈಂಕರ್ಯ ಭಾವದಿಂದ ಮಾಡಿದರೆ ಭಗವಂತ ಆ ಭಕ್ತನಲ್ಲಿ ಸುಪ್ರೀತನಾಗುತ್ತಾನೆ. ಡಂಬಾಚಾರದ ತೋರಿಕೆ ಅವನಿಗೆ ಬೇಕಾಗಿಯೇ ಇಲ್ಲ. ಬಡವ ಬಲ್ಲಿದನೆಂಬ ಬೇಧವೂ ಅವನ ಪಾಲಿಗೆ ಇಲ್ಲ. ಪತ್ರಂಪುಷ್ಪಂ ಫಲಂ ತೋಯಂ ಯೋಮೇ ಭಕ್ತ್ಯಾ ಪ್ರಯಚ್ಛತಿ ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮ: ಎಂದು ಸಾಕ್ಷಾತ್ ಭಗವಂತನೇ ಹೇಳಿದ್ದಾ ನಲ್ಲವೇ?

ಯಾವುದನ್ನೇ ಅರ್ಪಿಸಿದರೂ ಅಚಲವಾದ ಭಕ್ತಿಯನ್ನು ಮಾತ್ರ ಅವನು ನಿರೀಕ್ಷಿಸುತ್ತಾನೆ. ಭಾರದ್ವಾಜ ಮಹರ್ಷಿಗಳು ಪ್ರಪತ್ತಿಯ ಬಗ್ಗೆ ಹೇಳುತ್ತಾ "ನ ಪ್ರಪತ್ತೇಃ ಪರಾ ವಿದ್ಯಾನ ವಿಷ್ಣೋಃ ದೈವತಃ ಪರಂ" ಎಂದು ಘೋಷಿಸಿದ್ದಾರೆ.

ವಾಸುದೇವ: ಸರ್ವಮಿತ ಸಮಹಾತ್ಮಾ ಸದುರ್ಲಭಃ ಎಂಬುದನ್ನು ನಾವು ತಿಳಿಯಬೇಕು.

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ

ಅಹಂತ್ವಾಂ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ ಎಂದು ಭಗವಂತನೇ ಅಭಯ ಪ್ರಧಾನ ಮಾಡಿರುವವನಲ್ಲ ಅದನ್ನು ಯಾವಾಗಲೂ ನಾವು ನೆನಪಿಸಿಕೊಂಡು, ಕಾರ್ಯೋನ್ಮುಖರಾಗಬೇಕು.ಇದು ವಿಶಿಷ್ಟಾದ್ವೈತದಲ್ಲಿ ಚರಮ ಶ್ಲೋಕವಾಗಿದೆ.

ಶ್ರೀ ವೈಷ್ಣವ ಸಂಪ್ರದಾಯದಲ್ಲಿ ಆಚಾರ್ಯನಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಚೇತನನ ಅಜ್ಞಾನ, ಅಹಂಕಾರ ಮಮಕಾರಗಳು ತೊಲಗಿ ಭಗವಂತನ ಕೃಪೆ ದೊರೆಯಬೇಕಾದರೆ ಆಚಾರ್ಯನ ಅನುಗ್ರಹ ಅತ್ಯವಶ್ಯ.



ಸದ್ಗುರುವನ್ನು ಆಶ್ರಯಿಸಿ ತತ್ವಜ್ಞಾನ ನಿಷ್ಠನಾಗಿ ನಿತ್ಯ ನೈಮಿತ್ತಿಕ ಕರ್ಮಗಳನ್ನು ಫಲಾಪೇಕ್ಷೆ ಇಲ್ಲದೆ, ಭಗವಂತನಿಗೆ ಪ್ರೀತ್ಯರ್ಥವಾಗಿ ಮಾಡುತ್ತೇನೆ ಎಂದು ಭಾವಿಸಿ ಮಾಡುತ್ತಾ ಇರಬೇಕು "ಕರ್ಮಣ್ಯೇವ ಅಧಿಕಾರಸ್ಥೇ ಮಾಫಲೇಶು ಕದಾಚನ" ಎಂದು ಕೃಷ್ಣನೇ ಹೇಳಿದ್ದಾನಲ್ಲಾ. ಅದರಂತೆ ಯಾವುದೇ ಫಲಾಪೇಕ್ಷ ಇಲ್ಲದೆ ನಮ್ಮ ಕರ್ತವ್ಯಗಳನ್ನು ಮಾಡುತ್ತಿರಬೇಕು.

ಶ್ರೀ ವೈಷ್ಣವ ಸಂಪ್ರದಾಯದಲ್ಲಿ ಮಹಾಲಕ್ಷ್ಮಿಗೆ ವಿಶಿಷ್ಟಸ್ಥಾನ ವಿದೆ. ಮಹಾಲಕ್ಷ್ಮಿಯನ್ನು ಪುರುಷಕಾರರೆಂದು ಭಾವಿಸುತ್ತಾರೆ. ಮನುಷ್ಯನು ಎಷ್ಟೇ ತಪ್ಪುಗಳನ್ನು ಮಾಡಿದ್ದರೂ ಆ ಮಹಾತಾಯಿ ತನ್ನ ಮಕ್ಕಳ ತಪ್ಪುಗಳನ್ನು ಮನ್ನಿಸುವಂತೆ ಭಗವಂತನಲ್ಲಿ ಬೇಡಿ ಆ ಚೇತನನ ತಪ್ಪುಗಳನ್ನು ಮನ್ನಿಸುವಂತೆ ಮಾಡುತ್ತಾಳೆ. ರಾಮಾಯಣದಲ್ಲಿ ಈ ಪ್ರಸಂಗ ಬರುತ್ತದೆ. ಹನುಮಂತನು ಸೀತೆಗೆ ಹಿಂಸೆ ಕೊಟ್ಟ ರಾಕ್ಷಸಿಯನ್ನು ಸಂಹರಿಸಲು ಅಪ್ಪಣೆ ಕೇಳಿದಾಗ ಆ ಸೀತಾಮಾತೆ ಬೇಡ - ಎಂದು ಹೇಳಿದುದನ್ನು ನೆನಪಿಸಿಕೊಳ್ಳಬಹುದು. ಹೀಗಾಗಿ ಲಕ್ಷ್ಮಿಯು ಭಗವದ್ಭಕ್ತರ ಪಾಲಿಗೆ ತಾಯಿ ಆಗಿ ಕಾರ್ಯನಿರ್ವಹಿಸುತ್ತಾಳೆ. ಇಂತೆಯೇ ಕಾಕಾ ಸುರನನ್ನು ಸಂರಕ್ಷಿಸಿದುದು. ಪ್ರಹ್ಲಾದನು ಹಿರಣ್ಯಕಶಿಪುವನ್ನು ವಧಿಸಿದ ಉಗ್ರನರಸಿಂಹನನ್ನು ಮೊರೆಯಿಟ್ಟಾಗ ಶಾಂತನಾದ ಲಕ್ಷ್ಮೀನರಸಿಂಹನಾದ ಬಗೆಯನ್ನು ನಾವು ಇಲ್ಲಿ ಸ್ಮರಿಸಬಹುದು. ಶ್ರೀ ವೈಷ್ಣವ ಸಿದ್ಧಾಂತದ ಪ್ರಕಾರ ಭಗವಂತ ಭಾಗವತ ಅಪಚಾರವೆಂಬುದನ್ನು ಎಂದಿಗೂ ಸಹಿಸುವುದಿಲ್ಲ. ಭಾಗವತರ ಪರಾಭವವನ್ನು ಭಗವಂತ ಎಂದಿಗೂ ಸಹಿಸಲಾರ. ಇದಕ್ಕೆ ದೂರ್ವಾಸರು ಹಾಗೂ ಅಂಬರೀಷರ ಕಥೆಯೇ ಸಾಕ್ಷಿ. ಆದಿ ಶೇಷನ ಅವತಾರವೆಂದಣಿಸಿದೆ ಲಕ್ಷ್ಮಣನಲ್ಲಿ ಸೀತಾ ಮಾತೆಯು ಮಾಡಿದ ಅಪರಾಧಕ್ಕಾಗಿ ರಾಮನಿಂದ ಪರಿ



ತ್ಯಕ್ತಳಾಗಿ ಲಂಕಾ ವಾಸ ಮಾಡಬೇಕಾದ ಶಿಕ್ಷೆಯನ್ನು ಅನುಭವಿಸಬೇಕಾಯಿತು. ಆದ್ದರಿಂದ ಭಾಗವತರ ಅಪಚಾರ ಬಹಳ ಪಾಪಕರವಾದುದು ಎಂಬುದು ಅಂದಿಗೂ, ಇಂದಿಗೂ, ಎಂದಿಗೂ ಸತ್ಯವಾದದ್ದು.

ಭಗವಂತನ ಭಕ್ತನನ್ನು ಕಂಡತಕ್ಷಣ ದೀರ್ಘದಂಡ ಪ್ರಣಾಮವನ್ನು ಮಾಡಬೇಕೆಂಬುವುದು ಶ್ರೀ ವೈಷ್ಣವ ಧರ್ಮದ ಸಂಪ್ರದಾಯ

"ಯಃ ಪಶ್ಯತಿ ಶುಭಾಚಾರಂ ವೈಷ್ಣವಂ ವೀತಕಲ್ಮಷಂ
ಯಸ್ಮಿನ್ ತಸ್ಮಿನ್ ಕುಲೇ ಜಾತಂ ದಂಡವತ್ ಪ್ರಣ ಮೇಕ್‌ಭವಿ."

ಭಗವಂತನ ಭಕ್ತನು ಯಾರೇ ಆಗಲಿ ಯಾವ ಕುಲದವನೇ ಆಗಲಿ ಕುಡಿವುದೊಂದೇ ನೀರು ಸುಡುವುದೊಂದೇ ಅಗ್ನಿ ಇರುತಿರಲು ಕುಲಗೋತ್ರ ನಡುವೆ ಎತ್ತಣದು ಸರ್ವಜ್ಞ ಅವನು ಸರ್ವಶ್ರೇಷ್ಠನು. ಕಾರಣ ಎಲ್ಲರ ಹೃದಯದ ಅಂತರಾಳದಲ್ಲಿ ಅಂತರ್ಯಾಮಿಯಾಗಿ ಪರಮಾತ್ಮನು ಇದ್ದಾನೆ. ಜಗದ್ರಕ್ಷಕನಾದ ಸೂರ್ಯನಾರಾಯಣನು ಎಲ್ಲರ ಎಲ್ಲದರ ಮೇಲೂ ತನ್ನ ಕೃಪೆಯ ಕಿರಣಗಳನ್ನು ಚಾಚಿ ಪರಿಶುದ್ಧರನ್ನಾಗಿ ಮಾಡುತ್ತಾನೆ. ಗಂಗಾಮಾತೆ ಸಮಸ್ತ ಜೀವ ಕೋಟಿಗೂ ಧಾರಕಳಾಗಿ ಪೋಷಕಳಾಗಿದ್ದಾಳೆ ಅಲ್ಲವೇ? ಯಾರ ಮನೆಯ ಹಸುವಾಗಲಿ ಅದು ನೀಡುವ ಹಾಲು ಅಮೃತಪ್ರಾಯವಾಗಿದೆ ಅಲ್ಲವೇ? ಇಂದಿಗೂ ಎಂದೆಂದಿಗೂ ವಿವಿಧ ಜಾತಿಯಲ್ಲಿ ಹುಟ್ಟಿರುವ ಆಳ್ವಾರರುಗಳು ಶ್ರೀ ವೈಷ್ಣವರಿಗೆ ನಿತ್ಯಸ್ಮರಣೀಯರಾಗಿದ್ದಾರೆ ಅಲ್ಲವೇ !

ಭಗವಂತನ ದಿವ್ಯಗುಣಗಳನ್ನು ಅನುದಿನವೂ ತಪ್ಪದೆ ಅನುಸಂಧಾನ ಮಾಡಿ, ಆಚಾರ್ಯ ಮುಖೇನ ದ್ವಯಮಂತ್ರ ಅಷ್ಟಾಕ್ಷರಿ ಮಂತ್ರಗಳ ಉಪದೇಶ ಹೊಂದಿ ಭಗವಂತನನ್ನೇ ಅನನ್ಯ ಭಕ್ತಿಯಿಂದ ಶರಣಾದರೆ ಅಂತಹವರನ್ನು ಪರಮಾತ್ಮ ಉದ್ಧಾರ ಮಾಡುತ್ತಾನೆ. ಇದೇ ಅನನ್ಯ ಶರಣಾಗತಿಯ ಸಾರ.

ವಿಶಿಷ್ಟಾದ್ವೈತದ ಸಾಧನ ಮಾರ್ಗದಲ್ಲಿ ತೆಂಗಲೆ ಹಾಗೂ ವಡಗಲೆ ಎಂಬುದಾಗಿ ಬೇರೆ ಬೇರೆ ಪಂಗಡಗಳಿವೆ. ಶ್ರೀ ರಾಮಾನುಜರು ಹಾಕಿದ ಸಸಿ ಎರಡು ಕವಲುಗಳಾಗಿ ಹೆಮ್ಮರವಾಗಿ ಬೆಳೆಯಿತು.

ತೆಂಗಲೆ ಪಂಥಕ್ಕೆ ಪಿಳ್ಳೈ ಲೋಕಾಚಾರ್ಯರು ಮುನ್ನಡೆಸಿದರು ತೆನ್ ಕಲೈ - ತೆಂಗಲೈ, ಅಂದರೆ ಇದರಲ್ಲಿ (ದಕ್ಷಿಣದ ಕಲೆ) ತಮಿಳು ಭಾಷೇ ಆಧಾರವಾದದೊಂದೆ ಇಲ್ಲಿ ನಾಲಾಯಿರ ದಿವ್ಯ ಪ್ರಬಂಧವು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯಿತು. ಈ ಪಂಥದ ಪ್ರಕಾರ ಮಾರ್ಜಾಲ ಕಿಶೋರ ನ್ಯಾಯದಂತೆ ಪ್ರಪನ್ನನಿಗೆ ಕರ್ಮಾನುಷ್ಠಾನವು ಅಷ್ಟೇನು ಅವಶ್ಯಕವಿಲ್ಲ ಪರಮಾತ್ಮನ-ಕೃಪೆ ಭಕ್ತನ ಮೇಲೆ ಸದಾಕಾಲವೂ ಇರುತ್ತದೆ. ಬೆಕ್ಕು ತನ್ನ ಮರಿಯನ್ನು ಕಾಪಾಡುವಂತೆ ಸ್ವ ಪ್ರಯತ್ನವಿಲ್ಲ ಆ ಕೃಪೆಯು ಅವನ ಮೇಲೆ ಇದ್ದೇ ಇರುತ್ತದೆ ಎಂಬುದಾಗಿ ಸಾಧಕನು ತಿಳಿಯಬೇಕು.

ಶ್ರೀ ವೈಷ್ಣವರ ಮತ್ತೊಂದು ಶಾಖೆಯ ಮುಖ್ಯ ಪ್ರವರ್ತಕರು ಶ್ರೀ ವೇದಾಂತದೇಶಿಕರು. ಇವರ ಕಾಲದಲ್ಲಿಯೂ ಶ್ರೀ ವೈಷ್ಣವ ಧರ್ಮ ಸರ್ವತೋಮುಖವಾಗಿ ಬೆಳೆಯಿತು. ಇವರು ವಿದ್ಯಾರಣ್ಯ ಸಮಕಾಲೀನ ಇವರ ಪಂಥವು ವಡಗಲೆ - ಸಂಪ್ರದಾಯವೆನಿಸಿಕೊಂಡಿತು. ವಡಗಲೆ - ಉತ್ತರದ ಕಲೆ ಅಂದರೆ ವೇದ ಉಪನಿಷತ್ತಿನ ಮೇಲೆ ಆಧಾರಿತವಾದವು.

ವೇದಾಂತ ದೇಶಿಕರ ಪ್ರಕಾರ ಮರ್ಕಟಕಿಶೋರ ನ್ಯಾಯದಂತೆ ಪ್ರಪನ್ನನಿಗೆ ಕರ್ಮಾನುಷ್ಠಾನ ಅತ್ಯವಶ್ಯಕ. ಕೋತಿ ಮರಿ ತನ್ನ ತಾಯಿಯನ್ನು ಗಟ್ಟಿಯಾಗಿ ಅಪ್ಪಿ ಹಿಡಿದಂತೆ ಸಾಧಕನು ಭಗವಂತನನ್ನು ಭಕ್ತಿಯಿಂದ ಭಜಿಸಲೇಬೇಕು. ವಿಶಿಷ್ಟಾದ್ವೈತದಲ್ಲಿ ಅನನ್ಯ ಭಕ್ತಿ. ಆರಾಧನೆಗಳು ಮುಖ್ಯ ಅಂಗಗಳಾಗಿವೆ. ಸಾಧನಾಮಾರ್ಗದಲ್ಲಿ ಎರಡು ಕವಲುಗಳಾಗಿ ಕಂಡರೂ ಈ ಎರಡೂ ಪಂಥದ ಗುರಿಯೊಂದೇ.. ಅದೇ - ವೈಕುಂಠೇತು ಪರೇಲೋಕೆ - ಶ್ರಿಯಾಸಾರ್ಧಂ ಜಗತ್ಪತಿ ಆಸ್ತೇ ಆಸ್ತೇ ವಿಷ್ಣು ರಚಿಂತ್ಯಾತ್ಮ ಭಕ್ತೈಃ ಭಾಗವತೈ ಸಹ..... ಎಂಬುದೇ ಶಾಶ್ವತವಾದ ಸತ್ಯ. ಈ ಮತದ ಪ್ರಕಾರ ಬ್ರಹ್ಮ, ಜೀವ, ಜಗತ್ತು ಎಲ್ಲವೂ ಸತ್ಯ, ಮಿಥ್ಯೆ ಅಲ್ಲ. ಶ್ರೀಮನ್ನಾರಾ ಯಣನು ನಮಗೆ ಪ್ರಾಪ್ತನೂ ಹೌದು, ಪ್ರಾಪಕನೋ ಹೌದು

ಒಟ್ಟಿನಲ್ಲಿ ಹೇಳುವುದಾದರೆ ಇಲ್ಲಿನ ಇಹಲೋಕದ ಸುಖ, ಸಂಪತ್ತು, ಮನೆ, ಮಡದಿ, ಮಕ್ಕಳು ಎಲ್ಲವೂ ಅತ್ಯಲ್ಪ, ಇದು ನಿಜವಾದ ಸುಖವಲ್ಲ. ಸ್ವರ್ಗಾದಿ ಸುಖಗಳು ಬಹುಕಾಲ ಆನಂದವನ್ನು ಕೊಡತಕ್ಕುದಲ್ಲ ನಮ್ಮ ಕರ್ಮ ಸವೆದ ನಂತರ ಪುನಃ ಇಹಲೋಕಕ್ಕೆ ಮರಳಿ ಬರಬೇಕಾಗುತ್ತದೆ. "ಪುನರಪಿ ಜನನಂ, ಪುನರಪಿಮರಣಂ, ಪುನರಪಿ ಜನನೀ ಜಗದೇ ಶಯನಂ ಇಹ ಸಂಸಾರೇ. ಬಹುದುಃಖರೆ.... ಕೃಪಯಾ ಪಾರೇ ಪಾಹಿಮುರಾರೇ" ಎಂದು ಶಂಕರರು ಭಜ ಗೋವಿಂದಂ ಎಂಬ ಸ್ತೋತ್ರದಲ್ಲಿ ಹೇಳಿರುವಂತೆ ಪ್ರಾಪಂಚಿಕ ಸುಖ ಶಾಶ್ವತ ಸುಖವಲ್ಲ ಶಾಶ್ವತವಾದ ಸುಖ ಎಂದರೆ ಪರಮಪದವನ್ನು ಹೊಂದುವ ಮಾರ್ಗ. ಇದಕ್ಕೆ ಸುಲಭವಾದ ಮಾರ್ಗ ಈ ಹಿಂದೆ ಹೇಳಿದಂತೆ ಶರಣಾಗತಿ ಮಾರ್ಗ ಅಥವಾ ಪ್ರಪತ್ತಿ ಮಾರ್ಗವೇ ಚರಮೋಪಾಯ. (ಕೊನೆಯ ಉಪಾಯ)

ಭಗವಂತ ತನ್ನ ಎಲ್ಲ ಅವತಾರಗಳಲ್ಲಿಯೂ ಭಕ್ತನ ಕೈಕೊಂಡ ಶರಣಾಗತಿಯ ಪ್ರಾಧಾನ್ಯತೆಯನ್ನು ಕಾಣಬಹುದು. ಅದರಲ್ಲೂ ಪ್ರಮುಖವಾಗಿ ಶ್ರೀರಾಮಾವತಾರ ಹಾಗೂ ಕೃಷ್ಣಾವತಾರದಲ್ಲಿ ಭಕ್ತನಿಗೆ ಪ್ರಪನ್ನನಿಗೆ ಅಭಯ ಪ್ರಧಾನ ಮಾಡಿರುವುದು ಅತ್ಯಪೂರ್ವ.

"ಸಕ್ರ ದೇವ ಪ್ರಪನ್ನಾಯ ತವಾಸ್ಮೀತಿ ಚಯಾ ಚತೇ
ಅಭಯಂ ಸರ್ವ ಭೂತೇ ಭ್ಯೋ ದದಾಮ್ಯೇತದ್ ವ್ರತಂಮಮ"

ಎಂದು ಶ್ರೀ ರಾಮನು ಅಭಯ ಪ್ರಧಾನ ಮಾಡಿದ

ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ
ಅಹಂತ್ವಾಂ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ

ಎಂದು ಶ್ರೀ ಕೃಷ್ಣ ಅಭಯವನ್ನಿತ್ತನು.

ಅಂತಹ ಪರದೈವ ಶ್ರೀಮನ್ನಾರಾಯಣನ ಚರಣದಲ್ಲಿರುವ ನಾವೆಲ್ಲಾ ಕೃತಕೃತ್ಯರಾಗೋಣ.

ಪ್ರಪತ್ತಿ ಮಾರ್ಗದ ಹಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆ.ಅದನ್ನೇ ಷಡಾಂಗಯೋಗಗಳೆಂದು ಕರೆಯುತ್ತಾರೆ. ಅವುಯಾವುದೆಂದರೆ

1) ಅನುಕೂಲ ಸಂಕಲ್ಪ 2) ಪ್ರತಿಕೂಲವರ್ಜನಂ 3) ಕಾರ್ಪಣ್ಯ 4) ರಕ್ಷಿಶ್ಯತಿ ಇತಿವಿಶ್ವಾಸ: 5) ಗೋಪ್ತೃತ್ವವರ್ಣನಂ 6) ಆತ್ಮನಿಕ್ಷೇಪ. ಎಂದು ಪ್ರಪನ್ನ ಪಾರಿಜಾತ ಎಂಬ ಕೃತಿಯಲ್ಲಿ ನಡಾದೂರು ಅಮ್ಮಾಳ್ ಪ್ರತಿಪಾದಿಸಿದ್ದಾರೆ. ಅವರ ಪ್ರಕಾರ ಭಕ್ತಿ ಪುಷ್ಪಗಳ ವಿಶೇಷತೆಯೇನೆಂದರೆ

ಅಹಿಂಸಾಪ್ರಥಮಂ ಪುಷ್ಪಂ, ಪುಷ್ಪ ಮಿಂದ್ರಿಯ ನಿಗ್ರಹಃ
ಸರ್ವಭೂತದಯಾಪುಷ್ಪಂ, ಕ್ಷಮಾಪುಷ್ಪಂ ವಿಶೇಷತಃ
ಜ್ಞಾನಪುಷ್ಪಂ ತಪಃ ಪುಷ್ಪಂ, ಧ್ಯಾನ ಪುಷ್ಪಂ ತಥೈವ ಚ
ಸತ್ಯಮಷ್ಟ ವಿಧಂ ಪುಷ್ಪ ವಿಷ್ಣೋ ಪ್ರೀತಿಕರಂ ಭವೇತ್

ಇದೆಷ್ಟು ಸೊಗಸಾದ ಎಲ್ಲ ಕಾಲಕ್ಕೂ ಸತ್ಯವಾದ ಪವಿತ್ರವಾದ ಶ್ಲೋಕ ಮಾಡಬೇಕೆಂಬ ಸಂಕಲ್ಪ ಮಾಡಿಕೊಳ್ಳುವುದು. ಆ ಸಂಕಲ್ಪದಂತೆ ಈ ಜೀವನದಲ್ಲಿ ನಡೆದುಕೊಳ್ಳುವುದು.

**ಪ್ರತಿಕೂಲ ವರ್ಜನಂ:** ಭಗವಂತನಿಗೆ ಅಪ್ರಿಯವಾದುದ್ದನ್ನು ನಾವು ಎಂದಿಗೂ ಮಾಡಬಾರದು. ದ್ವೇಷ ಅಸೂಯೆ ವ್ಯಭಿಚಾರ ಮುಂತಾದ ಕೆಟ್ಟಗುಣಗಳನ್ನು ನಾವು ತೊರೆಯಬೇಕು.

**ಕಾರ್ಪಣ್ಯ:** ಈ ಸಂಸಾರವೆಂಬುದು ಘೋರವಾದದ್ದು ಅನಂತಕ್ಲೇಶ ಭಾಜನವಾದುದು. (ಸಂಸಾರ ಸಾಗರಂ ಘೋರಂ ಅನಂತಕ್ಲೇಶ ಭಾಜನಂ) ಎಂಬುದನ್ನು ಅರಿತು ಹೇಗಾದರೂ ಈ ದುಃಖ ಸಾಗರದಿಂದ ಪಾರುಮಾಡಯ್ಯಾ, ಬೇರೆ ಇನ್ನಾರು ಇನ್ನಾವುದೂ ಗತಿಯಿಲ್ಲ ನೀನೇ ಗತಿ ಎಂದು ಪ್ರಾರ್ಥಿಸುವುದು "ನೀನೇ ಅನಾಥ ಬಂಧು ಕಾರುಣ್ಯ ಸಿಂಧೂ" ಎಂದು ಪುರಂದರದಾಸರ ಕೃತಿಯನ್ನು ಗಮನಿಸಬಹುದು."ನಾರಾಯಣನೇ,ನಮಕ್ಕೇ ಪರೈ ತರುವಾನ್" ಎಂಬ ಆಂಡಾಳ್‌ರ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

"ರಕ್ಷಿಶ್ಯತಿ ಇತಿ ಮಹಾವಿಶ್ವಾಸಃ" ಜೀವಾತ್ಮನು ಪ್ರಾಪಂಚಿಕ ಮೋಹದ ಬಲೆಯಲ್ಲಿ ತೊಳಲುತ್ತಿರುವಾಗ ತನ್ನ ಉಜ್ಜೀವನ ರಕ್ಷೆಗಾಗಿ ಆಶ್ರಯವನ್ನು ಆಸರೆಯನ್ನು ಅಪೇಕ್ಷಿಸುತ್ತಾನೆ. ಬಹುಮಟ್ಟಿಗೆ ಜೀವಾತ್ಮ ತಬ್ಬಲಿತನಕ್ಕೆ ಬಲಿಯಾಗುತ್ತಾನೆ. ಇಂತಹ ಸಂದರ್ಭಗಳಲ್ಲಿ ಆತ್ಮ ಪರಮಾತ್ಮನನ್ನೇ ಅವಲಂಭಿಸುತ್ತಾನೆ.

ಉಯರ್ವರ ಉಯರ್‌ನಲಮ್ ಉಡ್ಯೆಯವನ್ ಯವನವನ್
ಮಯರ್ವರ ಮದಿನಲಮ್ ಅರುಳಿನನ್ ಯವನವನ್
ಅಯರ್ವರಿಮ್ ಅಮರರ್ಹಳ್ ಅಧಿಪತಿ ಯವನವನ್
ತುಯರರಿ ಶುಡರಡಿ ತೊಳುದೆಳೆನ್ಮನನೇ

ಎಂಬ ನಮ್ಮಾಳ್ವಾರರ ಪಾಶುರವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

**ಗೋಪ್ತತ್ವವರ್ಣನ:** ಭಕ್ತನು ಪರಮಾತ್ಮನಲ್ಲಿ ರಕ್ಷಣೆಯ ಭರವಸೆಯನ್ನು ಪೂರ್ಣವಾಗಿ ಹೊಂದಿರುವುದರಿಂದ ಆತನನ್ನು ನಿರಂತರವಾಗಿ ರಕ್ಷಣೆಗಾಗಿ ಬೇಡಿ ಜನ್ಮಸಾಫಲ್ಯವನ್ನು ಪಡೆಯುವುದೇ ಗೋಪ್ತತ್ವವರ್ಣನ ಭಗವಂತ ಭಕ್ತನನ್ನು ಮಮ ಪ್ರಾಣಾಹಿ ಪಾಂಡವಾ' ಎಂದು ಮಹಾಭಾರತದಲ್ಲಿ ತಿಳಿಸಿದ್ದಾನೆ.

**ಆತ್ಮನಿಕ್ಷೇಪ:** ಜೀವಾತ್ಮನು ತನ್ನನ್ನು ನಾನೇ ಪರಮಾತ್ಮನಿಗೆ ಸಮರ್ಪಿಸಿಕೊಳ್ಳುವುದೇ ಆತ್ಮ ನಿಕ್ಷೇಪ ಸ್ವಾಮಿಯ ಸ್ವತ್ತಾದ ನಾವು ಎಂದೆಂದಿಗೂ ಸ್ವಾಮಿಗೆ ಸೇರಿದವರು ಎಂಬ ನಿಶ್ಚಲ ಭಾವ ನಮ್ಮಲ್ಲಿರಬೇಕು. ಈ ಸಮರ್ಪಣಾ ಭಾವವೇ ನಮ್ಮ ಆತ್ಮರಕ್ಷಣೆಗೆ ಆತ್ಮೋಜ್ಜೀವನಕ್ಕೆ ಮೂಲ ಕಾರಣವಾಗುತ್ತದೆ. ಆದ್ದರಿಂದ ಪೆರಿಯಾಳ್ವಾರರು ಹೇಳಿದಂತೆ

ಮಾರ್ವಮೆನ್ಬದೋರ್ ಕೋಯಿಲಮೈಕ್ಕು ಮಾದವ ನೆನ್ನುಮ್ ತೈಯವತ್ತೈ ನಾಟ್ಟಿ।
ಆರ್ವಮೆನ್ಬ ದೋರ್ ಪೂವಿಡವಲ್ಲಾರ್ಕ್ಕು ಅರವದಣ್ಣತ್ತಿ ಉಯ್ಯಲು ಮಾಮೆ॥

ಎಂದು ನಮ್ಮ ಹೃದಯ ದೇಗುಲದಲ್ಲಿ ಮಾದವ ದೈವವನ್ನು ಇಟ್ಟು ಶ್ರದ್ಧಾ ಪುಷ್ಪವನ್ನು ಸಮರ್ಪಿಸಿ ಕೃತಾರ್ಥರಾಗೋಣ. ಆದ್ದರಿಂದ ಶ್ರವಣ ಕೀರ್ತನ, ಸ್ಮರಣ ಪಾದ ಸೇವನ, ಅರ್ಚನ, ವಂದನ, ಧ್ಯಾನ, ಸಖ್ಯ, ಆತ್ಮ ನಿವೇದನದೊಂದಿಗೆ ಭಗವಂತನನ್ನು ಆರಾಧಿಸೋಣ. ಅವನ ಕೃಪೆಗೆ' ಪಾತ್ರರಾಗೋಣ.

ಆಳ್ವಾರ್ ತಿರುವಡಿಹಳೇ ಶರಣಂ
ನಂಬೆರುಮಾನಾರ್ ತಿರುವಡಿಹಳೇ ಶರಣಂ



**ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ**

## ಗೋ ದಾತರಿಗೆ ವಿಜ್ಞಪ್ತಿ

1) ದೇಶವಾಳಿ ಗೋವುಗಳನ್ನು ತಿರುಪತಿಯಲ್ಲಿನ ತಿ.ತಿ.ದೇವಸ್ಥಾನಕ್ಕೆ ಸಂಬಂಧಿಸಿದ ಶ್ರೀ ವೇಂಕಟೇಶ್ವರ **"ಗೋ ಸಂರಕ್ಷಣೆ"** ಶಾಲೆಯಲ್ಲಿ ಮಾತ್ರವೇ ಮುಂಚಿತವಾಗಿ ಅನುಮತಿಯೊಂದಿಗೆ ಸ್ವೀಕರಿಸಲಾಗುತ್ತದೆ.

2) ಆರೋಗ್ಯವಾಗಿರುವ ದೇಶವಾಳಿ ಗೋ ಜಾತಿಗೆ ಸೇರಿದಂತಹ ಹಸುಗಳನ್ನು ಮಾತ್ರವೇ ಸ್ವೀಕರಿಸಲಾಗುತ್ತದೆ.


**ಗೋಸಂರಕ್ಷಣಾಧಿಕಾರಿ,**
**ತಿ.ತಿ.ದೇ., ತಿರುಪತಿ**

**॥ ಹರೇ ಶ್ರೀನಿವಾಸ॥**

**ಪುಷ್ಯ ಬಹುಳ ಅಮಾವಾಸ್ಯೆ, ಜನವರಿ 24 ಪುರಂದರದಾಸರ ಪುಣ್ಯದಿನ ; ತನ್ನಿಮಿತ್ತ ಈ ಸಾಂದರ್ಭಿಕ ನುಡಿ ನಮನ**

# "ಪುರಂದರ ಗುರುಂ ವಂದೇ ದಾಸ ಶ್ರೇಷ್ಠಂ ದಯಾನಿಧಿಂ"

**- ಶ್ರೀಮತಿ. ಕೆ.ವಿ. ಪದ್ಮಾವತಿ**
**9972222791**



ದಾಸರು ಎಂದು ನೆನಪಾದ ಕೂಡಲೇ ನಮ್ಮ ನಾಲಗೆಯ ಮೇಲೆ ನಲಿದಾಡುವ ಮೊದಲ ಹೆಸರು ಪುರಂದರದಾಸರದ್ದು, ದಾಸ ಸಾಹಿತ್ಯವನ್ನು ಜನಪ್ರಿಯ, ಜನಪದಗೊಳಿಸಿದವರಲ್ಲಿ ಬಹು ಮುಖ್ಯರು. ಅವರು ಬಾಳಿದ ಕಾಲವೇ ಹರಿದಾಸ ಸಾಹಿತ್ಯದ ವಸಂತಕಾಲ. ಗುರುಗಳಾದ ವ್ಯಾಸ ರಾಜರ ಪ್ರೀತಿ ಆದರ ದೊರಕಿದರೂ, ಅವರು ಮಠದಲ್ಲಿ ನಿಲ್ಲಲಿಲ್ಲ, ವಿಜಯ ನಗರ ಅರಸರ ಮನ್ನಣೆ, ಗೌರವಕ್ಕೆ ಭಾಜನರಾದರೂ,ಅದಕ್ಕೆ ಕೈಚಾಚಲಿಲ್ಲ. ಹೆಂಡತಿ ಮಕ್ಕಳೊಡನೆ ಇದ್ದರೂ ಸಂಸಾರದ ಜಂಜಡದಲ್ಲಿ ಸಿಲುಕಿಕೊಳ್ಳಲಿಲ್ಲ. "ಇರಬೇಕು ಇಲ್ಲದಂತೆ ಇರಬೇಕು" ಎಂದು ಹಾಡಿದಂತೆಯೇ ತಾವೂ ಬದುಕಿದರು. ಹಣದ ಆಸೆ ತೊರೆದು, ಹಾಡಿನ ಹಂಬಲ ಹಿಡಿದು ಹರಿದಾಸರಾದರು, ತಂಬೂರಿಯ ನಾದದಲ್ಲಿ ಭಕ್ತಿಯ ಉನ್ಮಾದದಲ್ಲಿ ನಾದ ಬಿಂಬನನ್ನು ಅರಸಿದರು, ಆರಾಧಿಸಿದರು.

ಅವರ ಅಗಾಧ ಕೃತಿ ಶ್ರೇಣಿಯಲ್ಲಿ, ಹರಿಭಕ್ತಿಯ ಹೊಳಪಿನಲ್ಲಿ ಸಾಮಾಜಿಕ ಕಳಕಳಿ, ಗಂಭೀರ ಚಿಂತನೆ, ನವುರಾದ ವಿಡಂಬನೆ ಇದೆ. ದಿನನಿತ್ಯದ ತಿಳಿಯಾದ ಮಾತುಗಳಲ್ಲಿ ಭಕ್ತಿ ಭಾವ ತುಂಬಿದ ದಾಸರ ಹಾಡುಗಳು, ಸಮಾಜದ ಎಲ್ಲಾ ವರ್ಗದ ಜನರನ್ನು ನೇರವಾಗಿ ಮುಟ್ಟಿದವು. ಒಮ್ಮೆ ಕೇಳಿದರೆ ಮತ್ತೊಮ್ಮೆ ಕೇಳಬೇಕೆಂಬ ರಚನೆಗಳ ತಾಜಾತನ ಇಂದಿಗೂ ಮಾಸಿಲ್ಲ. ಇವರನ್ನು ನಾರದಾಂಶ ಸಂಭೂತ ಎಂದು ಭಕ್ತಿಯಿಂದ ನೆನೆಯುತ್ತದೆ ದಾಸಕೂಟ. ಪುರಂದರದಾಸರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತದ ಬೆಳವಣಿಗೆಗೆ ಆದ ಉಪಕಾರ ಮಹತ್ತರವಾದುದು. ಭಕ್ತಿ ಸಾಮ್ರಾಜ್ಯದ ಮುಕುಟರಹಿತ ಮಹಾರಾಜರಾಗಿ ಪ್ರಜ್ವಲಿಸುವ ದಾಸರು ಸಂಗೀತದ ಪ್ರಾಥಮಿಕ ಪಾಠಗಳನ್ನು 'ಪಿಳ್ಳಾರಿ ಗೀತೆ' ಗಳು ಎಂಬ ಸರಳ ಶುದ್ಧ ಶೈಲಿಯ ಪಾಠ ಪದ್ಧತಿಯನ್ನು ಪ್ರಚುರಗೊಳಿಸಿ ಪರಿವರ್ತನಾಶೀಲ ಪ್ರಯೋಗದಲ್ಲಿ ಯಶಸ್ಸು ಕಂಡವರು.

## ಪುರಂದರ ಪರಿಮಳ

ದಾಸರೇನು ಸನ್ಯಾಸಿಗಳಲ್ಲ, ಜಗತ್ತಿಗೆ ಅಂಜಿ ಓಡಿದ ವಿರಕ್ತರಲ್ಲ, ಮೂಲತಃ ಚಿನ್ನದ ವ್ಯಾಪಾರಿಗಳು; ಏಟು ಬಿದ್ದಷ್ಟೂ ಚಿನ್ನ ಪುಟವಾಗುವಂತೆ ಶ್ರೀನಿವಾಸ ನಾಯಕರು ಭೋಗ ಜೀವನದಿಂದ ಬೇಸತ್ತು ಭಗವಂತನ ಒಲುಮೆಯ ಗೀಳು ಹಿಡಿದು ಹರಿದಾಸರಾದರು. ತಮ್ಮಲಿದ್ದ ಹೊರೆಯೆಂದು ಕಂಡಿದೆಲ್ಲ 'ಕೃಷ್ಣಾರ್ಪಣ'ವೆಂದು ದಾನ ಮಾಡಿ ಬಡವರಾಗಿ ಹೊರಟ ಅವರು 'ನಾನೇಕೆ ಬಡವನೋ ನಾನೇಕೆ ಪರದೇಶಿ'

ಎಂಬ ಆತ್ಮವಿಶ್ವಾಸವನ್ನು ತಳೆದು, ಜೀವನ ಧರ್ಮ ಕಲಿಸಿದ ಹೆಂಡತಿಯನ್ನು ಗುರುವೆಂದು ತಿಳಿದು 'ಹೆಂಡತಿ ಸಂತತಿ ಸಾವಿರವಾಗಲಿ' ಎಂದು ಹೊರಟಿದ್ದು ಭಕ್ತಿ ವ್ಯಾಪಾರಕ್ಕೆ... ಈ ವ್ಯವಹಾರದಲ್ಲಿ ವ್ಯತ್ಯಾಸವೆಂದರೆ ಇಲ್ಲಿ ಕೊಟ್ಟಿದ್ದು ಭಕ್ತಿಯನ್ನೇ, ಪಡೆದಿದ್ದು ಭಕ್ತಿಯನ್ನೇ. ಉಪಾಯದಿಂದ ಅಪಾರ ಮಹಿಮನನ್ನು ನೆನೆಯುತ್ತಾ ಅಂದು ನೆಟ್ಟ ಭಕ್ತಿಯ ಬೀಜ ಇಂದಿಗೂ ಜೀವಂತವಾಗಿದ್ದು ಹೆಮ್ಮರವಾಗಿ ಬೆಳೆದಿದೆ. ಅವರ ಸಂಗೀತಾತ್ಮಕ ಸಾಹಿತ್ಯದೊರತೆಯಿಂದ ಚಿಮ್ಮಿದ ಚಿಲುಮೆ ಬತ್ತಿ ಹೋಗದೆ; ಸದಾ ಉಕ್ಕಿ ಹರಿಯುವ ತಂಪು ನೀಡುವ ಜೀವಝರಿಯಾಗಿದೆ.

ಕಡು ಜ್ಞಾನಭಕ್ತಿ ವೈರಾಗ್ಯದ ನಿಧಿಗಳಾಗಿ ನಿಂತ ದಾಸರು 'ದಾಸನಾಗುವುದು ಏಸು ಜನ್ಮದ ಸುಕೃತ' ವೆಂದು ಹಾಡುತ್ತ ಗುರುಕರುಣದಿಂದಲೇ ಹರಿಚರಣದ ಒಲವು ಮೂಡೀತು, ಅದಕ್ಕೆಂದೇ ದಾಸರು ಹಾಡಿದರು 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಅದರಂತೆ 'ದಾಸರೆಂದರೆ ಪುರಂದರದಾಸರಯ್ಯ' ಎಂಬ ಪ್ರಶಂಸೆಗೆ ಪಾತ್ರರಾದವರು. ದಾಸ ಸಾಹಿತ್ಯ ಕೆಲವೆಡೆ ಕಾಂತಾ ಸಮ್ಮಿತೆಯಾಗಿಯೂ ತೋರುವುದು. ಸಂದರ್ಭೋ ಚಿತವಾಗಿ ಮೂರು ರೂಪಧರಿಸಿದ ಈ ಸಾಹಿತ್ಯದ ಔನ್ನತ್ಯ ವನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ.ನಾಸ್ತಿಕರಿಂದ ಹಿಡಿದು ಆಸ್ತಿಕ ಶಿಖಾಮಣಿಗಳವರೆಗೂ ಅವರ ಕೃತಿಗಳಲ್ಲಿ ಬೆಳಕು ಸಿಕ್ಕುವುದು. ಸಂಸಾರದಲ್ಲಿ ಕ್ಲೇಶಪಟ್ಟು ಆರ್ತ ರಾದವರಿಗೆ ಪುರಂದರದಾಸರ ಪದಗಳಿಂದ ನೆಮ್ಮದಿ ಉಂಟಾಗಿ ಯಂತ್ರಮಯವಾಗುತ್ತಿರುವ ಇಂದಿನ ಜಗತ್ತಿಗೆ ಅನುಭವಸಾರದ ಉಕ್ತಿಗಳು, ಅಪ್ಪಟ ಮಾನವ ಧರ್ಮ ಬೋಧಿಸಿದ ಕೈದೀವಿಗೆಗಳು. ದುರ್ಮಾರ್ಗಿಗಳು, ಸನ್ಮಾರ್ಗಿ ಗಳಾಗಿರಲಿ, ಸನ್ಮಾರ್ಗಿಗಳು ಸಂತರಾಗಲಿ ಎಂಬ ಆಶಯ ಅವರ ಕೃತಿಗಳಲ್ಲಿ ಕಾಣುತ್ತೇವೆ.

ಬಯಲು ಮಂಟಪದ ಗಾಳಿಗೋಪುರವನ್ನೇರಿ ಬಾಳುವೆಗೆ ಅಳವಡಿಸಲಾಗದ ಕಗ್ಗವನ್ನು ಹೇಳಿ ಹೋಗುವ ಸ್ವಭಾವ ಅವರದ್ದಲ್ಲ. ಅವರು ಬಾಳಿದವರು. ಬಾಳನ್ನು ನೋಡಿದವರು, ಬೆಳಕನ್ನು ಕಂಡವರು. 'ತಂಬೂರಿ ಮೀಟಿ ದವ ಭವಾಬ್ಧಿ ದಾಟಿದವ' ಎಂದು ಎಲ್ಲವನ್ನೂ ತ್ಯಾಗ ಮಾಡಿ ನಿರ್ಲಿಪ್ತತೆ ಸಿದ್ಧಿಸಿದಾಗ ಬಡತನದಲ್ಲಿ ಕೂಡ ಸಿರಿತನಕ್ಕಿಂತ ಹೆಚ್ಚು ಸುಖ. ದೊಡ್ಡವರ ಕೃತಿಗಳೆಂದರೆ ಕನ್ನಡಿಯಿದ್ದಂತೆ, ನಾವು ಅವುಗಳನ್ನು ನೆಮ್ಮದುರು ಹಿಡಿದುಕೊಂಡರೆ ನಮ್ಮ ದೋಷಗಳೆಲ್ಲವೂ ಕಾಣುತ್ತದೆ. ಆಗಲಾದರೂ ನಮ್ಮನ್ನು ನಾವು ತಿದ್ದಿಕೊಳ್ಳಬೇಕು. ಇದೇ ಮಹಾನುಭಾವರಿಂದ ಲೋಕಕ್ಕೆ ಆಗುವ ಲಾಭ. ಈ ಕಾರಣಕ್ಕೆ ನಾವು ಅವರನ್ನು ಸದಾ ಸ್ಮರಿಸಬೇಕು. ಪುರಂದರದಾಸರ ಸಾಹಿತ್ಯದ ಒಂದು ಹೆಗ್ಗಳಿಕೆಯೆಂದರೆ ಅದು ಪಂಡಿತ ಮಂಡಳಿಯ ಸ್ವತ್ತಾಗುವುದ ಕ್ಕಿಂದ ಹೆಚ್ಚಾಗಿ ಜನಸಮುದಾಯದ ನಡುವಿನ ಆಚರಣೆಯ ಭಾಗವಾಗಿ ನೆಲೆಗೊಂಡಿರುವುದು. ಈ ದೃಷ್ಟಿಯಿಂದ ಅವರು ಈ ನಾಡಿನ ಜನಪದದ ಭಾಗವಾಗಿಯೂ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಂಡಿದ್ದಾರೆ.

ದಾಸತ್ವ ಎನ್ನುವುದು 'ಅಹಂ' ನ ನಿರಾಕರಣೆ. ಇದು ದಾಸರ ಸಾಧನೆಯಾದದ್ದು ಹಲವು ವಿಧದಲ್ಲಿ. ಕತೃತ್ವವನ್ನು ಇಲ್ಲವಾಗಿಸುವುದು ದಾಸತ್ವದ ಪ್ರಧಾನ ನೆಲೆ. ವ್ಯಕ್ತಿ ತನ್ನನ್ನು ವಿಸ್ತರಿಸಿಕೊಂಡಂತೆ ಕರ್ತೃತ್ವವೂ ಕರಗುತ್ತ ಹೋಗಿ ಬಹು ಕರ್ತೃತ್ವದ ಸಮುದಾಯದಲ್ಲಿ ಒಂದಾಗಿ ಬಿಡುತ್ತದೆ. ಈ ಅರ್ಥ ದಲ್ಲಿ ದಾಸರು ಸಮುದಾಯದ ದನಿಯೂ ಆಗುತ್ತಾರೆ. ಹಾಡು 'ತಿಳಿಸು'ವುದಿಲ್ಲ 'ಆಗು'ತ್ತದೆ. ಅರ್ಥವನ್ನು ಮೀರುವುದು ಅದರ ವಿಧಾನ. ಹೇಳದಂತಿರಬೇಕು. ಇದು ಹಾಡಿನ ಸ್ವರೂಪ. ಮಾಡ ದಂತಿರಬೇಕು - ಇದು ದಾಸರ ಆಶಯ. ಆದ್ದರಿಂದ ಎಲ್ಲ ವನ್ನೂ ಆಟವನ್ನಾಗಿಸಿದರು. ಆಟಕ್ಕೆ 'ಕುಣಿತ' ಎಂಬ ಅರ್ಥವೂ ಇದೆ. ದಾಸರು ಎಲ್ಲವನ್ನು ಕುಣಿಸಿದವರು. ಭಾಷೆ ಮತ್ತು ಅಭಿ ವ್ಯಕ್ತಿ ಮಾತ್ರವಲ್ಲ. ಅವರಲ್ಲಿ ವಸ್ತುವೂ ಕುಣಿಯುತ್ತದೆ. ಅವರ ದೇವರು ಕುಣಿಯುವ ದೇವರು. ತಾವೂ ಕುಣಿದರು ದೇವರನ್ನು ಕುಣಿಸಿದರು. ಸಮುದಾಯಕ್ಕೊಂದು ಕುಣಿತದ ಲಯವನ್ನು ಕೊಟ್ಟರು. ಈ ದೃಷ್ಟಿಯಿಂದ ದಾಸರ ಅಭಿವ್ಯಕ್ತಿಯೆಂದರೂ ಅದೇ, ಅನುಭಾವವೆಂದರೂ ಅದೇ.

ಪುರಂದರದಾಸರು ಮುರಿದು ಕಟ್ಟಿದವರು. ಸಿದ್ಧಾಂತ ವಿರಬಹುದು, ಪುರಾಣವಿರಬಹುದು, ಭಾಷೆಯಿರ ಬಹುದು, ಛಂದೋ ರೂಪವಿರಬಹುದು. ಎಲ್ಲವನ್ನು ಒಪ್ಪಿಕೊಳ್ಳುತ್ತಲೇ ಅದನ್ನೊಂದು ಬಿಡುಗಡೆಯ ಪರಿಧಿಗೆ ಒಯ್ದು ಮುಟ್ಟಿಸುವ ತಂತ್ರಗಾರಿಕೆಯ ಕೌಶಲ್ಯವನ್ನು ಇವರಲ್ಲಿ ಕಾಣಬಹುದು. ದಾಸರು ನೀತಿ - ಸಿದ್ಧಾಂತಗಳನ್ನು ಬೋಧಿಸಿ ದರೆನ್ನುವುದು ಸರಳೀಕರಣಗೊಂಡ ಸತ್ಯ. ಅವರಲ್ಲಿ ಪ್ರಧಾನವಾಗಿ ಗುರುತಿಸಬೇಕಾದುದು ಆಗುವಿಕೆಯ ಪ್ರಕ್ರಿಯೆಯನ್ನೇ ಹೊರತು ಹೇಳಿಕೆಗಳ ಗುಡ್ಡೆಯನ್ನಲ್ಲ. ಈ ದೃಷ್ಟಿಯಿಂದ ನೋಡಿದಾಗ, ಅವರ ಅಂತರಂಗದ ಬೇರೊಂದು ಜಗುತ್ತು ನಮ್ಮ ಕಣ್ಮುಂದೆ ತೆರೆಯುತ್ತದೆ.

ಪುರಂದರರ ಕೀರ್ತನೆಗಳಲ್ಲಿ ಎಲ್ಲವೂ ಇದೆಯೆನ್ನುವ ಭಾವೋದ್ರೇಕದ ಹೇಳಿಕೆಗಳಿಗಿಂತ ಅವರ ರಚನೆಗಳಲ್ಲಿ ವೈವಿಧ್ಯಮಯ ಬದುಕಿನ ಸಂಕೀರ್ಣ ಅನುಭವವಿದೆಯೆಂದು ಹೇಳುವುದು ನ್ಯಾಯಸಮ್ಮತ. ಭಕ್ತಿ, ಆಧ್ಯಾತ್ಮ ಅನುಭಾವಗಳ ಜೊತೆಗೆ ಸಾಮಾಜಿಕ ಪ್ರಜ್ಞೆ ವಿಡಂಬನೆ, ಜಾತ್ಯಾತೀತ ಪರಿ ಕಲ್ಪನೆಗಳು ಗಮನ ಸೆಳೆಯುತ್ತವೆ. ಜಡತ್ವವನ್ನು ತೊರೆದು ಚಲನಶೀಲವಾಗುವ,ಅಹಂಭಾವವನ್ನು ಬಿಟ್ಟು ಅನುಭಾವಿ ಯಾಗುವ ಡಾಂಭಿಕತೆ ಸೋಗಿನ ಸಂಸ್ಕೃತಿಯನ್ನು ವಿಡಂಬಿಸಿ ತನ್ನೊಳಗನ್ನು ಬೆಳಗಲೆತ್ನಿಸುವ ಈ ಕ್ರಿಯೆ ತುಂಬಾ ಮಹತ್ವ ದೆನಿಸುತ್ತದೆ. ಅವರು ಭಕ್ತಿಯನ್ನು ಸಾಧಿಸಿ ಹರಿದಾಸರಾದಂತೆ ಸಮಾನತೆಯನ್ನು ಸಾರಿ ಹೇಳುವ ಸಮಾಜ ಚಿಂತಕರು ಆಗಿದ್ದಾರೆ. ನಮ್ಮ ಪರಂಪರೆಯ ಮೂಲ ನೆಲೆಗಳನ್ನು ನವ ವಸಹತುಶಾಯಿ ಆಕ್ರಮಣದ ಈ ಸಂದರ್ಭದಲ್ಲಿ ಶೋಧಿಸ ಬೇಕಾದುದು ತುಂಬಾ ಅಗತ್ಯವಾಗಿದೆ. ಅಂತರಂಗದ ನಡೆ ದಾಸರ ನುಡಿಕಟ್ಟಿನಲ್ಲಿ ಶಾಬ್ದಿಕ ಕಸರತ್ತಾಗದೆ ಅನುಭೂತಿಯ ಆವಿಷ್ಕಾರವಾಗಿ ಮೂಡಿ ಕನ್ನಡದ ಕನ್ನಡಿಯಲ್ಲಿ ಕಣ್ಣಿಗೆ ಕಟ್ಟುವಂತೆ ಪರಿಮೂಡಿಸಿದ ಅನನ್ಯ ದೇಸಿ ಪ್ರತಿಭೆ. ಅಂತಹ ಹರಿಶರಣರಿಗೆ ನಮೋ ನಮಃ.

# ಪದಬಂಧ -3 - ಪುರಂದರದಾಸರು

**ಎಡದಿಂದ ಬಲಕ್ಕೆ**

01.ತಿರುಮಲೆ ಶ್ರೀನಿವಾಸನ ಬಗ್ಗೆ ಪುರಂದರದಾಸರ ಸ್ಮರಣೆ ('ವೆಂ'ನಿಂದ ಆರಂಭ) ...(8)

02.ಮುನಿಸಿಕೊಂಡ ಕೃಷ್ಣನನ್ನು ಯಾರೇನೆಂದ ರೆಂದು ಕೇಳಿ ಸಮಾಧಾನ ಮಾಡುತ್ತಾರೆ. ದಾಸರು 'ರಂ' ನಿಂದಾರಂಭ ...(3)

03.ದೊರೆತನದಲ್ಲಿ, ಸಿರಿತನದಲ್ಲಿ ಎಲ್ಲದರಲ್ಲಿ ನಿನ್ನ ಸೊಗಸು ಇಂತಹ ಸೊಗಸು ಬೇರೆ ಯಾರಲ್ಲೂ ಇಲ್ಲ 'ಈ' ಯಿಂದಾರಂಭ ...(4)

04.ಮಕ್ಕಳು ಚಂಡಿ ಹಿಡಿದಾಗ ಅಮ್ಮ ಹೆದರಿಸಿದರೆ, ಹೀಗೆ ದೊಂಬಾಲು ಬೀಳುತ್ತವೆ. ಅವು 'ಗು' ಯಿಂದಾರಂಭ ...(3)

05.ಶ್ರೀ ಲಕ್ಷ್ಮಿಯನ್ನು ಒಲಿಸಿಕೊಳ್ಳಲು ಮನೆ ಮನೆ ಗಳಲ್ಲಿ ಭಕ್ತಿಯ ಕರೆ 'ಭಾ' ಯಿಂದಾರಂಭ ...(5)

**ಬಲದಿಂದ ಎಡಕ್ಕೆ**

06.ಹಡೆದ ತಾಯಿ ದೇವಕಿಯಾದರೂ, ಯಶೋದೆ ಸಾಕು ತಾಯಿಯಾಗಿ ಕೃಷ್ಣನನ್ನು ಆಡಿಸಿದಳು 'ಜ' ಯಿಂದಾರಂಭ ...(5)

07.ರಾಮ ಮತ್ತು ಕೃಷ್ಣರ ಹೆಸರುಗಳು ದಾಸವ ರೇಣ್ಯರಿಗೆ ಸಕ್ಕರೆ ಬೆರೆಸಿದ ಪಾಯಸದಂತಿದೆ ಯಂತೆ 'ರಾ' ಯಿಂದಾರಂಭ ...(8)

08.ರಾಮ ನಾಮವೆಂಬೋ ನೀರಿಗೆ, ಅಮೃತಪಾನಕ್ಕೆ, ಘಟ್ಟಕ್ಕೆ ಹೋಗಲು ಬಿಂದಿಗೆ ಕೊಡಲು ಒಬ್ಬ ಸಖಿ ಮತ್ತೊಬ್ಬ ಸಖಿಗೆ ಹೇಳುತ್ತಾಳೆ 'ತಾ' ಯಿಂದಾರಂಭ ...(3)

**ಮೇಲಿಂದ ಕೆಳಕ್ಕೆ**

9.ಕೃಷ್ಣ ನಾಮವೆಂಬ ಕಲ್ಲಿನಂತಿರುವ ಸಕ್ಕರೆ ಕೊಂಡರೆ ಕೃಪೆ ಅನಂತ, ನಿತ್ಯ ಸುಖ 'ಕ' ಯಿಂದಾರಂಭ ...(8)

10.ಮನಬಂದಂತೆ ಹೊರಳುವ ಮಾತಾಡುವ ಅಂಗವನ್ನು ಕಂಡರೆ ದಾಸರಿಗೆ ಕೋಪ 'ನಾ' ಯಿಂದಾರಂಭ ...(3)

11.ಶಕ್ತಿಯಿದ್ದಾಗ ಉಣಲಿಲ್ಲ ಸವಿಯಲಿಲ್ಲ ಸಾವು ಬಂದಾಗ ಚಿಂತಿಸಿ ಪ್ರಯೋಜನವೇನೆಂದು ಹಲುಬುತ್ತಾರೆ.ಪುರಂದರ ದಾಸರು 'ಮಾ' ಯಿಂದಾರಂಭ ...(2)

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 | 9 | | | | | | |
| 2 | | | | | | | | 6 |
| 3 | | | | | | 10 | | 7 |
| 4 | | | | 8 | | | 11 | |
| 5 | | | 2 | | | | | |
| 6 | | | | 3 | | | | |
| 7 | | | 4 | | | 13 | | 14 |
| 8 | 12 | | 5 | | | | | |

**- ಪಿ.ಜಿ. ಶ್ರೀನಿವಾಸನ್**


- 41 ನೇ ಪುಟದಲ್ಲಿ ಉತ್ತರವನ್ನು ನೋಡಬಹುದು.

**ಕೆಳಗಿನಿಂದ ಮೇಲಕ್ಕೆ**

12.ಹಲವಾರು ರೀತಿ ದೇವರನ್ನು ಕೊಂಡಾಡಿ, ಏನೂ ಗೊತ್ತಿಲ್ಲದವರಂತೆ ನಟಿಸುತ್ತಾರೆ ದಾಸರು 'ಯಾರೇ' ಯಿಂದಾರಂಭ...(5)

13. ಎರವಿನ ಸಂಸಾರ ನೀರಿನ ಮೇಲಿನ ಗುಳ್ಳೆಯಂತೆ ನಿಜವಲ್ಲ. ಎಂದು ವೈರಾಗ್ಯದ ಮಾತಾಡುತ್ತಾರೆ ದಾಸರು ಜೀವನದ ಸಾರವೆಂಬಂತೆ 'ಯಾ' ಯಿಂದಾರಂಭ ...(3)

14) ರಾಗಿಯ ಹೆಸರಿನಲ್ಲಿ ದಾಸರು ಜನರಿಗೆ ಬುದ್ಧಿ ಹೇಳಿದ್ದಾರೆ. 'ರಾ' ಯಿಂದ ಆರಂಭಿಸಿ 'ರಾ' ಯಿಂದ ಕೊನೆಗೊಳಿಸುತ್ತಾರೆ ತಮ್ಮ ಅರಿಕೆಯನ್ನು ...(5)



## ಜನವರಿ 2020 ಶ್ರೀ ವೆಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ !!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

## ಫೆಬ್ರವರಿ 2020 ಶ್ರೀ ವೆಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ !!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

## ಮಾರ್ಚ್ 2020 ಶ್ರೀ ವೆಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ !!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

### ಜನವರಿ 2020

01. ಆಂಗ್ಲ ಹೊಸ ವರ್ಷಾರಂಭ.
06.ವೈಕುಂಠ ಏಕಾದಶಿ.
07. ಸ್ವಾಮಿ ಪುಷ್ಕರಿಣಿ ತೀರ್ಥ ಮುಕ್ಕೋಟಿ
14. ಭೋಗಿ, ಭೋಗಿತೇರು.
15. ಮಕರ ಸಂಕ್ರಾಂತಿ.
16. ಕನುಮ
ಶ್ರೀ ಗೋದಾದೇವಿ ಪರಿಣಯೋತ್ಸವ.
24. ಶ್ರೀ ಪುರಂದರದಾಸರ ಆರಾಧನೆ.
26. ಗಣತಂತ್ರದಿನೋತ್ಸವ

### ಫೆಬ್ರವರಿ 2020

01. ರಥಸಪ್ತಮಿ.
05. ಭೀಷ್ಮಏಕಾದಶಿ.
09.ಶ್ರೀ ರಾಮಕೃಷ್ಣ ತೀರ್ಥಮುಕ್ಕೋಟಿ.
14 ರಿಂದ 22 ರ ವರೆಗೆ ಶ್ರೀನಿವಾಸಮಂಗಾಪುರಂ
ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ.
14 ರಿಂದ 23 ರ ವರೆಗೆ ತಿರುಪತಿ
ಶ್ರೀ ಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ.
21. ಮಹಾಶಿವರಾತ್ರಿ.

### ಮಾರ್ಚ್ 2020

02 ರಿಂದ 10 ರ ವರೆಗೆ ತರಿಗೊಂಡ
ಶ್ರೀ ಲಕ್ಷ್ಮಿನರಸಿಂಹ ಸ್ವಾಮಿಯವರ ಬ್ರಹ್ಮೋತ್ಸವ.
05 ರಿಂದ 09 ರ ವರೆಗೆ ತಿರುಮಲೆ ಸ್ವಾಮಿಯವರ ತೆಪ್ಪೋತ್ಸವ.
09. ಕುಮಾರಧಾರ ತೀರ್ಥ ಮುಕ್ಕೋಟಿ.
10. ಶ್ರೀ ಲಕ್ಷ್ಮೀ ಜಯಂತಿ.
21. ಅನ್ನಮಾಚಾರ್ಯ ವರ್ಧಂತಿ.
23 ರಿಂದ 31 ರ ವರೆಗೆ ತಿರುಪತಿ
ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವ
23 ರಿಂದ 27 ರ ವರೆಗೆ ನಾಗುಲಾಪುರಂ.
ಶ್ರೀ ವೇದನಾರಾಯಣ ಸ್ವಾಮಿಯವರ ತೆಪ್ಪೋತ್ಸವ.
25. ಶ್ರೀ ಶಾರ್ವರಿ ನಾಮಸಂವತ್ಸರ..... ಯುಗಾದಿ
27. ಶ್ರೀ ಮತ್ಸ್ಯ ಜಯಂತಿ

ತಿರುಮಲೆ ತಿರುಪತಿ ದೇವಸ್ಥಾನಗಳು **ಸಪ್ತಗಿರಿ** ಸಚಿತ್ರ ಮಾಸಪತ್ರಿಕೆ



**ಏಪ್ರಿಲ್ 2020** ಶ್ರೀ ವೆಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ !!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | | |

**ಮೇ 2020** ಶ್ರೀ ವೆಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ !!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

**ಜೂನ್ 2020** ಶ್ರೀ ವೆಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ !!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | | | | |

## ಏಪ್ರಿಲ್ 2020


02. ಶ್ರೀರಾಮನವಮಿ.
02 ರಿಂದ 10 ರ ವರೆಗೆ ಒಂಟಿಮಿಟ್ಟ
ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವ.
03. ತಿರುಪತಿ ಶ್ರೀ ಕೋದಂಡರಾಮ ಸ್ವಾಮಿಯವರ
ಕಲ್ಯಾಣೋತ್ಸವ.
05 ರಿಂದ 07 ರ ವರೆಗೆ ತಿರುಮಲೆ ಸ್ವಾಮಿಯವರ ವಸಂತೋತ್ಸವ
07. ತುಂಬುರ ತೀರ್ಥ ಮುಕ್ಕೋಟಿ.
14. ತಮಿಳ ಯುಗಾದಿ, ಡಾ॥ ಬಿ.ಆರ್.ಅಂಬೇಡ್ಕರ್ ಜಯಂತಿ.
25. ಶ್ರೀ ಪರುಶುರಾಮ ಜಯಂತಿ. 26. ಅಕ್ಷಯ ತೃತೀಯ.
27. ಶ್ರೀ ಶಂಕರ ಜಯಂತಿ. 28. ಶ್ರೀ ರಾಮಾನುಜ ಜಯಂತಿ.

## ಮೇ 2020

01 ರಿಂದ 03 ವರೆಗೆ ತಿರುಮಲೆ
ಶ್ರೀ ಪದ್ಮಾವತಿ ಶ್ರೀನಿವಾಸರ ಪರಿಣಯ ಮಹೋತ್ಸವ.
05 ರಿಂದ 08 ರ ವರೆಗೆ ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರ ವಸಂತೋತ್ಸವ.
05 ರಿಂದ 13 ರ ವರೆಗೆ ನಾಗುಲಾಪುರಂ
ಶ್ರೀ ವೇದನಾರಾಯಣ ಸ್ವಾಮಿಯವರ ಬ್ರಹ್ಮೋತ್ಸವ.
06. ಶ್ರೀ ನರಸಿಂಹ ಜಯಂತಿ, ಶ್ರೀ ತರಿಗೊಂಡ ವೆಂಗಮಾಂಬ ಜಯಂತಿ.
07. ಕೂರ್ಮ ಜಯಂತಿ. 08. ಅನ್ನಮಾಚಾರ್ಯ ಜಯಂತಿ.
12. ತಿರುಪತಿ ಗಂಗಜಾತ್ರೆ.
13 ರಿಂದ 23 ರ ವರೆಗೆ ಕಾರ್ವೇಟಿನಗರಂ
ಶ್ರೀ ವೇಣುಗೋಪಾಲ ಸ್ವಾಮಿಯವರ ಬ್ರಹ್ಮೋತ್ಸವ.
17. ಶ್ರೀ ಹನುಮಜಯಂತಿ.
28 ರಿಂದ ಜೂನ್ 05 ರ ವರೆಗೆ ತಿರುಪತಿ
ಶ್ರೀ ಗೋವಿಂದರಾಜ ಸ್ವಾಮಿಯವರ ಬ್ರಹ್ಮೋತ್ಸವ.

## ಜೂನ್ 2020

01 ರಿಂದ 05 ರ ವರೆಗೆ ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರ ತೆಪ್ಪೋತ್ಸವ.
02 ರಿಂದ 10 ರ ವರೆಗೆ ಹೃಷೀಕೇಶ್/ ನಾರಾಯಣವನಂ
ಶ್ರೀ ಕಲ್ಯಾಣವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ.
02 ರಿಂದ 10 ರ ವರೆಗೆ ಅಪ್ಪಲಾಯಗುಂಟ
ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ.
04 ರಿಂದ 06 ರ ವರೆಗೆ ತಿರುಮಲೆ ಸ್ವಾಮಿಯವರ ಜ್ಯೇಷ್ಠಾಭಿಷೇಕ.
25 ರಿಂದ 27 ರ ವರೆಗೆ ಶ್ರೀನಿವಾಸಮಂಗಾಪುರಂ
ಶ್ರೀ ಕಲ್ಯಾಣವೆಂಕಟೇಶ್ವರ ಸ್ವಾಮಿಯವರ ಸಾಕ್ಷಾತ್ಕಾರ ವೈಭವಂ.



**ಜುಲೈ 2020** ಶ್ರೀ ವೆಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ !!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

**ಆಗಸ್ಟ್ 2020** ಶ್ರೀ ವೆಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ !!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

**ಸೆಪ್ಟೆಂಬರ್ 2020** ಶ್ರೀ ವೆಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ !!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |

## ಜುಲೈ 2020

01 ರಿಂದ 03 ರ ವರೆಗೆ ತಿರುಪತಿ
ಶ್ರೀ ಗೋವಿಂದ ರಾಜ ಸ್ವಾಮಿಯವರ ಜ್ಯೇಷ್ಠಾಭಿಷೇಕಂ.
01 ರಿಂದ 04 ರ ವರೆಗೆ ತಿರುಪತಿ
ಶ್ರೀ ಕಪಿಲೇಶ್ವರ ಸ್ವಾಮಿಯವರ ಪವಿತ್ರೋತ್ಸವ.
05. ಆಷಾಢ ಪೂರ್ಣಿಮೆ, ಗುರುಪೂರ್ಣಿಮೆ,ವ್ಯಾಸ ಜಯಂತಿ.
15 ರಿಂದ 18 ರ ವರೆಗೆ ತಿರುಪತಿ
ಶ್ರೀ ಕೋದಂಡರಾಮ ಸ್ವಾಮಿಯವರ ಪವಿತ್ರೋತ್ಸವ.
16. ತಿರುಮಲೆ ಸ್ವಾಮಿಯವರ ಆಣಿವರ ಆಸ್ಥಾನಂ
24.ನಾಗಚತುರ್ಥಿ. 25. ಗರುಡ ಪಂಚಮಿ.
29 ರಿಂದ ಆಗಸ್ಟು 01 ರ ವರೆಗೆ ತಿರುಮಲೆ ಸ್ವಾಮಿಯವರ ಪವಿತ್ರೋತ್ಸವ.
31. ವರಲಕ್ಷ್ಮೀ ವ್ರತ.

## ಆಗಸ್ಟ್ 2020

03. ಶ್ರೀ ವಿಖನಸಾಚಾರ್ಯ ಜಯಂತಿ. ಶ್ರೀ ಹಯಗ್ರೀವ ಜಯಂತಿ.
04. ಗಾಯತ್ರೀ ಜಪ.
12. ಗೋಕುಲಾಷ್ಟಮಿ.
15. ಸ್ವಾತಂತ್ರದಿನೋತ್ಸವ.
20. ಶ್ರೀ ಬಲರಾಮ ಜಯಂತಿ. 21. ಶ್ರೀ ವರಾಹ ಜಯಂತಿ.
22.ವಿನಾಯಕಚವಿತಿ.
29. ಶ್ರೀ ವಾಮನ ಜಯಂತಿ.
30 ರಿಂದ ಸೆಪ್ಟೆಂಬರ್ 02 ರ ವರೆಗೆ ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರ ಪವಿತ್ರೋತ್ಸವ.

## ಸೆಪ್ಟೆಂಬರ್ 2020

01. ಅನಂತಪದ್ಮನಾಭ ವ್ರತ.
05.ಉಪಾಧ್ಯಾಯರ ದಿನೋತ್ಸವ.

19 ರಿಂದ 27 ರ ವರೆಗೆ ತಿರುಮಲೆ
ಶ್ರೀ ವೆಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವ
23. ತಿರುಮಲೆ ಸ್ವಾಮಿಯವರ ಗರುಡಸೇವೆ.
24. ತಿರುಮಲೆ ಸ್ವಾಮಿಯವರ ಸುವರ್ಣ ರಥರಂಗ ಡೋಲೋತ್ಸವ.



## ಅಕ್ಟೋಬರ್ 2020 ಶ್ರೀ ವೆಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ !!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

## ನವೆಂಬರ್ 2020 ಶ್ರೀ ವೆಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ !!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |

## ಡಿಸೆಂಬರ್ 2020 ಶ್ರೀ ವೆಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ !!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

### ಅಕ್ಟೋಬರ್ 2020

02. ಗಾಂಧಿಜಯಂತಿ.

16 ರಿಂದ 24 ರ ವರೆಗೆ ತಿರುಮಲೆ
ಶ್ರೀ ವೆಂಕಟೇಶ್ವರ ಸ್ವಾಮಿಯವರ ನವರಾತ್ರಿ ಬ್ರಹ್ಮೋತ್ಸವ.

20. ತಿರುಮಲೆ ಸ್ವಾಮಿಯವರ ಗರುಡಸೇವೆ.

21. ತಿರುಮಲೆ ಸ್ವಾಮಿಯವರ ಪುಷ್ಪಕ ವಿಮಾನವು.

23. ತಿರುಮಲೆ ಸ್ವಾಮಿಯವರ ಸ್ವರ್ಣರಥೋತ್ಸವ.

24. ದುರ್ಗಾಷ್ಟಮಿ, ಮಹಾನವಮಿ,

25. ವಿಜಯದಶಮಿ.

### ನವೆಂಬರ್ 2020

14. ನರಕ ಚತುರ್ದಶಿ, ದೀಪಾವಳಿ ಅಮಾವಾಸ್ಯೆ.

14. ಮಕ್ಕಳ ದಿನಾಚರಣೆ

15. ಶ್ರೀ ಕೇದಾರಗೌರಿ ವ್ರತ.

11 ರಿಂದ 19 ರ ವರೆಗೆ ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವ.

19. ಪಂಚಮಿ ತೀರ್ಥ.

20. ತುಂಗಭದ್ರಾನದಿ ಪುಷ್ಕರ ಪ್ರಾರಂಭ.

21. ತಿರುಮಲೆ ಸ್ವಾಮಿಯವರ ಪುಷ್ಪಯಾಗ.

25 ರಿಂದ 29 ರ ವರೆಗೆ ನಾರಾಯಣವನಂ
ಶ್ರೀ ಕಲ್ಯಾಣವೆಂಕಟೇಶ್ವರ ಸ್ವಾಮಿಯವರ ತೆಪ್ಪೋತ್ಸವ.

27. ಕೈಶಿಕದ್ವಾದಶಿ ಆಸ್ಥಾನಂ

### ಡಿಸೆಂಬರ್ 2020

03. ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯವರ ಲಕ್ಷಬಿಲ್ವಾರ್ಚನೆ.

12. ಶ್ರೀ ಧನ್ವಂತರಿ ಜಯಂತಿ.

16. ಧನುರ್ಮಾಸ ಪ್ರಾರಂಭ.

25. ವೈಕುಂಠ ಏಕಾದಶಿ, ಗೀತಾಜಯಂತಿ.

25 ರಿಂದ 29 ರ ವರೆಗೆ ತಿರುಪತಿ
ಶ್ರೀ ಕಪಿಲೇಶ್ವರ ಸ್ವಾಮಿಯವರ ತೆಪ್ಪೋತ್ಸವ.

26. ಶ್ರೀ ಸ್ವಾಮಿ ಪುಷ್ಕರಣಿ ತೀರ್ಥ ಮುಕ್ಕೋಟಿ

29. ಶ್ರೀ ದತ್ತ ಜಯಂತಿ.



# ಅದಮಾರು ಪರ್ಯಾಯ

## ಉಡುಪಿ ಪರ್ಯಾಯ

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
9739369621

ಪೊಡವಿಗೊಡೆಯನ ನಾಡು ಉಡುಪಿಗೆ ಶ್ರೀ ಕೃಷ್ಣ ದೇವಾಲಯ ಮತ್ತು ಅಷ್ಟಮಠಗಳು ಮುಕುಟಮಣಿಗಳಿದ್ದಂತೆ. ಉಡುಪಿ ಎಂದರೆ ಕೃಷ್ಣ, ಕೃಷ್ಣನೆಂದರೆ ಉಡುಪಿ ಎಂಬಷ್ಟರ ಮಟ್ಟಿಗೆ ಇವೆರಡರ ಸಂಬಂಧ ಬೆಸೆದುಕೊಂಡಿದೆ. ಇಂತಹ ಉಡುಪಿಯ ಅಷ್ಟಮಠಗಳ ಪರಂಪರೆಯಲ್ಲಿ ಎರಡು ವರ್ಷಗಳಿಗೊಮ್ಮೆ ನಡೆಯುವ ಪರ್ಯಾಯಕ್ಕೆ ಬಹಳ ಮಹತ್ವ ಪೂರ್ಣಸ್ಥಾನ. ಸದ್ಯ ಉಡುಪಿಯಲ್ಲಿ ಇದೇ ಪರ್ಯಾಯದ ಸಂಭ್ರಮ.

ಏನಿದು ಪರ್ಯಾಯ?: ದ್ವೈತ ಮತ ಪ್ರವರ್ತಕರಾದ ಮಧ್ವ ಗುರುಗಳಿಂದ ಪ್ರತಿಷ್ಠಾಪಿಸಲ್ಪಟ್ಟ ಉಡುಪಿ ಕೃಷ್ಣನ ಪೂಜೆಗಾಗಿ ಅವರೇ ಎಂಟು ಮಂದಿ ಬಾಲವಟುಗಳಿಗೆ ಸಂನ್ಯಾಸ ದೀಕ್ಷೆಯನ್ನು ನೀಡಿ ಪೊಡವಿಗೊಡೆಯನ ಪೂಜೆಯು ಸಾಂಗವಾಗಿ ನೆರವೇರುವ ವ್ಯವಸ್ಥೆಯನ್ನು ಮಾಡಿದ್ದರು. ಅಂದಿನಿಂದ ಇಂದಿನ ವರೆಗೂ ಶ್ರೀ ಕೃಷ್ಣನ ಪೂಜಾಧಿಕಾರಿ ಇರುವುದು ಅಷ್ಟಮಠಗಳ ಮಠಾಧೀಶರಿಗೆ. ಈ ಪೂಜಾಧಿಕಾರ ಪ್ರತೀ ಎರಡು ವರ್ಷಕ್ಕೊಮ್ಮೆ ಕ್ರಮವಾಗಿ ಈ ಎಂಟು ಮಠಗಳ ನಡುವೆ ಹಸ್ತಾಂತರ ಆಗುತ್ತಾ ಹೋಗುತ್ತದೆ. ಈ ಪೂಜಾಧಿಕಾರದ ಹಸ್ತಾಂತರ ಪ್ರಕ್ರಿಯೆಯನ್ನೇ ಪರ್ಯಾಯ ಎಂದು ಕರೆಯುವುದು. ಪರ್ಯಾಯ ಎನ್ನುವುದು ಅಷ್ಟಮಠಗಳಲ್ಲಿ, ಕೇವಲ ಎರಡು ಮಠಗಳ ನಡುವೆ ನಡೆಯುವ ಪ್ರಕ್ರಿಯೆಯಾಗಿದ್ದರೂ, ಈಗ ಬರೀ ಅಷ್ಟಮಠಗಳ ನಡುವೆ ಮಾತ್ರ ಉಳಿದಿಲ್ಲ. ಇದೊಂದು ಜನರ ಉತ್ಸವವಾಗಿದೆ. ಪರ್ಯಾಯ ಅಂದರೆ ಇಡೀ ಉಡುಪಿಗೆ ಉಡುಪಿಯೇ ಸಂಭ್ರಮದಿಂದ ಕುಣಿದಾಡುತ್ತದೆ. ಹಬ್ಬದ ವಾತಾವರಣ ಕೃಷ್ಣನೂರಿನಲ್ಲಿ ನೆಲೆಯಾಗಿರುತ್ತದೆ. ಉಡುಪಿಯ ಪರ್ಯಾಯದ ಸೊಬಗನ್ನು ನೋಡಲು ದೇಶ-ವಿದೇಶಗಳ ಭಕ್ತಜನರು ಆಗಮಿಸುತ್ತಾರೆ.

### ಐತಿಹಾಸಕ ಹಿನ್ನೋಟ

ದ್ವಾರವತಿಯಲ್ಲಿ ದ್ವಾಪರಯುಗದಲ್ಲಿ ರುಕ್ಮಿಣೀ ಕರಾರ್ಚಿತನಾದ ಕೃಷ್ಣನು,ಆಚಾರ್ಯ ಮಧ್ವರ ಭಕ್ತಿಗೆ ಒಲಿದು ಹಡಗಿನೊಳಗೆ ಗೋಪಿ ಚಂದನದ ಗಟ್ಟಿಯಲ್ಲಿ ಇದ್ದು ಉಡುಪಿಗೆ ಆಗಮಿಸುತ್ತಾನೆ. ಆ ಹಡಗು ಗಾಳಿಯ ರಭಸಕ್ಕೆ ಸಿಕ್ಕಿ ಮುಳುಗುವ ಸನ್ನಿವೇಶ ಎದುರಾದಾಗ, ಕಡಲ ಕಿನಾರೆಯಲ್ಲಿ ಆಹ್ನೀಕವನ್ನು ಪೂರೈಸುತ್ತಿದ್ದ ಮಧ್ವರು ತಮ್ಮ ಕೈ ಸನ್ನೆಯಲ್ಲಿ ಹಡಗನ್ನು ಸಾವಕಾಶವಾಗಿ ದಡಕ್ಕೆ ಸೇರಿಸುತ್ತಾರೆ. ಇದರಿಂದ ಹರ್ಷಿತನಾದ ಹಡಗಿನ ಮಾಲೀಕನು ತಮಗೆ ಬೇಕಾದ ವಸ್ತುವನ್ನು ಹಡಗಿನಿಂದ ಸ್ವೀಕರಿಸಲು ಪ್ರಾರ್ಥಿಸಿದಾಗ, ಗೋಪಿಚಂದನದ ಗಡ್ಡೆಯಲ್ಲಿ ಕೃಷ್ಣನ ಮೂರ್ತಿಯ ಆಗಮನವನ್ನು ಅರಿತಿದ್ದ ಆಚಾರ್ಯಮಧ್ವರು ಅದನ್ನು ಮಾತ್ರ ಸ್ವೀಕರಿಸಿ ಉಡುಪಿಗೆ ತರುತ್ತಾರೆ ಎನ್ನುವುದು ಐತಿಹ್ಯ. ಇಂತಹ ಯುಗಾಂತರದ ಶ್ರೀ ಕೃಷ್ಣನ ಪ್ರತಿಮೆಯನ್ನು ಮಧ್ವಾಚಾರ್ಯರು ಉಡುಪಿಗೆ ತಂದು, ಶಾಸ್ತ್ರೀಯ ವಿಧಿವಿಧಾನಗಳ ಮೂಲಕ ಮಕರ ಸಂಕ್ರಾಂತಿ ದಿನ ಪ್ರತಿಷ್ಠಾಪಿಸಿ ಪೂಜಿಸಿದರು. ಅಲ್ಲದೆ ಮಧ್ವಾಚಾರ್ಯರು ಶ್ರೀ ಕೃಷ್ಣನ ಪೂಜೆಯು ನಿರ್ವಿಘ್ನವಾಗಿ ನೆರವೇರಲು ಪಲಿಮಾರು, ಅದಮಾರು, ಕೃಷ್ಣಾಪುರ, ಪುತ್ತಿಗೆ ಶೀರೂರು, ಸೋದೆ, ಕಾಣಿಯೂರು ಮತ್ತು ಪೇಜಾವರ ಎಂಬ ಎಂಟು ಮಠಗಳನ್ನೂ ಸ್ಥಾಪಿಸಿದರು. ಈ ಮಠಗಳೇ ಈಗ 'ಅಷ್ಟಮಠ'ಗಳೆಂದು ಜನರಿಂದ ಭಕ್ತಿ ಭಾವದಿಂದ ಕರೆಯಲ್ಪಡುತ್ತಿರುವುದು. ಈ ಎಂಟು ಮಠಗಳನ್ನು ಸ್ಥಾಪಿಸಿದ ಮಧ್ವಾಚಾರ್ಯರು ಶ್ರೀಕೃಷ್ಣನ ಪೂಜಾಧಿಕಾರವನ್ನೂ ಎರಡು ತಿಂಗಳಿಗೆ ಒಂದು ಮಠಕ್ಕೆ ಸರದಿಯಲ್ಲಿ ಈ ಎಂಟು ಮಠಗಳಿಗೆ ನೀಡಿದರು. ಯಾವ ಮಠದ ಸ್ವಾಮಿಗಳ ಸ್ವಾಮಿಗಳ ಪರ್ಯಾಯ ನಡೆಯುತ್ತಿರುತ್ತದೋ ಆ ಮಠವು ಪರ್ಯಾಯ ಮಠ ಎಂದು ಕರೆಸಿಕೊಳ್ಳುತ್ತದೆ. ಶ್ರೀಕೃಷ್ಣನ ಪೂಜೆಯ ಜೊತೆಗೆ ಕೃಷ್ಣಮಠದ ಸಮಸ್ತ ಆಡಳಿತಾತ್ಮಕವಾದ ಮೇಲ್ವಿಚಾರಣೆಯ ಜವಾಬ್ದಾರಿಯೂ ಸಹ ಪರ್ಯಾಯ ಮಠಕ್ಕೆ ಸೇರಿದ್ದಾಗಿರುತ್ತದೆ. ಇದೇ ಪದ್ಧತಿ ಸೋದೆ ಮಠದ ಭಾವೀ ಸಮೀರರೆಂದು ಖ್ಯಾತರಾದ ವಾದಿರಾಜ ಗುರುಸಾರ್ವಭೌಮರ ಕಾಲದವರೆಗೆ ನಡೆದುಕೊಂಡು ಬಂದಿತ್ತು. ಆದರೆ, ವಾದಿರಾಜರು ಇಲ್ಲಿ ಒಂದು ಮಹತ್ವದ ಬದಲಾವಣೆ ತಂದರು. ಅದೇನೆಂದರೆ, ಎರಡು ತಿಂಗಳವರೆಗೆ ಇದ್ದ ಶ್ರೀಕೃಷ್ಣ ಮಠದ ಪೂಜಾಧಿಕಾರವನ್ನು ಶ್ರೀಗಳು ಎರಡು ವರ್ಷಕ್ಕೆ ವಿಸ್ತರಿಸಿದರು. ಅದೇ ಸಂಪ್ರದಾಯ ಈ ವರೆಗೂ ಪರ್ಯಾಯದ ಮೂಲಕ ಮುಂದುವರಿದು ಕೊಂಡು ಬರುತ್ತಿದೆ.





1522-23 ರ ಅವಧಿಯಲ್ಲಿ ಪಲಿಮಾರು ಮಠಾಧೀಶರಿಂದ ಎರಡು ವರ್ಷಗಳ ಪರ್ಯಾಯ ಪದ್ಧತಿ ಆರಂಭವಾಯಿತು. ಸರದಿಯಲ್ಲಿ ಎರಡು ವರ್ಷಕ್ಕೊಮ್ಮೆ ಶ್ರೀಕೃಷ್ಣನ ಪೂಜಾಧಿಕಾರ ವರ್ಗಾವಣೆ ಆಗುತ್ತಿದೆ. ಪಲಿಮಾರು ಮಠ, ಅದಮಾರು ಮಠ, ಕೃಷ್ಣಾಪುರ ಮಠ, ಪುತ್ತಿಗೆ ಮಠ, ಶಿರೂರು ಮಠ, ಸೋದೆ ಮಠ, ಕಾಣಿಯೂರು ಮಠ ಮತ್ತು ಪೇಜಾವರ ಮಠ, ಈ ಕ್ರಮದಲ್ಲಿ ಪೂಜಾಧಿಕಾರ ಎರಡು ವರ್ಷಕ್ಕೊಮ್ಮೆ ಬದಲಾಗುತ್ತಿರುತ್ತದೆ. ಎಂಟು ಮಠಗಳಲ್ಲಿಯೂ ಎರಡೆರಡು ಮಠಗಳು ದ್ವಂದ್ವ ಮಠಗಳೆಂದೂ ಕೃಷ್ಣಾಪೂಜಾ ಕೈಂಕರ್ಯದಲ್ಲಿ ವಿಘ್ನ ಬಂದಾಗ ಇನ್ನೋರ್ವರು ಅಧಿಕಾರ ಪಡೆದು ಸಾಂಗವಾಗಿ ನೆರವೇರಿಸುತ್ತಾರೆ. ಹದಿನಾಲ್ಕು ಲೋಕದೊಡೆಯ ಕೃಷ್ಣನಿಗೆ ಹದಿನಾಲ್ಕು ಬಗೆಯ ಪೂಜೆಗಳು ಇಲ್ಲಿ ನಡೆಯುತ್ತವೆ. ಈ ಎಲ್ಲಾ ಪೂಜಾ ಕಾರ್ಯಗಳು ಪ್ರತಿನಿತ್ಯ ಬೆಳಗ್ಗೆ ನಾಲ್ಕು ಗಂಟೆ ಆರಂಭವಾಗುವ ಉಷಃಕಾಲ ಪೂಜೆಯಿಂದ ರಾತ್ರಿ 9 ಗಂಟೆಗೆ ಸುಮಾರಿಗೆ ನಡೆಯುವ ಏಕಾಂತ ಸೇವೆಯ ತನಕ ಇರುತ್ತದೆ.

### ಒಂದು ವರ್ಷ ಮೊದಲೇ ಸಿದ್ಧತೆ

ಅಷ್ಟಮಠಗಳ ಶ್ರೀಗಳು ಪರ್ಯಾಯ ಪೀಠಕ್ಕೇರುವುದು ಎರಡು ವರ್ಷಕ್ಕೊಮ್ಮೆಯಾದರೂ ಅದರ ಸಿದ್ಧತೆ ಮಾತ್ರ ಪರ್ಯಾಯ ಪೀಠವೇರುವ ಒಂದು ವರ್ಷ ಮೊದಲೇ ಕೆಲವೊಂದು ಸಾಂಪ್ರದಾಯಿಕ ಪದ್ಧತಿಗೆ ಚಾಲನೆ ನೀಡುವ ಮೂಲಕ ಆರಂಭವಾಗುತ್ತದೆ. ಇವುಗಳಲ್ಲಿ ಪ್ರಮುಖವಾಗಿ ನಾಲ್ಕು 'ಮುಹೂರ್ತ'ಗಳು ಕಾಲ ಕಾಲಕ್ಕೆ ನೆರವೇರುತ್ತವೆ. ಅವುಗಳೆಂದರೆ,ಬಾಳೆ ಮುಹೂರ್ತ, ಅಕ್ಕಿ ಮುಹೂರ್ತ, ಕಟ್ಟಿಗೆ ಮುಹೂರ್ತ ಮತ್ತು ಭತ್ತ ಮುಹೂರ್ತ. ಈ ಮುಹೂರ್ತಗಳೂ ಕೂಡಾ ಅನುಕ್ರಮವಾಗಿಯೇ ನಡೆಯುತ್ತವೆ.

### ಬಾಳೆ ಮುಹೂರ್ತ ಅಥವಾ ಕದಳಿ ಮುಹೂರ್ತ

ಇದು ಆರಂಭದಲ್ಲಿ ನಡೆಯುವ ಮುಹೂರ್ತ. ದೇವರ ಅರ್ಚನೆ ವಿಚಾರ ಬಂದಾಗ ಬಾಳೆಹಣ್ಣಿಗೆ ಮಹತ್ವದ ಸ್ಥಾನವಿದೆ. ಶ್ರೀಕೃಷ್ಣ ಮಠದಲ್ಲೂ ಬಾಳೆ ಮಹತ್ವಪೂರ್ಣ ಹಣ್ಣು. ಕೃಷ್ಣನ ಪ್ರಸಾದವನ್ನು ಬಾಳೆ ಹಣ್ಣಿನ ಜೊತೆ ಅಪಾರ ಪ್ರಮಾಣದ ತುಳಸೀ ದಳಗಳು ಕೂಡಾ ಶ್ರೀ ಕೃಷ್ಣನ ಪೂಜೆಗೆ ಬೇಕಾಗಿರುವಂತಹ ಪ್ರಮುಖ ವಸ್ತುಬೇಕು. ಅಲ್ಲದೆ, ಪ್ರತಿನಿತ್ಯ ನಡೆಯುವ ಅನ್ನ ಸಂತರ್ಪಣೆಗೂ ಬಾಳೆ ಎಲೆಗಳು ಬೇಕಾಗಿರುತ್ತವೆ. ಯಾವುದೇ ಕಾರಣಕ್ಕೂ ಈ ಎರಡು ವಸ್ತುಗಳಲ್ಲಿ ಕೊರತೆ ಬಾರದೇ ಇರಲಿ ಎಂಬ ಆಶಯದೊಂದಿಗೆ ಪರ್ಯಾಯ ಪೀಠಕ್ಕೇರುವ ಶ್ರೀಗಳು ಮಠದ ಆವರಣದಲ್ಲಿ ಸಾಂಕೇತಿಕವಾಗಿ ಬಾಳೆಗಿಡ ಮತ್ತು ತುಳಸಿಗಿಡಗಳನ್ನು ನೆಡುತ್ತಾರೆ. ಈ ಬಾಳೆ ಮತ್ತು ಸುಳಸಿಗಿಡವನ್ನು ನೆಡುವ ಮುನ್ನ ಸಾಕಷ್ಟು ಸಂಪ್ರದಾಯಗಳಿವೆ. ಅದೇನೆಂದರೆ, ರಥಬೀದಿಯಲ್ಲಿ ನಡೆಯುವ ಭವ್ಯವಾದ ಮೆರವಣಿಗೆಯೊಂದಿಗೆ ಬಾಳೆಗಿಡ ಹಾಗೂ ತುಳಸೀ ಗಿಡಗಳನ್ನು ತಂದು ಚಂದ್ರಮೌಳೇಶ್ವರ ಹಾಗೂ ಅನಂತೇಶ್ವರ ದೇಗುಲದಲ್ಲಿ ಪೂಜೆ ಮಾಡಲಾಗುತ್ತದೆ. ಬಳಿಕ ಶ್ರೀಗಳ ಸಮೇತ ಮೆರವಣಿಗೆ ಶ್ರೀಕೃಷ್ಣಮಠಕ್ಕೆ ಬಂದು ಅಲ್ಲಿ ಪೂಜೆ ನಡೆಯುತ್ತದೆ. ಶ್ರೀಕೃಷ್ಣ, ಮುಖ್ಯಪ್ರಾಣ ಮತ್ತು ಮಧ್ವಾಚಾರ್ಯರಿಗೆ ವಿಶೇಷಪೂಜೆ ಸಲ್ಲಿಸಿ ಶ್ರೀಗಳು ತಮ್ಮ ಮುಂದಿನ ಪರ್ಯಾಯಕ್ಕೆ ಹರಿ-ವಾಯು-ಗುರುಗಳ ಆಶೀರ್ವಾದವನ್ನು ಕೋರುತ್ತಾರೆ. ಇದಾದ ಬಳಿಕ ಮತ್ತೆ ಮುಂದೆ ಸಾಗುವ ಮೆರವಣಿಗೆ ಮಠಕ್ಕೆ ತಲುಪುತ್ತದೆ. ಇಲ್ಲಿ ಬಾಳೆ ಮತ್ತು ತುಳಸಿ ಗಿಡಗಳನ್ನು ನೆಡಲಾಗುತ್ತದೆ.

### ಅಕ್ಕಿ ಮುಹೂರ್ತ

ಸದಾ ಅನ್ನದಾಸೋಹ ಶ್ರೀಕೃಷ್ಣ ಮಠದ ಪ್ರಮುಖ ಪದ್ಧತಿ. ಉಡುಪಿ ಕೃಷ್ಣ ಅನ್ನ ಬ್ರಹ್ಮನೆಂದೇ ಖ್ಯಾತ. ಹೀಗಾಗಿ, ಏಕಾದಶಿ ಒಂದು ದಿನ ಬಿಟ್ಟು ಬಾಕಿ ಎಲ್ಲಾ ದಿನ ಇಲ್ಲಿ ಅನ್ನ ಪ್ರಸಾದ ವಿತರಣೆಯಾಗುತ್ತದೆ. ಹೀಗಾಗಿ, ಅಪಾರ ಪ್ರಮಾಣದ ಅಕ್ಕಿ ಬೇಕು. ಶ್ರೀಕೃಷ್ಣ ದೇಗುಲಕ್ಕೆ ಬರುವ ಪ್ರತಿಯೊಬ್ಬ ಭಕ್ತನಿಗೂ ಅನ್ನ ಪ್ರಸಾದ ವಿತರಣೆಯಾಗಬೇಕು ಎಂಬ ಮಹದ್ದುದ್ದೇಶದಿಂದ ಅಕ್ಕಿ ಸಂಗ್ರಹಿಸಲಾಗುತ್ತದೆ. ಈಅಕ್ಕಿ ಸಂಗ್ರಹಣಾ ಪ್ರಕ್ರಿಯೆಯ ಮುಹೂರ್ತವೇ ಅಕ್ಕಿ ಮುಹೂರ್ತ. ಶುಭಗಳಿಗೆಯಲ್ಲಿ ಈ ಅಕ್ಕಿ ಮುಹೂರ್ತ ನಡೆಯುತ್ತದೆ. ಶ್ರೀಗಳ ಸಮ್ಮುಖದಲ್ಲಿ ಮಠದ ಪಟ್ಟದ ದೇವರಿಗೆ ಪೂಜೆ ಸಲ್ಲಿಸಿದ ಬಳಿಕ 45 ಸೇರು ಅಕ್ಕಿ ಮುಡಿ (ಭತ್ತದ ಹುಲ್ಲಿನಿಂದ ಗೋಲಾಕಾರದಲ್ಲಿ ಅಕ್ಕಿ ಸಂಗ್ರಹಿಸುವ ವಿಶಿಷ್ಠ ಕ್ರಮ)ಯನ್ನು ರಥಬೀದಿ ತುಂಬಾ ಮೆರವಣಿಗೆ ಮೂಲಕ ಭಕ್ತಿ ಭಾವದಿಂದ ತರಲಾಗುತ್ತದೆ. ಬಾಳೆ ಮುಹೂರ್ತದಲ್ಲಿ ನಡೆದಂತೆ ಇಲ್ಲೂ ಎಲ್ಲಾ ದೇವರಿಗೂ ಪೂಜೆ ಸಲ್ಲಿಸಲಾಗುತ್ತದೆ. ಈ ಸಂದರ್ಭದಲ್ಲಿ ಉಳಿದ ಏಳು ಮಠಗಳ



ಮಠದಲ್ಲಿ ಅರಳಿಗೆ ಪ್ರಮುಖ ಸ್ಥಾನವಿದೆ.ಹೀಗಾಗಿ, ಪವಿತ್ರ ಅರಳುಗಳನ್ನು ಮಾಡುವ ಸಲುವಾಗಿ ಭತ್ತವನ್ನು ಸಂಗ್ರಹಿಸಿಡಲಾಗುತ್ತದೆ.

ಪರ್ಯಾಯಕ್ಕೂ ಆರು ತಿಂಗಳ ಮೊದಲು ಶ್ರೀಗಳು ವಿವಿಧ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುತ್ತಾರೆ. ಅಲ್ಲದೆ, ಪುಣ್ಯ ಕ್ಷೇತ್ರಗಳಲ್ಲಿ ಮಿಂದು ದೇವರ ಆಶೀರ್ವಾದ ಬೇಡುತ್ತಾರೆ.ಹೀಗೆ ಪುಣ್ಯ ಕ್ಷೇತ್ರಗಳ ಸಂದರ್ಶನಕ್ಕೆ ಹೊರಟ ಸ್ವಾಮೀಜಿಗಳು ಪರ್ಯಾಯಕ್ಕೆ ಹದಿನೈದು ದಿನಗಳ ಮುಂಚಿತವಾಗಿ ಉಡುಪಿಗೆ ಆಗಮಿಸುತ್ತಾರೆ. ಇದನ್ನು ಪುರಪ್ರವೇಶ ಎಂದು ಕರೆಯುತ್ತಾರೆ. ಪುರ ಪ್ರವೇಶದ ಬಳಿಕ ಶ್ರೀಪಾದರು ಉಡುಪಿಯ ಆಸುಪಾಸಿನ ಪುಣ್ಯಕ್ಷೇತ್ರಗಳ ದರ್ಶನ ಮಾಡಿ ಪರ್ಯಾಯದ ಯಶಸ್ಸಿಗೆ ದೇವರ ಅನುಗ್ರಹವನ್ನು ಕೋರುತ್ತಾರೆ.

ಇನ್ನು, ಪರ್ಯಾಯದ ದಿನದ ಸಂಭ್ರಮವನ್ನು ಬಣ್ಣಿಸುವುದಕ್ಕೇ ಸಾಧ್ಯವಿಲ್ಲ. ಉಡುಪಿಯಲ್ಲಿ ಅಷ್ಟಮಿ ಎಷ್ಟು ಸಂಭ್ರಮದಿಂದ ನಡೆಯುತ್ತದೋ ಅಷ್ಟೇ ಸಂಭ್ರಮದಲ್ಲಿ ಪರ್ಯಾಯ ಕೂಡಾ ನಡೆಯುತ್ತದೆ. ಪರ್ಯಾಯ ಶ್ರೀಗಳ ಮೆರವಣಿಗೆಯಲ್ಲಿ ವಿವಿಧ ಸಾಂಸ್ಕೃತಿಕ ತಂಡಗಳು ಗಮನ ಸೆಳೆಯುತ್ತವೆ. ಮಂಗಳವಾದ್ಯಗಳ ನಿನಾದ ಇಲ್ಲಿ ಕಿವಿಗಿಂಪು ಆನವರಿ ಹದಿನೆಂಟರಂದು ಪರ್ಯಾಯ ಉತ್ಸವ ನಡೆಯುವುದು ಪದ್ಧತಿ. ಆದರೆ, ಇದರ ಸಂಭ್ರಮ ಮಾತ್ರ ಹಿಂದಿನ ದಿನವೇ ಮಾರ್ಗ ಮತ್ತು ಅಷ್ಟಮಠಗಳು ರಂಗು ರಂಗಿನ ವಿದ್ಯುದೀಪಗಳಿಂದ ಹೊಳೆಯುತ್ತಿರುತ್ತವೆ.

ಪರ್ಯಾಯದ ಮುನ್ನಾ ದಿನ ರಾತ್ರಿ ಪರ್ಯಾಯ ಪೀಠ ಏರುವ ಶ್ರೀಪಾದರು, ಉಡುಪಿಗೆ ಸಮೀಪದ ದಂಡತೀರ್ಥ ಎಂಬ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಉಡುಪಿಯ ಜೋಡುಕಟ್ಟೆ ಎಂಬ ಸ್ಥಳಕ್ಕೆ ಬರುತ್ತಾರೆ. ಅಲ್ಲಿ ಇತರ ಅಷ್ಟಮಠಾಧೀಶರನ್ನು ಸೇರಿಕೊಂಡು, ಮಠದ ಪಟ್ಟದ ದೇವರನ್ನು ಮುಂದಾಗಿರಿಸಿಕೊಂಡು ನಾಡಿನ ಸಾಂಸ್ಕೃತಿಕ ವೈಭವವನ್ನು ಸಾರುವ ಭವ್ಯ ಮೆರವಣಿಗೆಯಲ್ಲಿ ರಥಬೀದಿಗೆ ಆಗಮಿಸುತ್ತಾರೆ. ಬಳಿಕ ಅನಂತಾಸನ ಚಂದ್ರಮೌಳೇಶ್ವರ ದೇವರ ದರ್ಶನವನ್ನು ಮಾಡಿ ಕೃಷ್ಣಮಠದ ಮುಂಭಾಗಕ್ಕೆ ಬರುವಾಗ, ಪರ್ಯಾಯ ಪೀಠದಿಂದ ಏಳುವ ಸ್ವಾಮಿಗಳು ಅವರನ್ನು ಸ್ವಾಗತಿಸಿ ಶ್ರೀಮಠದ ಒಳಗೆ ಕರೆದೊಯ್ಯುತ್ತಾರೆ. ಗರ್ಭಗುಡಿಯಲ್ಲಿ ಶ್ರೀಕೃಷ್ಣನ ದರುಶನವಾದ ಬಳಿಕ ಗರ್ಭಗುಡಿಯಲ್ಲಿರುವ ಆಚಾರ್ಯಮಧ್ವರ ಪ್ರತೀಕದ ಮುಂಭಾಗದಲ್ಲಿ ಶ್ರೀ ಕೃಷ್ಣಮಠದ ಕೀಲಿಕೈ, ಅಕ್ಷಯಪಾತ್ರೆ ಹಾಗೂ ಸಟ್ಟುಗವನ್ನು ಪರ್ಯಾಯ ಪೀಠ ಏರುವ ಸ್ವಾಮಿಗಳು ಪರ್ಯಾಯ ಮುಗಿಸಿದ ಶ್ರೀ ಪಾದರಿಂದ ಸ್ವೀಕರಿಸುತ್ತಾರೆ. ಬಳಿಕ ಸರ್ವಜ್ಞ ಪೀಠದಲ್ಲಿ ಪರ್ಯಾಯ ಮುಗಿಸಿದ ಶ್ರೀ ಪಾದರು ಪರ್ಯಾಯ ಏರುವ ಶ್ರೀಪಾದರನ್ನು ಕುಳ್ಳಿರಿಸುವಲ್ಲಿಗೆ ಪರ್ಯಾಯ ಪೀಠಾರೋಹಣದ ಮುಖ್ಯ ಘಟ್ಟ ಸಂಪನ್ನವಾಗುತ್ತದೆ.

ಬಳಿಕ ಕೃಷ್ಣಮಠದ ಬಡಗು ಮಾಳಿಗೆಯಲ್ಲಿ, ನೂತನ ಪರ್ಯಾಯ ಶ್ರೀಪಾದರಿಂದ ಉಳಿದ ಅಷ್ಟಮಠ ಸ್ವಾಮಿಗಳಿಗೆ ಗಂಧಾದ್ಯುಪಚಾರ, ಪಟ್ಟದ ಕಾಣಿಕೆ ಸಮರ್ಪಣೆ ನಡೆಯುತ್ತದೆ. ಇದರ ನಂತರದಲ್ಲಿ ರಾಜಾಂಗಣ ಸಭಾಭವನದಲ್ಲಿ ಪರ್ಯಾಯ ದರ್ಬಾರ್ ನಡೆಯುತ್ತದೆ. ಅಲ್ಲಿ ಸಮಾಜದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹನೀಯರುಗಳಿಗೆ ಸನ್ಮಾನ,ಪರ್ಯಾಯ ಕಾಲದ ವಿವಿಧ ಅಧಿಕಾರಿಗಳ ಘೋಷಣೆ, ಸ್ವಾಮಿಗಳಿಂದ ಅನುಗ್ರಹ ಸಂದೇಶಗಳು ನೆರವೇರುತ್ತವೆ.

ಪರ್ಯಾಯ ಪೀಠವನ್ನು ಏರಿದ ಶ್ರೀಪಾದರಿಂದ ಶ್ರೀಕೃಷ್ಣನಿಗೆ ಮಹಾಪೂಜೆ ಆದ ಬಳಿಕ ಅನ್ನ ಬ್ರಹ್ಮನ ಪ್ರಸಾದ ರೂಪವಾಗಿ ಸಹಸ್ರಾರು ಭಕ್ತರಿಗೆ ಭೋಜನಪ್ರಸಾದ ವಿನಿಯೋಗ ನಡೆಯುವುದರೊಂದಿಗೆ ಪರ್ಯಾಯ ಮಹೋತ್ಸವವು ಸಂಪನ್ನಗೊಳ್ಳುತ್ತದೆ.

ಹೀಗೆ, ಪರ್ಯಾಯ ಮತ್ತು ಅದರ ಸಿದ್ಧತೆಯ ಕಲ್ಪನೆಯೇ ಅಪೂರ್ವ. ಈ ಪರ್ಯಾಯ ಈಗ ಕೃಷ್ಣ ಮಠಕ್ಕಷ್ಟೇ ಸೀಮಿತವಾಗಿ ಉಳಿದಿಲ್ಲ. ಇದೊಂದು ಊರ

ಸ್ವಾಮೀಜಿಗಳನ್ನು ಕರೆದು ಗೌರವಿಸುವ ಪದ್ಧತಿಯೂ ಇದೆ.

**ಕಟ್ಟಿಗೆ ಮುಹೂರ್ತ:**

ಉಡುಪಿ ಶ್ರೀಕೃಷ್ಣ ಮಠಕ್ಕೆ ಭೇಟಿ ನೀಡಿದ ಭಕ್ತರಿಗೆ ಮಧ್ವ ಸರೋವರದ ಬಳಿ ಒಂದು ಬೃಹತ್ ಕಟ್ಟಿಗೆ ರಥದಾಕಾರದ ರಚನೆ ಗಮನ ಸೆಳೆಯುತ್ತದೆ. ಇದು ಉಡುಪಿಯಲ್ಲಿ ಮಾತ್ರ ಕಾಣಸಿಗುವಂತಹ ಒಂದು ಸುಂದರ ರಚನೆ. ಕಟ್ಟಿಗೆಗಳನ್ನು ಇಲ್ಲಿ ರಥದಾಕಾರದಲ್ಲಿ ಸ್ಥಳೀಯ ಜನರೇ ಸಂಗ್ರಹಿಸಿಟ್ಟಿರುತ್ತಾರೆ.ಶ್ರೀಕೃಷ್ಣನಿಗೆ ನೈವೇದ್ಯ ಮತ್ತು ಭಕ್ತರಿಗೆ ಸಿದ್ಧವಾಗುವ ಅನ್ನಪ್ರಸಾದ ಇದೇ ಕಟ್ಟಿಗೆಗಳಿಂದ ಬೇಯಿಸಲಾಗುತ್ತದೆ. ಹೀಗಾಗಿ, ಸಹಜವಾಗಿಯೇ ಕಟ್ಟಿಗೆಗಳ ಪ್ರಮಾಣವೂ ಅಧಿಕವಾಗಿಯೇ ಬೇಕಾಗಿರುವುದರಿಂದ ಒಂದು ವರ್ಷ ಮುನ್ನವೇ ಕಟ್ಟಿಗೆಗಳ ಸಂಗ್ರಹ ಮಾಡಲಾಗುತ್ತದೆ. ಇದು ಕೂಡಾ ಮೆರವಣಿಗೆಗಳ ಮೂಲಕ ಭಕ್ತಿ ಭಾವದಿಂದ ನಡೆಯುವ ಮುಹೂರ್ತವಾಗಿದೆ.

**ಭತ್ತ ಮುಹೂರ್ತ**

ಇದು ಮುಹೂರ್ತಗಳ ಪೈಕಿ ನಡೆಯುವ ಕಡೇ ಸಂಪ್ರದಾಯ. ಅಂದರೆ ಇದು ಭತ್ತ ಸಂಗ್ರಹದ ಪದ್ಧತಿ. ಶ್ರೀಕೃಷ್ಣ ಮಠದ ಬಡಗು ಮಾಳಿಗೆಯಲ್ಲಿರುವ ಉಗ್ರಾಣದಲ್ಲಿ ಈ ಭತ್ತಗಳನ್ನು ಸಂಗ್ರಹಿಸಲಾಗುತ್ತದೆ. ಶ್ರೀಕೃಷ್ಣ

ಹಬ್ಬವಾಗಿದೆ. ಉಡುಪಿಯ ಧಾರ್ಮಿಕ ಆಚರಣೆಯ ಸಂಕೇತವಾಗಿರುವ ಪರ್ಯಾಯ ಮಹೋತ್ಸವಕ್ಕೆ ಅವಿಭಜಿತ ದಕ್ಷಿಣದ ಜನರು ಮಾತ್ರವಲ್ಲದೆ ವಿದೇಶಗಳಿಂದಲೂ ಭಕ್ತರು ಆಗಮಿಸುತ್ತಿದ್ದಾರೆ. ಇಲ್ಲಿನ ಅಪೂರ್ವ ಸಂಪ್ರದಾಯ ಪದ್ಧತಿಗಳಿಗೆ ಎಲ್ಲರನ್ನೂ ಸೂಜಿಗಲ್ಲಿನಂತೆ ಸೆಳೆಯುವ ಅಪೂರ್ವ ಶಕ್ತಿ ಇದೆ.

ಪರ್ಯಾಯ ಪೀಠಕ್ಕೇರುವವರ ಶ್ರೀಗಳು ಆರು ತಿಂಗಳ ಮುನ್ನವೇ ತೀರ್ಥ ಕ್ಷೇತ್ರಗಳಿಗೆ ಸಂದರ್ಶನ ನೀಡುವುದು ಸಂಪ್ರದಾಯ. ಸುಮಾರು ಆರು ತಿಂಗಳ ಮೊದಲು ಮುಂದಿನ ಪರ್ಯಾಯ ಶ್ರೀಪಾದರು ಭಾರತದ ಪುಣ್ಯ ಕ್ಷೇತ್ರಗಳ ಸಂದರ್ಶನಾತ್ಮಕ ಸಂಚಾರ ಹೊರಟು ಮಾರ್ಗದಲ್ಲಿ ಬರುವ ಎಲ್ಲ ನಗರ, ಗ್ರಾಮಗಳಲ್ಲಿ ವಾಸ್ತವ್ಯ ಹೂಡುತ್ತಾ, ತತ್ವ ಪ್ರಚಾರ, ಉಡುಪಿಯ ಶ್ರೀಕೃಷ್ಣನ ಸಂದೇಶ. ಪರ್ಯಾಯ ಮಹೋತ್ಸವಕ್ಕೆ ಆಹ್ವಾನಿಸುತ್ತಾರೆ. ಅನೇಕ ಕ್ಷೇತ್ರಗಳ ದೇವರ ದರ್ಶನದಿಂದ ಪುಳಕಿತರಾಗಿ, ಹೊಸ ಹರುಷ, ನವೋಲ್ಲಾಸದೊಂದಿಗೆ ಎರಡು ವರ್ಷದ ತಮ್ಮ ಪರ್ಯಾಯದ ಅವಧಿಯಲ್ಲಿ ನೆರವೇರಿಸಬಹುದಾದ ಹೊಸ ಕನಸುಗಳ, ಸಂಕಲ್ಪಗಳನ್ನು ಜೊತೆಗೆ ಹೊತ್ತುಕೊಂಡು ಪರ್ಯಾಯ ಮಹೋತ್ಸವಕ್ಕೆ ಸುಮಾರು ಹದಿನೈದು ದಿನವಿರುವಾಗ ಶುಭ ಮುಹೂರ್ತದಲ್ಲಿ ಉಡುಪಿಗೆ ಆಗಮಿಸುವರು.

### ಪುರಪ್ರವೇಶ

ಈ ವೇಳೆಗೆ ಉಡುಪಿಯ ಪ್ರಮುಖ ಕಟ್ಟಡಗಳು, ಮೆರವಣಿಗೆ ಸಾಗಿ ಬರುವ ಹಾದಿಯ ಭವನಗಳು, ಶ್ರೀಕೃಷ್ಣ ಮಠದ ಉಳಿದ ಮಠಗಳು ಸುಣ್ಣ ಬಣ್ಣ ಬಳಿದುಕೊಂಡು ಸಿಂಗರಿಸಿಕೊಂಡು ನೂತನ ಪರ್ಯಾಯ ಶ್ರೀಪಾದರನ್ನು ಬರಮಾಡಿಕೊಳ್ಳಲು ಅಣಿಯಾಗಿರುತ್ತದೆ. ತೀರ್ಥ ಕ್ಷೇತ್ರಗಳ ಸಂಚಾರ ಮುಗಿಸಿ ಉಡುಪಿ ನಗರಕ್ಕೆ ಆಗಮಿಸುವ ಶ್ರೀಪಾದರನ್ನು ಶುಭಮುಹೂರ್ತದಲ್ಲಿ ಭವ್ಯ ಮೆರವಣಿಗೆಯಲ್ಲಿ ಸುಂದರವಾದ ಅಲಂಕೃತ ವಾಹನದಲ್ಲಿ ಕುಳ್ಳಿರಿಸಿ ಕರೆದುಕೊಂಡು ಬರಲಾಗುತ್ತದೆ. ಶ್ರೀಮಠದ ಪಟ್ಟದ ದೇವರನ್ನು ಮುಂದಿಟ್ಟುಕೊಂಡು ಶ್ರೀಪಾದರು ನಗರವನ್ನು ವೈಭವದಿಂದ ಪ್ರವೇಶಿಸುವರು. ಉಡುಪಿ-ಮಂಗಳೂರಿನ ಹೆದ್ದಾರಿಯಲ್ಲಿರುವ ಜೋಡುಕಟ್ಟೆಯಿಂದ ಸಾಮಾನ್ಯವಾಗಿ ಮೆರವಣಿಗೆಯ ಪ್ರಾರಂಭ. ವೇದಘೋಷಗಳು, ದಾಸರ ಭಜನೆಗಳು, ಸುವಾಸಿನಿಯರ ಸಾಲುಸಾಲು ಭಜನಾ ಮಂಡಳಿಗಳ ಸಮೂಹ, ವಿವಿಧ ಸ್ತಬ್ಧ ಚಿತ್ರಗಳು, ಶ್ರೀಮಧ್ವ ಪರಂಪರೆಯ ಆ ಮಠದ ಯತಿಗಳ ಹೆಸರನ್ನು ಹೊತ್ತು ಸ್ವಾಗತ ಕಮಾನುಗಳಲ್ಲಿ ಮೆರವಣಿಗೆ ಹಾದು ಬರುತ್ತದೆ. ಸುಂದರ ವಿದ್ಯುದೀಪಗಳಿಂದ ಅಲಂಕೃತ ವಾಹನದಲ್ಲಿ ಭವ್ಯ ಆಸನದಲ್ಲಿ ಅಲಂಕರಿಸಿದ ಶ್ರೀಪಾದರು ಶ್ರೀ ಕೃಷ್ಣ ಮಠದ ಪರಿಸರದ ರಥಬೀದಿ ಬಂದಾಗ ವಾಹನದಿಂದ ಇಳಿದು ನಡೆದುಕೊಂಡು ಪಟ್ಟದ ದೇವರನ್ನು ಚಿನ್ನದ ಪಲ್ಲಕ್ಕಿಯಲ್ಲಿಟ್ಟುಕೊಂಡು ರಥಬೀದಿಯಲ್ಲಿ ಸಾಗುತ್ತಾರೆ. ಎಲ್ಲ ಭಕ್ತರ ಬೃಹತ್ ಸಮೂಹದೊಂದಿಗೆ, ವಾದ್ಯ ಘೋಷಗಳ ನಡುವೆ ಚಂದ್ರೇಶ್ವರ- ಅನಂತೇಶ್ವರ - ಶ್ರೀ ಕೃಷ್ಣ-ಮುಖ್ಯ ಪ್ರಾಣರ ದರ್ಶನ ಪಡೆದು ಪ್ರಾರ್ಥಿಸಿ ತಮ್ಮ ಮಠದತ್ತ ತೆರಳುವರು. ಸರಿಯಾದ ಮುಹೂರ್ತದಲ್ಲಿ ಮಠದ ದ್ವಾರದಲ್ಲಿ ನವಗ್ರಹ ಪ್ರಾರ್ಥನೆ, ಧಾನ್ಯಗಳ ದಾನ ಸಲ್ಲಿಸಿ ಮಠವನ್ನು ಪ್ರವೇಶಿಸುವರು.

ರಥಬೀದಿಯಲ್ಲಿ ನೂತನ ಪರ್ಯಾಯ ಶ್ರೀಗಳ ಸ್ವಾಗತಕ್ಕೂ ಭವ್ಯ ವೇದಿಕೆ ಸಜ್ಜುಗೊಂಡಿದ್ದು ಪ್ರಸ್ತುತ ಪರ್ಯಾಯ ಮಠದ ಶ್ರೀಪಾದರ ಅಧ್ಯಕ್ಷತೆಯಲ್ಲಿ ವಿವಿಧ ಗಣ್ಯರ ಉಪಸ್ಥಿತಿಯಲ್ಲಿ ಸಭಾ ಕಾರ್ಯಕ್ರಮದ ಏರ್ಪಾಟಾಗಿರುತ್ತದೆ.

ಸಾವಿರಾರು ಜನರ ಭವ್ಯ ಸಭೆಯಲ್ಲಿ ಭಾವಿ ಪರ್ಯಾಯ ಶ್ರೀಪಾದರನ್ನು ಸನ್ಮಾನಿಸುವ ವಿವಿಧ ಸಂಘ ಸಂಸ್ಥೆಗಳವರು ಸನ್ಮಾನ ಪತ್ರ ಸಮರ್ಪಿಸುವ ಕಾರ್ಯಕ್ರಮ ನಡೆಯುತ್ತದೆ. ತಮ್ಮ ಮುಂದಿನ ಪರ್ಯಾಯ ಕಾಲದ ಯೋಜನೆಗಳನ್ನು ಶ್ರೀಪಾದರು ಪ್ರಕಟಿಸುತ್ತಾರೆ.

ಅಂದಿನಿಂದ ಉಡುಪಿಗೆ ಕಳೆ ಬಂದು ಕೃಷ್ಣ ಮಠದ ರಥಬೀದಿಯ ಪರಿಸರದಲ್ಲಿ ಸಾಂಸ್ಕೃತಿಕ-ಧಾರ್ಮಿಕ ಪ್ರವಚನ ಮುಂತಾದ ಕಾರ್ಯಕ್ರಮಗಳು ಪ್ರಾರಂಭವಾಗುತ್ತವೆ. ಪ್ರತಿದಿನ ರಾತ್ರಿ ಇಡೀ ರಥಬೀದಿ ವಿದ್ಯುತ್ ದೀಪಗಳಿಂದ ಜಗಮಗಿಸುತ್ತದೆ. ಜನಜಂಗುಳಿ-ಯಾತ್ರಿಕರ ದಂಡು ಪ್ರಾರಂಭಗೊಳ್ಳುತ್ತದೆ. ರಥಬೀದಿಯ ಎಲ್ಲ ಮಠಗಳಲ್ಲಿ ಜನರ ದಟ್ಟಣೆ ಪ್ರಾರಂಭವಾಗುತ್ತದೆ.

### ಸಪ್ತೋತ್ಸವ

ಪ್ರತಿ ವರ್ಷ ಜನವರಿಯಲ್ಲಿ ಬರುವ ಮಕರ ಸಂಕ್ರಮಣದಂದು ಶ್ರೀಕೃಷ್ಣನ ಪ್ರತಿಷ್ಠಾಪನಾ ದಿನವೆಂದು. ಅಂದು ಕೊನೆಗೊಳ್ಳುವ ಹಾಗೆ ಏಳುದಿನಗಳ ಪೂರ್ವದಲ್ಲಿ ಸಪ್ತೋತ್ಸವ ಪ್ರಾರಂಭವಾಗುತ್ತದೆ. ಪ್ರತಿದಿನ ಮಧ್ವ ಸರೋವರದಲ್ಲಿ ವೈಭವದ ತೆಪ್ಪೋತ್ಸವ - ಅನಂತರ ರಥೋತ್ಸವ, ಸಿಡಿಮದ್ದುಗಳ ಪ್ರದರ್ಶನದಿಂದ ಬರುವ ವಾತಾವರಣದಿಂದ ಶ್ರೀಕೃಷ್ಣ ಮಠದ ಪರಿಸರ ಜನಸಂದಣಿಯ ಬೀಡಾಗುತ್ತದೆ. ಪರ್ಯಾಯದ ಉತ್ಸವದ ಕ್ಷಣಗಣನೆ ಪ್ರಾರಂಭಗೊಳ್ಳುತ್ತದೆ.

### ಹೊರೆಕಾಣಿಕೆ ಸಮರ್ಪಣೆ

ಪರ್ಯಾಯಕ್ಕೆ ಮೂರು ನಾಲ್ಕು ದಿನಗಳಿರುವಾಗಲೇ ಹಲವು ಊರುಗಳಿಂದ, ಮಠಗಳಿಂದ, ದೇವಸ್ಥಾನಗಳಿಂದ ಸಂಘ ಸಂಸ್ಥೆಗಳಿಂದ ಅನ್ನ ಸಂತರ್ಪಣೆಗೆ ಅನುಕೂಲವಾಗಲೆಂದು ಶ್ರೀ ಕೃಷ್ಣಮಠಕ್ಕೆ ಹೊರೆ ಕಾಣಿಕೆಯು ಸಾಲುಸಾಲಾಗಿ ಹರಿಯುತ್ತದೆ. ಅಲಂಕೃತಗೊಂಡ ವಾಹನಗಳಲ್ಲಿ ಬಣ್ಣ ಬಣ್ಣದ ವೇಷಗಳೊಂದಿಗೆ-ಚಂಡೆವಾದ್ಯಗಳ ಘೋಷಣೆಗಳೊಡನೆ ಅಕ್ಕಿ ಬೆಲ್ಲ, ಬೇಳೆ ಕಾಳುಗಳು, ವಿವಿಧ ಬಗೆಯ ತರಕಾರಿಗಳು, ತೆಂಗಿನ ಕಾಯಿಗಳು ರಾಶಿರಾಶಿಯಾಗಿ ಶ್ರೀಕೃಷ್ಣನ ಪಾದಕ್ಕೆ ಕಾಣಿಕೆಯಾಗಿ ಸುರಿಯುತ್ತದೆ. ಭಾವಿ ಪರ್ಯಾಯ ಮಠದವರು ಅದನ್ನು ಸ್ವೀಕರಿಸಿ, ಹೊರೆಕಾಣಿಕೆ ತಂಡದವರಿಗೆ ಶ್ರೀಕೃಷ್ಣನ ಅನುಗ್ರಹವನ್ನು ಕೋರುತ್ತಾ ಸನ್ಮಾನಿಸಿ, ಉಪಚರಿಸಿ ಬೀಳ್ಕೊಡುವ ಸಂಭ್ರಮ ವರ್ಣನಾತೀತ. ಒಂದು ಮೆರವಣಿಗೆಯು ಮುಗಿಯುವಾಗಲೇ ಮತ್ತೊಂದು, ಮಗದೊಂದು ದಿಕ್ಕಿನಿಂದ ಕಿಲೋಮೀಟರ್ ಉದ್ದ ಸಾಲುಗಳಲ್ಲಿ ಹಸಿರುವಾಣಿ ಸಾಗಿಬರುವ ನಯನ ಮನೋಹರ ದೃಶ್ಯ ಕೃಷ್ಣನ ಭವ್ಯತೆಗೆ

ಸಾಕ್ಷಿಯಾಗುತ್ತದೆ. ಶ್ರೀಪಾದರ ಪರ್ಯಾಯದ ಆಹ್ವಾನಕ್ಕೆ ಓಗೊಟ್ಟು ಹಸಿರು ತರಕಾರಿಗಳ ರಾಶಿಗಳನ್ನು ನೀಡುವುದರ ಮೂಲಕ ತಮ್ಮ ಸಹಕಾರದ ವಾಣಿಯನ್ನು ನೀಡುವುದೇ "ಹಸಿರುವಾಣಿ".

### ಬಲಿಪೆ ಸಮರ್ಪಣೆ

ಪರ್ಯಾಯಕ್ಕಾಗಿ ಆಗಮಿಸುವ ಭಕ್ತವೃಂದ ಎಲ್ಲ ಮಠ, ಛತ್ರಗಳಲ್ಲಿ ತಂಗುವರು. ಹಾಲು, ಕಾಫಿ, ಉಪಾಹಾರ, ಊಟ, ಫಲಾಹಾರಗಳನ್ನು ನೀಡಿ ಯಾತ್ರಿಕರನ್ನು ಸತ್ಕರಿಸುವ ಸತ್ವರಂಪರೆಯ ನಿರ್ವಹಣೆ ಎಂಟು ಮಠಗಳಿಗೂ ಸಂಬಂಧಿಸಿದೆ. ಇದಕ್ಕಾಗಿ ಪರ್ಯಾಯ ಕುಳಿತುಕೊಳ್ಳುವ ಮತ್ತು ಏಳುವ ಮಠದವರು ಉಳಿದ ಮಠಗಳಿಗೆ ಸಾಂಕೇತಿಕವಾಗಿ ಅಡುಗೆಗೆ ಬೇಕಾದ ಅಕ್ಕಿ, ಬೇಳೆ, ತರಕಾರಿ, ಹುಣಸೆ, ತೆಂಗಿನ ಕಾಯಿ, ಬೆಲ್ಲ, ಉಪ್ಪು ಮೊದಲ್ಗೊಂಡು ಎಲ್ಲ ಸಾಮಾನುಗಳನ್ನು ಮೆರವಣಿಗೆಯಲ್ಲಿ ಸಾಗಿಸುತ್ತಾರೆ. ಇದಕ್ಕೆ ಹಲಿಕಾರ ವಷ್ಟೇ. ಎಲ್ಲ ಮಠಗಳಿಗೂ ತೆರಳಿ ಶ್ರೀ ಪಾದರಾದಿಯಾಗಿ ಎಲ್ಲರಿಗೂ ಆಹ್ವಾನ ನೀಡಲಾಗುವುದು.

### ಪರ್ಯಾಯಕ್ಕೆ ಆಮಂತ್ರಣ

ಮಕರ ಸಂಕ್ರಮಣದಿಂದ ಅಪೂರ್ವವಾದ ಮೂರು ರಥಗಳ ಮೆರವಣಿಗೆ ಶ್ರೀಕೃಷ್ಣ, ಅನಂತೇಶ್ವರ, ಮುಖ್ಯಪ್ರಾಣ, ಚಂದ್ರೇಶ್ವರ ದೇವರುಗಳು ರಥಗಳಲ್ಲಿ ರಾರಾಜಿಸುತ್ತಾರೆ. ಈ ಹೊತ್ತಿಗೆ ಬೇರೆ ಬೇರೆ ಊರುಗಳಲ್ಲಿ ಸಂಚಾರದಲ್ಲಿದ್ದ ಏಳು ಮಠಗಳ ಎಲ್ಲಾ ಶ್ರೀಪಾದರು ಉಡುಪಿಯಲ್ಲಿರುತ್ತಾರೆ. ಬ್ರಹ್ಮ ತೇಜಸ್ಸನ್ನು ಧರಿಸಿ ಸಾಲುಸಾಲಾಗಿ ಸಾಗುವ ಯತಿವರೇಣ್ಯರ ದರ್ಶನಕ್ಕಾಗಿ ಭಕ್ತ ಜನ ಕಣ್ಣರಳಿಸಿ ತುದಿಗಾಲಲ್ಲಿ ನಿಂತು ನಿಬ್ಬೆರಗಾಗಿ ವೀಕ್ಷಿಸುತ್ತಾರೆ. ಧನ್ಯತೆಯ ಮನೋಭಾವ ತಾಳುತ್ತಾರೆ.

ರಥದ ಹಗ್ಗಗಳನ್ನು ಜಗ್ಗುವಾಗ ಪರಮೋತ್ಸಾಹದಿಂದ ಭಕ್ತರು ಗೋವಿಂದ - ಗೋಪಾಲ, ಹರಿಸರ್ವೋತ್ತಮ-ವಾಯು ಜೀವೋತ್ತಮ, ಘೋಷಣೆಗಳನ್ನು ಕೂಗುತ್ತಾ ಆನಂದಿಸುತ್ತಾರೆ. ಸಿಡಿಮದ್ದಿನ ಚಮತ್ಕಾರ,ಗಗನದಲ್ಲಿ ಚಿತ್ತಾರ ಮೂಡಿಸಿ ಮಕ್ಕಳ ಮನದಲ್ಲಿ ಹುರುಷದ ಹೊನಲನ್ನೇ ಹರಿಸುತ್ತದೆ.ರಥೋತ್ಸವದೊಂದಿಗೆ ಜನವರಿ 14 ರಂದು ಮಕರ ಸಂಕ್ರಮಣ ಕೊನೆಗೊಳ್ಳುತ್ತದೆ.

ಜನವರಿ 15 ರಂದು ಬೆಳಗ್ಗೆ ಶ್ರೀಕೃಷ್ಣ ದೇವರಿಗೆ ಬೇಗ ಮಹಾಪೂಜೆಯನ್ನು ನೆರವೇರಿಸುತ್ತಾರೆ. ಹತ್ತು ಗಂಟೆಗೆ ಹಗಲಿನಲ್ಲಿ ಶ್ರೀಕೃಷ್ಣ ಬ್ರಹ್ಮರಥವನ್ನೇರುತ್ತಾನೆ. ಅಷ್ಟಮಠದ ಯತಿಗಳೂ ಬ್ರಹ್ಮರಥವನ್ನು ಅಲಂಕರಿಸುತ್ತಾರೆ. ಭಗವಂತನಿಗೆ ನಿವೇದಿಸಿ ನೀರಾಜನ ಗೈದ ನಂತರ ರಥದ ಚಲನೆಗೆ ಮುನ್ನ ರಥದ ಸುತ್ತಲೂ ಸೇರಿಸುವ ಸಾವಿರಾರು ಭಕ್ತವರ್ಗಕ್ಕೆ ಶ್ರೀಕೃಷ್ಣನ ಪ್ರಸಾದವನ್ನು ರಥದ ಮೇಲಿನಿಂದ ತೂರುತ್ತಾರೆ. ವಿವಿಧ ಬಗೆಯ ಹಣ್ಣುಗಳು,ತೆಂಗಿನಕಾಯಿ,ನಾಣ್ಯಗಳು ಹಲವು ಶ್ರೀಪಾದರ ಕೈಯಿಂದ ರೊಯ್ಯನೆ ದೂರ ಚಿಮ್ಮಿದಾಗ ಹೋ, ಹೋ ಎಂಬ ಗಟ್ಟಿಯಾದ ಸಾಮೂಹಿಕ ಕೂಗಿನೊಂದಿಗೆ ಶ್ರೀಕೃಷ್ಣನ ಪ್ರಸಾದ ಪಡೆಯಲು ಭಕ್ತರು ಹಾತೋರೆಯುವರು. ಅಷ್ಟಮಠದ ಯತಿಗಳು ಸ್ವತಃ ರಥದ ಹಗ್ಗಕ್ಕೆ ಕೈ ಹಚ್ಚಿ ಎಳೆಯುವಾಗ ಭಕ್ತರು ಅದಮ್ಯ ಉತ್ಸಾಹದಿಂದ ಜೈಕಾರ ಹಾಕುತ್ತಾ ಹಗ್ಗವನ್ನು ಎಳೆಯುವರು. ಬಹು ಭಾರದ ಗಂಭೀರವಾದ ರಥ ಸಾವಿರಾರು ಕೈಗಳ ಬಲಕ್ಕೆ, ಭಕ್ತಿ ಭಾವಕ್ಕೆ ಶರಣಾಗಿ ಬುಗುರಿಯಂತೆ ಬಿರಬಿರನೆ ಮುಂದೋಡುತ್ತದೆ. ಹತ್ತಾರು ನಿಮಿಷಗಳಲ್ಲಿ ರಥಬೀದಿಗೆ ಸುತ್ತು ಬಂದು ಸ್ವಸ್ಥಾನದಲ್ಲಿ ಕಂಗೊಳಿಸುತ್ತದೆ.

ಶ್ರೀಕೃಷ್ಣ ಮುಖ್ಯಪ್ರಾಣರನ್ನು ಮಧ್ವಮಂಟಪಕ್ಕೆ ತಂದು ಉಯ್ಯಾಲೆಯಲ್ಲಿಟ್ಟು ಹಾಡಿ, ತೂಗಿ, ನೀರಾಜನ ಬೆಳಗಿ ಉಪಚರಿಸಲಾಗುತ್ತದೆ.ಸಾಲುಸಾಲಾಗಿ ಜ್ಯೇಷ್ಠತೆಯ ಕ್ರಮ ವಹಿಸಿ ಆಸೀನರಾದ ಯತಿಗಳಿಗೆ ಗಂಧ ಮಾಲ್ಯಾದಿಗಳ ಉಪಚಾರ,ಪರಸ್ಪರ ಬಣ್ಣದ ಓಕುಳಿಯ ಲೇಪನ.ಅನಂತರ ಬಂಗಾರದ ಪಲ್ಲಕ್ಕಿಯಲ್ಲಿ ಶ್ರೀಕೃಷ್ಣ ಮುಖ್ಯಪ್ರಾಣರ ಉತ್ಸವ ಮೂರ್ತಿಗಳ ಮೆರವಣಿಗೆಯು ಮಧ್ವಸರೋವರದತ್ತ ಸಾಗುತ್ತದೆ. ಮಧ್ವ ಸರೋವರದಲ್ಲಿ ಈ ಏಳು ದಿನಗಳ ಉತ್ಸವದ ಸಮಾಪ್ತಿಯ ಅಂಗವಾಗಿ ಶ್ರೀ ಕೃಷ್ಣ ಮುಖ್ಯಪ್ರಾಣರಿಗೆ ಶಂಖದಿಂದ ಜಲಾಭಿಷೇಕ, ಅನಂತರ ಶ್ರೀಕೃಷ್ಣ ಮುಖ್ಯಪ್ರಾಣರ ಅಭಿಷೇಕದ ಜಲದ ಘೋಷಣೆಯೊಂದಿಗೆ ದೇವರ ಸಮೇತ ಯತಿಗಳ ಜೊತೆಯಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಹೆಂಗಸರು, ಗಂಡಸರು, ಮಕ್ಕಳು ಮಧ್ವಸರೋವರದಲ್ಲಿ ಅವಭೃತ ಸ್ನಾನ ನಡೆಸುವರು. ಸಾರ್ವತ್ರಿಕವಾಗಿ ಸಹಸ್ರಾರು ಸಂಖ್ಯೆಮಂದಿಗೆ ಅನ್ನಸಂತರ್ಪಣೆಯೊಂದಿಗೆ ಸಪ್ತೋತ್ಸವದ ಸಮಾಪನ ನಡೆಯುವುದು.

ಜನವರಿಯ ಹದಿನಾರರಂದು ವಿಶ್ರಾಂತಿಯ ದಿನವಾದರೆ ಜನವರಿ ಹದಿನೇಳರಂದು ಪರ್ಯಾಯ ಏಳುವ ಶ್ರೀಪಾದರ ಕಡೆಯ ಮಹಾಪೂಜೆ,ಶ್ರೀಕೃಷ್ಣನಿಗೆ, ವಿಶೇಷ ಅನ್ನ ಸಂತರ್ಪಣೆ, ಸಾಯಂಕಾಲ ರಥಬೀದಿಯಲ್ಲಿ ಯಶಸ್ವಿ ಪರ್ಯಾಯ ನಡೆಸಿದ ಶ್ರೀಪಾದರಿಗೆ ಅಭಿನಂದನಾ ಕಾರ್ಯಕ್ರಮ.ಎರಡು ವರ್ಷಗಳ ನಿರ್ವಹಿಸಿದ, ಸಾಧಿಸಿದ ಕಾರ್ಯಗಳ ಬಗೆಗಿನ ಸಿಂಹಾವಲೋಕನ.ರಾತ್ರಿ ಬ್ರಹ್ಮ ರಥೋತ್ಸವದೊಂದಿಗೆ ಪರ್ಯಾಯದಲ್ಲಿರುವ ಶ್ರೀಪಾದರ ಕೃಷ್ಣ ಪೂಜೆಯ ಎರಡು ವರ್ಷದ ಹೊಣೆಗಾರಿಕೆ ಮುಗಿಯುತ್ತದೆ.

ಮಾರನೆಯ ದಿನದ ಬೆಳಗಿನ ನಿರ್ಮಾಲ್ಯ ವಿಸರ್ಜನಾ ಪೂಜೆಯ ಹೊಣೆಯೂ ಇವರಿಗೆ ಇರುತ್ತದೆ.ಮುಂದಿನ ಪೂಜೆಗಳ ಜವಾಬ್ದಾರಿ ಭಾವಿ ಪರ್ಯಾಯ ಶ್ರೀಪಾದರಿಗೆ ಸೇರಿದ್ದು,ರಾತ್ರಿ ಹನ್ನೆರಡಕ್ಕೆ ಹಳೆಯ ಪರ್ಯಾಯ ಶ್ರೀಪಾದರಿಂದ ಶ್ರೀ ಮಧ್ವಾಚಾರ್ಯರ ಪೀಠದಿಂದ ಮಂತ್ರಾಕ್ಷತೆಯನ್ನು ಪಡೆಯಲು ನೂಕುನುಗ್ಗಲು. ಈ ದಿನ ಇಡೀ ರಾತ್ರಿ ಉಡುಪಿ ನಿದ್ರಿಸುವುದಿಲ್ಲ.ಎಲ್ಲೆಡೆ ವಿದ್ಯುದ್ದೀಪಗಳು ರಾತ್ರಿಯನ್ನು ಹಗಲಾಗಿಸಿದ್ದರೆ, ಜನರು ಉತ್ಸಾಹದಿಂದ ತಿರುಗುತ್ತಾ ಹಲವು ಕಡೆಗಳಲ್ಲಿ ಜರಗುವ ಸಾಂಸ್ಕೃತಿಕ ಕಾರ್ಯಕ್ರಮಗಳ ಸವಿಯನ್ನು ಆಸ್ವಾದಿಸುತ್ತಾರೆ. ಇತ್ತ ಮಠದಲ್ಲಿ ರಾಜಾಂಗಣದಲ್ಲಿ ಬೆಳಗಿನ ಜಾವದ ದರ್ಬಾರಿನ ಅಂತಿಮ ಅಲಂಕಾರದ ಸಿದ್ಧತೆ.ದೇವಲೋಕದ ಇಂದ್ರನ ಸಭೆಯನ್ನು ನಾಚಿಸುವಂತೆ ವಿವಿಧ ಪುಷ್ಪಗಳ ರಾಶಿಗಳಿಂದ ಕಣ್ಸೆಳೆಯುವ ಮನಮೋಹಕ ದರ್ಬಾರಿನ ರಚನೆ. ಅಷ್ಟಮಠದ



ಯತಿಗಳಿಗೆ ಮಾತ್ರವೇ ವೇದಿಕೆಯಲ್ಲಿ ಅವಕಾಶ. ಆಗಮಿಸುವ ಗಣ್ಯಾತಿಗಣ್ಯರಾದಿಯಾಗಿ ಎಲ್ಲರಿಗೂ ಸುಖಾಸೀನದ ವ್ಯವಸ್ಥೆ. ಬೆಳಗಿನ ಜಾವ 4 ಗಂಟೆಗೆ ವಿಶೇಷ ಸಂಗೀತ ಕಾರ್ಯಕ್ರಮದ ಏರ್ಪಾಟಾಗಿರುತ್ತದೆ.

## ಪರ್ಯಾಯೋತ್ಸವ

ಪರ್ಯಾಯ ಪೀಠವನ್ನೇರುವ ಶ್ರೀಪಾದರು 17ನೆಯ ದಿನಾಂಕದ ರಾತ್ರಿಯಲ್ಲಿ ಉಡುಪಿಯಿಂದ ಮಂಗಳೂರಿಗೆ ಸಾಗುವಾಗ 10 ಕಿ.ಮೀ.ದೂರದ ಹೆದ್ದಾರಿಯಲ್ಲಿರುವ ದಂಡತೀರ್ಥ ಮಠಕ್ಕೆ ತೆರಳುತ್ತಾರೆ. ಶ್ರೀ ಮಧ್ವಾಚಾರ್ಯರು ಬಾಲ್ಯದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಮನೆಯಿದು.ಗುರುಗಳ ಮನೆಯ ತೋಟ ಬಹು ವಿಸ್ತಾರವಾಗಿದ್ದು, ಆದ್ದರಿಂದಲೇ ತೋಟತಿಲ್ಲಾಯರೆಂಬ ಪದನಾಮ. ನೀರಿಗೊಮ್ಮೆ ಬವಣೆ ಬಂದಾಗ ಅವರ ಕಷ್ಟ ಕಂಡು ಮಧ್ವರು ತಮ್ಮ ಕೈಯಲಿದ್ದ ದಂಡದ ಸ್ಪರ್ಶದಿಂದ ನೀರಿನ ತಾಣವಿದೆ.  ಆ ತೀರ್ಥದಲ್ಲಿ ಬೆಳಗಿನ ಜಾವ ಮೂರು ಗಂಟೆಗೆ ಉಡುಪಿಯ ಮುಖ ಮಂಟಪದ ಬಳಿ ಇರುವ ಜೋಡುಕಟ್ಟೆಗೆ ಆಗಮಿಸುವರು. ಶ್ರೀಪಾದರ ಸ್ವಾಗತಕ್ಕೆ ಆದಾಗಲೇ ಜನಸ್ತೋಮಕಾತರದಿಂದ ಕಾದಿರುತ್ತದೆ. ಸದ್ಯ ಪೂಜಾ ದೀಕ್ಷಿತರಾಗಿರುವ ಶ್ರೀ ಪಾದರ ಹೊರತಾಗಿ ಉಳಿದ ಆರು ಮಠದ ಮಠಾಧೀಶರು ಜೋಡುಕಟ್ಟೆಗೆ ಆಗಮಿಸುವರು. ಪೀತಾಂಬರ  ಧರಿಸಿ ತಲೆಗೆ ಪೇಟವನ್ನು ಧರಿಸಿ ಮೇನೆಗಳಲ್ಲಿ ಆಸೀನರಾಗುವರು. ಅವರು ಸರ್ವಸಂಗ ಪರಿತ್ಯಾಗಿಗಳಾದ ಸನ್ಯಾಸಿಗಳಾಗಿದ್ದರೂ ಇದೊಂದು ದಿನ  ಹೊಸತಾಗಿ ಶ್ರೀ ಕೃಷ್ಣನ ಪೂಜೆಗೆ ತೆರಳುವ ಶ್ರೀಪಾದರ ಸಂಭ್ರಮದಲ್ಲಿ ಭಾಗಿಯಾಗುವ ಹಗದೊಡೆಯನಾದ ಶ್ರೀ ಕೃಷ್ಣನ ಪೂಜಾ ಕೈಂಕರ್ಯವೆಂಬುದು ರಾಜ್ಯಭಾರದ ಸೇವೆಗಿಂತಲೂ ಮಿಗಿಲೆಂಬ ಸಂಭ್ರಮದಿಂದ ನವನವೀನ ಉತ್ಸಾಹದ ಸಂಕೇತವಾಗಿ ಕಾವಿಬಣ್ಣದ ಪೀತಾಂಬರ ಧಾರಿಗಳಾಗುವರು.ಈ ಒಂದು ದಿನ ಪೀತಾಂಬರಧಾರಿಯಾಗುವ ಅವಕಾಶವಿದ್ದರೂ ಶ್ರೀವಿಶ್ವೇಶತೀರ್ಥ ಶ್ರೀಪಾದರು ಮತ್ತು ಕೆಲವರು ಖಾದಿಯ ಕಷಾಯ ವಸ್ತ್ರವನ್ನು ಮಾತ್ರ ಧರಿಸುವರು. ಜೋಡು ಕಟ್ಟೆಯಿಂದ ಶ್ರೀ ಕೃಷ್ಣ ಮಠದವರೆಗೆ ರಸ್ತೆಯ ಬದಿಯಲ್ಲಿ, ಕಟ್ಟಡಗಳ ಮೇಲ್ಭಾಗದಲ್ಲಿ, ಸ್ಥಳ ದೊರೆತ ಸ್ಥಳಗಳಲ್ಲೆಲ್ಲಾ ಲಕ್ಷಾಂತರ ಜನರು ಕುಳಿತು ಭಾರತೀಯ ಸಂಸ್ಕೃತಿಯ ಪಡಿಯಚ್ಚನ್ನು ಪ್ರದರ್ಶಿಸುವ ಮೆರವಣಿಗೆಯನ್ನು ವೀಕ್ಷಿಸುವರು. ಭಾರತದ ನಾನಾ ಭಾಗಗಳ ಜಾನಪದ ತಂಡಗಳು, ಕರ್ನಾಟಕದ ಹಲವು ಭಾಗಗಳ ಜಾನಪದ ತಂಡಗಳು, ವಾದ್ಯ ವೈವಿಧ್ಯಗಳು, ದಾಸರ ತಂಡಗಳು, ಭಜನಾಮಂಡಳಿಗಳು, 50 ಕ್ಕೂ ಹೆಚ್ಚಿನ ಸ್ತಬ್ಧ ಚಿತ್ರಗಳು. ದಶಾವತಾರ, ದುರ್ಗೆ, ಶಿವ, ಗಣೇಶ, ಸ್ಕಂದ ಮೊದಲಾದ ದೇವರುಗಳ ವಿವಿಧ ಚಾರಿತ್ರಿಕ- ಧಾರ್ಮಿಕ ಘಟನೆಗಳನ್ನು ಬಿಂಬಿಸುವ ಆಧುನಿಕ ತಂತ್ರಜ್ಞಾನದ ಬಳಕೆಯಿಂದ ಚಮತ್ಕಾರವನ್ನು ಪ್ರದರ್ಶಿಸುವ ವಿವಿಧ ಬಗೆಯ ಸ್ತಬ್ಧ ಚಿತ್ರಗಳು ನೋಡುಗರ ಕಣ್ಮನಗಳನ್ನು ತಣಿಸುತ್ತವೆ.

ಶ್ರೀಮಧ್ವಾಚಾರ್ಯರು ಪರಂಪರೆಯ ಪೂರ್ವಾಚಾರ್ಯರುಗಳ ತೈಲ ಚಿತ್ರಗಳು, ಅಷ್ಟಮಠದ ಪಟ್ಟದ ದೇವರ ವರ್ಣರಂಜಿತ ಚಿತ್ರಗಳು ಇವುಗಳನ್ನು ಹೊತ್ತ ವಿದ್ಯುದ್ದೀಪಾಲಂಕೃತ ವಾಹನಗಳು, ಕಿವಿಗಡಕಚ್ಚುವ ವಾದ್ಯ ಸಂದೋಹಗಳು,ರಾತ್ರಿಯನ್ನು ಪೂರ್ಣವಾಗಿ ಹೊಡೆ ದೋಡಿಸುವಲ್ಲಿ ಸಂಶಯವಿಲ್ಲ, ಸುಮಾರು 2 ಗಂಟೆಗಳ ಈ ಮೆರವಣಿಗೆ ರಥಬೀದಿಯನ್ನು ತಲುಪುತ್ತಲೇ ಮೇನೆಗಳಿಂದ ಇಳಿದ ಯತಿಗಳು ಬಿಳಿಯ ಹಾಸುಗೆಗಳಲ್ಲಿ ನಡೆದು ಬಂದು  ಶ್ರೀಕೃಷ್ಣನ ದರ್ಶನ ಪಡೆದು ಬೆಡಗಿನ ಬಡಗುಮಾಳಿಗೆಯನ್ನು ತಲುಪಿ ಅರಳಿನಿಂದ ನಿರ್ಮಿತವಾದ ಆಸನಗಳಲ್ಲಿ ಆಸೀನರಾಗುವರು.ಭಾವಿ ಪರ್ಯಾಯ ಶ್ರೀಪಾದರು ಶ್ರೀಕೃಷ್ಣನ ಮೊದಲ  ದರ್ಶನವನ್ನು ಕನಕಗೋಪುರದ ಕೆಳಗಿರುವ ಕನಕನ ಕಿಂಡಿಯ ಮೂಲಕವೇ  ಮಾಡಬೇಕು. ನವಗ್ರಹ ಪ್ರಾರ್ಥನೆ, ನವಗ್ರಹ ದಾನ ಅನಂತರ ಶ್ರೀ ಚಂದ್ರಮೌಳೀಶ್ವರನ ದರ್ಶನ, ಅನಂತೇಶ್ವರನ ದರ್ಶನ-ಪ್ರಾರ್ಥನೆ ಮುಗಿಸಿ, ಶ್ರೀಕೃಷ್ಣನ ಗುಡಿಯ ಬಾಗಿಲಿಗೆ ಬಂದಾಗ ಪ್ರಸಕ್ತ ಪರ್ಯಾಯ ಶ್ರೀಪಾದರು ಭಾವಿ ಪರ್ಯಾಯ ಶ್ರೀಪಾದರಿಗೆ ಹಸ್ತಲಾಘವನ್ನಿತ್ತು ಹಾರ ಹಾಕಿ ಅರಳಿನ ವೃಷ್ಟಿಗೈದು ಸ್ವಾಗತಿಸಿ, ಮಧ್ವಸರೋವರಕ್ಕೆ ಕರೆದೊಯ್ಯುವರು. ಪಾದಪ್ರಕ್ಷಾಲನೆ ಮಾಡಿ ತೀರ್ಥಕ್ಕೆ ಅಭಿನಂದಿಸಿ, ಭಾಗೀರಥಿಯ ದರ್ಶನಗೈದು ಶ್ರೀಕೃಷ್ಣ ಮಠದ ಒಳಗೆ ಪ್ರವೇಶಿಸುತ್ತಾರೆ. ಭಾವಿ ಪರ್ಯಾಯ ಶ್ರೀಪಾದರು ಶ್ರೀಕೃಷ್ಣನ ದರ್ಶನ ಪಡೆದು ತೀರ್ಥಮಂಟಪದಲ್ಲಿ ತಮ್ಮ ಪಟ್ಟದ ದೇವರನ್ನು ಇಟ್ಟು ಪೂಜಿಸುವರು. ಈರ್ವರು ಶ್ರೀಪಾದರು ಶ್ರೀಕೃಷ್ಣನ ಗರ್ಭಗುಡಿಯನ್ನು ಪ್ರವೇಶಿಸಿ ಶ್ರೀಕೃಷ್ಣನ ಅಂತರಂಗದ ಪೂರ್ಣದರ್ಶನವನ್ನು ಪಡೆದು ಪ್ರಾರ್ಥನೆ ಸಲ್ಲಿಸಿ - ಶ್ರೀ ಕೃಷ್ಣ ಮುಖ್ಯಪ್ರಾಣರ ದರ್ಶನ ಪಡೆದು ಪ್ರಾರ್ಥಿಸಿ, ಗರುಡನ ದರ್ಶನ ಪ್ರಾರ್ಥಿಸಿ ತಮ್ಮ ಪಟ್ಟದ ದೇವರ ಸಮೇತ ಸಿಂಹಾಸನವೆಂದು ಕರೆಸಿಕೊಳ್ಳುವ ಕೋಣೆಗೆ ತೆರಳುತ್ತಾರೆ. ಅಲ್ಲಿ ಪೀಠದಲ್ಲಿ ತಮ್ಮ ದೇವರನ್ನು ಸ್ಥಾಪಿಸುವರು. ಪ್ರಸಕ್ತ ಪರ್ಯಾಯ ಶ್ರೀಗಳು ಮಧ್ವಾಚಾರ್ಯರು ಕುಳಿತುಕೊಳ್ಳುತ್ತಿದ್ದ ಪೀಠ (ಅದುವೇ ಸಿಂಹಾಸನ)ದಲ್ಲಿ ಕುಳಿತು ಬಾವಿ ಪರ್ಯಾಯ ಪೀಠದ ಯತಿಗಳಿಗೆ ಗಂಧಾದಿ ಸತ್ಕಾರಗಳನ್ನು ಇತ್ತು ಸತ್ಕರಿಸುವರು.

## ಪರ್ಯಾಯ ಪೀಠಾರೋಹಣ

ಪ್ರಸಕ್ತ ಪರ್ಯಾಯ ಮಠಾಧೀಶರು ಶ್ರೀಮಧ್ವಾಚಾರ್ಯರ ಪೀಠದಿಂದ ಹೊರಬಂದು ಭಾವಿ ಪರ್ಯಾಯ ಶ್ರೀಪಾದರನ್ನು ಕೈಹಿಡಿದು  ಶ್ರೀಮಧ್ವಾಚಾರ್ಯರ ಸಿಂಹಾಸನದಲ್ಲಿ ಕುಳ್ಳಿರಿಸುವರು.ಈ ಕ್ಷಣದಿಂದ ಇವರು  ಅಧಿಕೃತ

**ಉಭಯ ಶ್ರೀಪಾದರು ಬಡಗುಮಾಳಿಗೆಯಲ್ಲಿ ವಿಶೇಷ ವಾಗಿ ನಿರ್ಮಿಸಿರುವ ಅರಳು ಗದ್ದಿಗೆಯತ್ತ ಸಾಗುವರು. ನೂತನ ಪರ್ಯಾಯ ಶ್ರೀಪಾದರು ತಮ್ಮ ಮಠದ ವತಿಯಿಂದ ಎಲ್ಲ ಶ್ರೀಪಾದರಿಗೆ ಗಂಧಾದಿ ಉಪಚಾರಗಳನ್ನು ಸಲ್ಲಿಸುವರು.**

ವಾಗಿ ಪರ್ಯಾಯ ಪೀಠಾಧಿಪತಿಗಳೆನಿಸುವರು. ಪರ್ಯಾಯ ಪೀಠಸ್ಥರಾದ ಯತಿಗಳಲ್ಲಿ ಸಾಕ್ಷಾತ್ ಶ್ರೀಮಧ್ವಾಚಾರ್ಯರ ವಿಶೇಷ ಸನ್ನಿಧಾನವಿರುವುದೆಂದು ಪ್ರತೀತಿಯಿದೆ. ಇವರ ಮೂಲಕ ಯಶಸ್ವಿಯಾಗಿ ಎರಡು ವರ್ಷ ಶ್ರೀಕೃಷ್ಣನ ಪೂಜಾ ಕೈಂಕರ್ಯವನ್ನು ನಡೆಸುವವರು ಶ್ರೀಮಧ್ವಾಚಾರ್ಯರೇ ಎಂಬುದಾಗಿ ಸಂಪ್ರದಾಯವಿದೆ. ವಿಶೇಷ ಗಾಳಿ ಬೆಳಕಿಲ್ಲದ ಗರ್ಭಗುಡಿಯಲ್ಲಿ ಕುಳಿತು ಶ್ರೀಕೃಷ್ಣ ನಿಗೆ ಗಂಟೆಗಳ ಕಾಲ ಪೂಜಿಸುವುದಕ್ಕೆ ಶ್ರೀ ಮುಖ್ಯ ಪ್ರಾಣನ ಅನುಗ್ರಹದ ಹೊರತು ಸಾಧ್ಯವಿಲ್ಲ.

### ಅಕ್ಷಯ ಪಾತ್ರೆ ಮತ್ತು ಸಟ್ಟುಗದ ಹಸ್ತಾಂತರ

ಈರ್ವರು ಶ್ರೀಪಾದರು ಶ್ರೀಕೃಷ್ಣ ಮಠದ ಗರ್ಭ ಗುಡಿಯ ಬಾಗಿಲಿನಲ್ಲಿರುವ ಶ್ರೀ ಮಧ್ವಾಚಾರ್ಯರ ಪ್ರತೀಕದ ಬಳಿ ಬರುತ್ತಾರೆ. ಇಬ್ಬರೂ ಆಚಾರ್ಯರಿಗೆ ನಮಸ್ಕರಿಸಿ ಪ್ರಾರ್ಥಿಸುವರು. ಆಚಾರ್ಯಮಧ್ವರ ಕಾಲದಿಂದ ಜೋಪಾನ ವಾಗಿ ರಕ್ಷಿಸಿಕೊಂಡು ಬಂದಿರುವ ಅಕ್ಷಯ ಪಾತ್ರೆ ಮತ್ತು ಸಟ್ಟುಗ ಹಾಗೂ ಶ್ರೀಕೃಷ್ಣನ ಗರ್ಭಗುಡಿಯ ಬೀಗದ ಕೈಗಳನ್ನು ಅಧಿಕೃತವಾಗಿ ಶ್ರೀಕೃಷ್ಣ ಮಧ್ವಾಚಾರ್ಯರ ಸಾಕ್ಷಿಯಾಗಿ ಪರ್ಯಾಯ ಶ್ರೀಪಾದರಿಗೆ ಒಪ್ಪಿಸುವರು. ಇದೀಗ ಮುಂದಿನ ಎರಡು ವರ್ಷದ ಅಧಿಕಾರ ಹಸ್ತಾಂತರ ಪೂರ್ಣಗೊಂಡಿತು.

### ಬೆಡಗಿನ ಬಡಗುಮಾಳಿಗೆ

ಉಭಯ ಶ್ರೀಪಾದರು ಬಡಗುಮಾಳಿಗೆಯಲ್ಲಿ ವಿಶೇಷ ವಾಗಿ ನಿರ್ಮಿಸಿರುವ ಅರಳು ಗದ್ದಿಗೆಯತ್ತ ಸಾಗುವರು. ನೂತನ ಪರ್ಯಾಯ ಶ್ರೀಪಾದರು ತಮ್ಮ ಮಠದ ವತಿಯಿಂದ ಎಲ್ಲ ಶ್ರೀಪಾದರಿಗೆ ಗಂಧಾದಿ ಉಪಚಾರಗಳನ್ನು ಸಲ್ಲಿಸುವರು. ಶ್ರೀ ಮಧ್ವಾಚಾರ್ಯರ ಕಾಲದಿಂದಲೂ ಪರ್ಯಾಯ ಮಹೋತ್ಸವದ ಸಭೆ ಇಲ್ಲಿ ನಡೆಯುತ್ತಿದ್ದು ಅದರ ಕುರುಹಾಗಿ ನಿಮಿಷಗಳ ಸಾಂಕೇತಿಕವಾಗಿ ಸಭೆ ಜರು ಗುತ್ತದೆ.

### ರಾಜಾಂಗಣದ ರಾಜ ದರ್ಬಾರಿನ ಸಭೆ

ಎಲ್ಲ ಶ್ರೀಪಾದರು ಪರ್ಯಾಯ ಶ್ರೀಪಾದರನ್ನು ಮುಂದಿಟ್ಟು ಕೊಂಡು ಸಕಲ ವಾದ್ಯ ಘೋಷಗಳ ನಡುವೆ ರಾಜಾಂಗಣದ ರಾಜ ದರ್ಬಾರನ್ನು ಪ್ರವೇಶಿಸಿ ಅನೂಚನ ಕ್ರಮ ದಂತೆ ತಮ್ಮ ತಮ್ಮ ಭತ್ತದ ಅರಳಿನ ಗದ್ದುಗೆಗಳಿಂದ ನಿರ್ಮಿತ ವಾದ ಸುಖಾಸೀನಗಳಲ್ಲಿ ಆಸೀನರಾಗುವರು.

ಎರಡು ತಾಸುಗಳ ಪೂರ್ವದಲ್ಲೇ ಪೂರ್ಣರೂಪದಲ್ಲಿ ಜನ ನಿಬಿಡವಾದ ರಾಜಾಂಗಣ ಪೂರ್ಣವಾಗಿ ಎದ್ದು ನಿಂತು ಶ್ರೀ ಪಾದರನ್ನು ಸ್ವಾಗತಿಸಿ, ಗೌರವ ತೋರ್ಪಡಿಸಿ ಆಸೀನ ವಾಗುತ್ತದೆ. ಇಂದ್ರಲೋಕದಂತೆ ಕಂಗೊಳಿಸುವ ದರ್ಬಾರಿನ ಕಾರ್ಯಕ್ರಮದ ವೀಕ್ಷಣೆಗಾಗಿ ಹರಸಾಹಸಪಟ್ಟು ಪಾಸು ಸಂಪಾದಿಸಿ ಒಳಸೇರಿದ ಮುಂದಿಗೆ ಸಂತಸವೋ ಸಂತಸ. ಟಿ.ವಿ. ಮಾಧ್ಯಮಗಳು ಈ ಎಲ್ಲ ಕಾರ್ಯಕ್ರಮಗಳನ್ನು ಪೂರ್ಣ ರೂಪದಲ್ಲಿ ನೇರಪ್ರಸಾರದ ಮೂಲಕ ಬಿತ್ತರಿಸುತ್ತಿದ್ದರೂ, ಜನ ಸಾಗರಕ್ಕೇನೂ ಕೊರತೆಯಿಲ್ಲ. ಪ್ರತ್ಯಕ್ಷವಾಗಿ ಕಂಡು ಆನಂದಿಸಿದ ಅನುಭವಕ್ಕೆ ಯಾವುದೂ ಎಂದಿಗೂ ಸಾಟಿಯಾಗುವುದಿಲ್ಲ.

ವೇದ ಘೋಷಗಳಿಂದ ಕಾರ್ಯಕ್ರಮದ ಆರಂಭ. ಎಲ್ಲರಿಗೂ ಸ್ವಾಗತ ಸಮರ್ಪಣೆ, ರಾಷ್ಟ್ರ ಪ್ರಮುಖರು, ರಾಜ್ಯ ಪ್ರಮುಖರು, ಗಣ್ಯಾತೀಗಣ್ಯರು, ವಿದ್ವಾಂಸರು, ಅಧಿಕಾರಿಗಳು, ಶ್ರೇಷ್ಠ ಕಲಾವಿದರು, ಇವರ ಭಾಗವಹಿಸುವಿಕೆ ಸಮಾರಂಭಕ್ಕೆ ಮತ್ತಷ್ಟು ಕಳೆಯನ್ನು ಕಟ್ಟುತ್ತದೆ. ಹಿರಿಯ ಶ್ರೀಪಾದರುಗಳಿಂದ ಆಶೀರ್ವಚನ, ಹಿಂದಿನ ಪರ್ಯಾಯ ಶ್ರೀಪಾದರಿಂದ ಎರಡು ವರ್ಷಗಳ ಯೋಜನೆಗಳ ಘೋಷಣೆ, ಸಕಲರಿಂದ ಸಹಕಾರದ ಅಪೇಕ್ಷೆ. ಆಸ್ಥಾನ ವಿದ್ವಾಂಸರ ಘೋಷಣೆ, ಗಣ್ಯರ ಕಲಾವಿದರ ಸನ್ಮಾನ. ರಾಜ ದರ್ಬಾರಿಗೆ ಅನುಗುಣವಾಗಿ ಸಭೆಯ ಮಧ್ಯದಲ್ಲೇ ಶ್ರೇಷ್ಠ ಸಂಗೀತಗಾರರಿಂದ ಗಾಯನ, ಕಲಾವಿದರಿಂದ ನೃತ್ಯ ಇತ್ಯಾದಿ. ಮಠದ ಅಧಿಕಾರ ವರ್ಗದ ಘೋಷಣೆ. ಭಾರತದ ಪ್ರಸಿದ್ಧ ದೇವಸ್ಥಾನಗಳ ಅಧಿಕಾರ ವರ್ಗದರಿಂದ ಪರ್ಯಾಯ ಶ್ರೀ ಪಾದರಿಗೆ ಆಯಾ ಕ್ಷೇತ್ರದ ದೇವರ ಪ್ರಸಾದದ ಸಮರ್ಪಣೆ. ಪ್ರಮುಖ ವ್ಯಕ್ತಿಗಳಿಂದ ಶ್ರೀ ಪಾದರಿಗೆ ಪಟ್ಟದ ಕಾಣಿಕೆಯ ಸಮರ್ಪಣೆ ಮತ್ತು ವಂದನಾರ್ಪಣೆ.

### ಸಭೆಯ ಸಮಾಪ್ತಿ

ಪರ್ಯಾಯದ ಪ್ರಮುಖರಾದ ಧಾರ್ಮಿಕ - ಸಾಮಾಜಿಕ ಸಂಪ್ರದಾಯಗಳು ಕೊನೆಗೊಂಡಿತು. ಪರ್ಯಾಯ ಶ್ರೀಪಾದರು ಹಿಂದಿನ ಪರ್ಯಾಯ ಶ್ರೀಪಾದರನ್ನು ಗೌರವಯುತವಾಗಿ ಅವರ ಪಟ್ಟದ ದೇವರನ್ನು ಚಿನ್ನದ ಪಲ್ಲಕ್ಕಿಯಲ್ಲಿರಿಸಿ ಶ್ರೀಕೃಷ್ಣ ಮಠದ ಹೊರಬಾಗಿಲಿನವರೆಗೆ ಬೀಳ್ಕೊಡುತ್ತಾರೆ. ಮಠದ ಬಿರುದಾವಲಿಯೊಂದಿಗೆ ರಥಬೀದಿಯ ಪ್ರಾಕಾರದಲ್ಲಿರುವ ಅವರ ಮಠಕ್ಕೆ ದಿವಾನರು ಮೊದಲಾದವರು ಕಳಿಸಿಕೊಡುವರು. ಈ ಹೊತ್ತಿಗೆ ಸುಮಾರು ಬೆಳಿಗ್ಗೆ ಎಂಟು ಗಂಟೆಯಾಗುತ್ತಿರಬಹುದು. ಶ್ರೀಕೃಷ್ಣನ





ಸಾಯಂಕಾಲದಲ್ಲಿ ವಿಜೃಂಭಣೆಯ ಸಾಂಸ್ಕೃತಿಕ ಕಾರ್ಯಕ್ರಮ ರಾಜಾಂಗಣದಲ್ಲಿ ಇದು ಐದು ದಿನಗಳವರೆಗೂ ಮುಂದುವರೆಯುತ್ತದೆ. ಪ್ರತಿವರ್ಷವೂ ಪರ್ಯಾಯ ಮಹೋತ್ಸವದ ಕಟ್ಟುಪಾಡುಗಳು ವಿಭಿನ್ನವಲ್ಲ. ಸಂಪ್ರದಾಯದಲ್ಲಿ ವ್ಯತ್ಯಾಸವಿಲ್ಲ.ಏಳುನೂರೈವತ್ತು ವರ್ಷಗಳಿಂದ ಯಾವುದೇ ಲಿಖಿತ ನಿಬಂಧನೆಗಳು, ನಿಯಮಗಳ ಸಂವಿಧಾನವಿಲ್ಲದಿದ್ದರೂ ಯಾವುದೇ ಗೊಂದಲವಿಲ್ಲದೆ ಸುಲಲಿತವಾಗಿ, ವ್ಯವಸ್ಥಿತವಾಗೋ ಸಾಗುತ್ತಿರುವ ಪರ್ಯಾಯ ಉತ್ಸವ ಆಚರಣೆಗೆ ಧಾರ್ಮಿಕ-ಚಾರಿತ್ರಿಕ-ಸಾಂಪ್ರದಾಯಿಕ ಮಹತ್ವವಿದೆ. ಅಂದಿನಿಂದ ಇಂದಿನವರೆಗೂ ಜನರು ಹೊಚ್ಚ ಹೊಸದೆಂಬಂತೆ ಎರಡು ವರ್ಷಗಳಿಗೊಮ್ಮೆ ನಡೆಯುವ ಪರ್ಯಾಯದ ಸೊಬಗನ್ನು ಸವಿಯುತ್ತಾ ಹಿಂದಿನದನ್ನು ಮೆಲುಕು ಹಾಕುತ್ತಾ ಸಣ್ಣ ಪುಟ್ಟ ಬದಲಾವಣೆಗಳನ್ನು ತಮ್ಮದೇ ಆದ ದಾಟಿಯಲ್ಲಿ ವಿಮರ್ಶಿಸುತ್ತಾ ಭಕ್ತ ಭಾವುಕ ಜನ ಆಸ್ವಾದಿಸುತ್ತಿದ್ದಾರೆ.

ಪೂಜಾ ಕಾರ್ಯಕ್ರಮಗಳು ಎಂದಿನಂತೆ ನಡೆಯುತ್ತಿರುತ್ತದೆ. ಪರ್ಯಾಯ ಶ್ರೀಪಾದರಿಂದ ಪ್ರಥಮ ಬಾರಿಗೆ ಶ್ರೀಕೃಷ್ಣನ ಮಹಾಪೂಜಾ ಕಾರ್ಯಕ್ರಮ ನಡೆದು ಸುಮಾರು ಹದಿನೈದು ಸಾವಿರ ಮಂದಿಗೆ ಬಾರಿ ಭೋಜನದ ವ್ಯವಸ್ಥೆಯಾಗುತ್ತದೆ.

## ದೇವುನಿ ಕಡಪ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 25.1.2020 | ಶನಿ | ದೀಕ್ಷಾ ತಿರುಮಂಜನ | ಸೇನಾಧಿಪತಿ ಉತ್ಸವ<br>ಅಂಕುರಾರ್ಪಣ |
| 26.1.2020 | ಭಾನು | ತಿರುಚ್ಚಿ, ಧ್ವಜಾರೋಹಣ | ಚಂದ್ರಪ್ರಭವಾಹನ |
| 27.1.2020 | ಸೋಮ | ಸೂರ್ಯಪ್ರಭವಾಹನ | ದೊಡ್ಡಶೇಷವಾಹನ |
| 28.1.2020 | ಮಂಗಳ | ಚಿಕ್ಕಶೇಷವಾಹನ | ಸಿಂಹವಾಹನ |
| 29.1.2020 | ಬುಧ | ಕಲ್ಪವೃಕ್ಷವಾಹನ | ಹನುಮಂತ ವಾಹನ |
| 30.1.2020 | ಗುರು | ಮುತ್ತಿನ ಚಪ್ಪರ ವಾಹನ | ಗರುಡವಾಹನ |
| 31.1.2020 | ಶುಕ್ರ | ಕಲ್ಯಾಣೋತ್ಸವ | ಗಜವಾಹನ |
| 01.2.2020 | ಶನಿ | ರಥೋತ್ಸವ | ಧೂಳಿ ಉತ್ಸವ |
| 02.2.2020 | ಭಾನು | ಸರ್ವಭೂಪಾಲ ವಾಹನ | ಅಶ್ವವಾಹನ |
| 03.2.2020 | ಸೋಮ | ವಸಂತೋತ್ಸವ, ಚಕ್ರಸ್ನಾನ | ಧ್ವಜಾವರೋಹಣ<br>ಹಂಸವಾಹನ |
| 04.2.2020 | ಮಂಗಳ | ------------- | ಪುಷ್ಪವಾಹನ |



# ಶ್ರೀ ಗೋಪಾಲ ದಾಸರು ಮತ್ತು ಬಿಂಬೋಪಾಸನೆ

– ಡಾ॥ ಸಿ.ಜೆ. ರಾಮಚಂದ್ರ ದಾಸ್
9483384584

ಹರಿದಾಸ ಸಾಹಿತ್ಯವು ಮೂಲತಃ ತತ್ವ ಪ್ರತಿಪಾದಕ ಭಕ್ತಿ ಸಾಹಿತ್ಯ, ಹಂತ ಹಂತವಾಗಿ ಸಾಧನೆಯ ಮೆಟ್ಟಿಲುಗಳನ್ನು ಏರುತ್ತಾ, ಆತ್ಮಾನಂದದ ಮಜಲಿಗೆ ತಲುಪುವ ಸಾಧನ. ದೇಹ,ಮನಸ್ಸು ಬುದ್ಧಿ, ಚಿತ್ತ ಇವುಗಳನ್ನು ಭಕ್ತಿ ಮಾರ್ಗದಲ್ಲಿ ಮುನ್ನಡೆಸುವುದು ಪ್ರಥಮ ಸೋಪಾನ,ಹಿರಿಯರು ಮತ್ತು ಗುರುಗಳಲ್ಲಿ ಶುದ್ಧವಾದ ಭಕ್ತಿ ಮೂಡುವುದು ಎರಡನೆಯ ಸೋಪಾನ. ಈ ಗೋಪಾಲದಾಸರು, "ಎನ್ನಿಂದ ಆಗೋ ಸಾಧನವೆಲ್ಲ ನಿನ್ನದೋ ವಿಜಯರಾಯ! ಎನ್ನ ಪೊಂದಿದರೆಲ್ಲ ನಿನ್ನದಾಸರೋ ಗುರು ವಿಜಯರಾಯ॥" ಎಂಬುದಾಗಿ ತಮ್ಮ ಎಲ್ಲ ಸಾಧನೆಗೆ ಮೂಲಕಾರಣ ಕರ್ತರು, ಗುರುಗಳಾದ ವಿಜಯರಾಯರು ಎನ್ನುತ್ತಾ ತಮ್ಮ ಸ್ವಾಹಂಕಾರ ಖಂಡನ ಮಾಡಿಕೊಂಡು"ದಾಸೋಹಂ ಕೋಸಲೇಂದ್ರಸ್ಯ". ಎಂಬ ವಾಯುದೇವರ ಮತಾನುಯಾಯಿಯಾಗುವುದರಲ್ಲಿ ಸುಖ ವಿದೆ ಎಂಬುದನ್ನು ತೋರಿಸಿದ್ದಾರೆ. ಈ ಹಂತದಲ್ಲಿ ಗುರುಗಳಂತರ್ಯಾಮಿ ಪರಮಾತ್ಮನ ರೂಪದಲ್ಲಿ,ಆತ್ಮನಿವೇದನೆ ಮಾಡಿಕೊಳ್ಳುವಲ್ಲಿ ಸಫಲರಾಗಿದ್ದಾರೆ. ಇದು ಸಾಧನೆಯ ಎರಡನೆ ಸೋಪಾನ. ಸಾಧಕನು ಸನ್ಮಾರ್ಗಾವಲಂಬಿಯಾಗಬೇಕಾದರೆ ಆತ್ಮಶೋಧನೆಯ ಹಾದಿಯಲ್ಲಿ ನಡೆಯಬೇಕು. ಹೀಗೆ ನಡೆಯುವಾಗ ಸಾಧಕನ ಮನಸ್ಸಿನಲ್ಲುಂಟಾಗುವ ತುಮುಲ, ಸಂಘರ್ಷ, ಚಂಚಲತೆ , ಅಹಂಕಾರ ಇವೆಲ್ಲವನ್ನು ಗುರುಗಳ ದಯೆದಿಂದ ಮೆಟ್ಟಿನಿಂತಾಗ ಬಂದ ಫಲಿತದ ಪರಿಣಾಮವೇ ಶುದ್ಧ ಭಕ್ತಿ ಈ ಕಾರಣದಿಂದಾಗಿಯೇ ಶ್ರೀ ಗೋಪಾಲದಾಸರು "ಭಕ್ತಿಯಲಿ ಭಾಗಣ್ಣ" ಎಂದು ಪ್ರಸಿದ್ಧರಾಗಿದ್ದಾರೆ.

ಈ ಘಟ್ಟದ ನಂತರ ಬರುವುದೇ ನಿಜವಾದ ತತ್ವ ಪ್ರತಿಪಾದನೆ. ಈ ತತ್ವ ಪ್ರತಿಪಾದನೆ, ಗೋಪಾಲದಾಸರ ಜೀವನದ ಘಟ್ಟಗಳಲ್ಲಿ ಹಾಸುಹೊಕ್ಕಾಗಿದೆ. ದಾಸರಾಯರ ಆರಾಧನೆ ಎಂದರೆ, ಕೇವಲ ಮೂರು ದಿನ ಮಾತ್ರ ಅವರನ್ನು ಸ್ಮರಿಸುತ್ತಾ, ಪಂಚಭಕ್ಷ, ಪರಮಾನ್ನ ತಿಂದು ತೇಗುವ ಮಟ್ಟಕ್ಕೆ ಸೀಮಿತವಾಗಬಾರದು.

ದಾಸರು ಪರಮಾತ್ಮನನ್ನು ಕುರಿತು, "ನಾನೆಂದಿಗೂ ಮರೆಯ, ನೀ ಮಾಡಿದುಪಕಾರ " ಎಂಬ ಉಕ್ತಿಯ ಹಿಂದೆ ಬಹಳ ಗೂಢಾರ್ಥ ಅಡಗಿರುವುದನ್ನು ಕಾಣಬಹುದು. ಯಾಜ್ಞವಲ್ಕರೂ ಸಹ "ಕೃತಂ ಸ್ಮರ, ಕ್ರತೋ ಸ್ಮರ" ಎಂದಿದ್ದಾರೆ. ಅಂದರೆ ಉಪಕಾರ ಮಾಡಿದ್ದನ್ನು ಮಾಡಿದವರನ್ನು ಸ್ಮರಿಸಿಕೊಳ್ಳುವುದೇ ವಿಧಿ ಎಂದಿದ್ದಾರೆ. ಇದೇ ಭಾವವೇ ಅವರ ಸುಳಾದಿಯಲ್ಲಿ" ನಿನ್ನ ಸ್ಮೃತಿಯೇ ವಿಧಿ, ವಿಸ್ಮೃತಿಯೇ ನಿಷೇಧ" ಎಂಬುದಾಗಿ ಮೂಡಿ ಬಂದಿದೆ. ಈ ರೀತಿಯ ಸರ್ವತ್ರ ಚಿಂತನೆಯೇ ಬಿಂಬೋಪಾಸನೆಯ ಮೂಲ ಉದ್ದೇಶ್ಯ. "ನನ್ನದೆಂಬುದರೊಳು ನಿನ್ನದೇ ಹರಿಯನ್ನು ..." ಇದರಲ್ಲಿ ಕಂಡು ಬರುವ ಮುಖ್ಯ ಭಾವವೇ, " ಸಂಪೂರ್ಣಶರಣಾಗತಿ".

ಈ ಆಧಾರದ ಮೇಲೆ ದಾಸರಾಯರುಗಳ ಜೀವನವನ್ನು ಅರಿಯಬೇಕಾಗುತ್ತದೆ. ಆಗಲೇ ನಿಜವಾದ ಅರ್ಥ ದೊರೆಯುವುದು. ಇಂತಹ ಕೋನದಲ್ಲಿ ಶ್ರೀ ಗೋಪಾಲ ದಾಸರ ಜೀವನದಲ್ಲಿನ ಘಟನೆಗಳನ್ನು ಅವಲೋಕಿಸಿದಾಗ, ಅವರ ಅವತಾರದ ಉದ್ದೇಶ್ಯ ಮತ್ತು ಗುರಿ ಗೋಚರವಾಗುತ್ತದೆ.

ಮಹಾನುಭಾವರುಗಳ ಅವತಾರದ ಹಿಂದೆ ಅನೇಕ ಕಾರಣ ಮತ್ತು ಉದ್ದೇಶ್ಯಗಳು ಇರುತ್ತವೆ. ಆಕಾಶಕ್ಕೆ ಅಭಿಮಾನಿಯಾದ ಗಣೇಶನೇ ಶ್ರೀ ಗೋಪಾಲದಾಸರಾಗಿ ಅವತರಿಸಿರುವುದು ಆಪ್ತವಾಕ್ಯಗಳಿಂದ ಸ್ಪಷ್ಟ. ದಾಸರ ತಮ್ಮಂದಿರಾದ ಶ್ರೀ ತಂದೆ ಗೋಪಾಲ ವಿಠಲಾಂಕಿರಾದ ಈ ರಂಗಪ್ಪದಾಸರು ರಚಿಸಿದ ಸುಳಾದಿಯಲ್ಲಿ

ಏಕದಂತನೇ ಅಂಶದಿಂದಲಿ ಭೂ - 1
ಲೋಕದಲಿ ಅವತರಿಸಿದಾ ।
ತಾ ಕಳೇವರವನು ಧರಿಸಿ ।
ಶ್ರೀ ಕಳತ್ರನ ತುತಿಸುವ॥

ಎಂಬುದಾಗಿ ಸ್ಪಷ್ಟ ಪಡಿಸಿದ್ದಾರೆ. ಆಕಾಶದ ಗುಣ ಶಬ್ದ. ಈ ಶಬ್ದವು ಸಂಗೀತ ಶಾಸ್ತ್ರಕ್ಕೆ ಅಡಿಪಾಯ. ಪರಮಾತ್ಮನು ಸಾಮಗಾನ ಪ್ರಿಯ. ಇಲ್ಲಿ ಶಬ್ದದ ಮಾಧುರ್ಯ ಮತ್ತು ಸೌಂದರ್ಯದ ರುಚಿ ಅನುಭವಿಸಿದವರಿಗೇ

ಗೊತ್ತು. ಗೋಪಿ ಗೀತೆಯಲ್ಲಿನ ಶಬ್ದ ಮಾಧುರ್ಯ ಮತ್ತು ಅರ್ಥ ಗಾಂಭೀರ್ಯದಲ್ಲಿ, ಗೋಪಿಕಾ ಸ್ತ್ರೀಯರ ಮನದ ಇಲಾಷೆ, ಕಾತರ ಮತ್ತು ದಿಟ್ಟತನವನ್ನು ಕಾಣಬಹುದಾಗಿದೆ.

ಶ್ರೀ ಗೋಪಾಲದಾಸರು, ಸಕಲ ಶಾಸ್ತ್ರ ಗ್ರಂಥಗಳ ಸಾರ ಮತ್ತು ಕನ್ನಡದ ಮೇರು ಕೃತಿಯಾದ "ಶ್ರೀಹರಿಕಥಾಮೃತ ಸಾರದ ರಚನೆಗೆ ಕಾರಣ ಕರ್ತರು ಎಂಬುದು ಸರ್ವ ವಿದಿತ ಮತ್ತು ಸಿದ್ಧ. ತಾವೇ ಈ ಅಪೂರ್ವ ಕೃತಿಯಲ್ಲಿ ಪ್ರತಿಯೊಂದು ಪದದಲ್ಲಿಯೂ ಶಬ್ದ ರೂಪದಲ್ಲಿ ನಿಂತು, ಭಗವಂತನ ಗುಣ, ಕ್ರಿಯ ಇತ್ಯಾದಿಗಳನ್ನು ಕೊಂಡಾಡುತ್ತಿದ್ದಾರೆ. ಆ ಕಾರಣ ದಿಂದಾಗಿಯೇ ಈ ಜಗನ್ನಾಥದಾಸರು"... ಗುರುಗಳ ಕರುಣ ದಿಂದಾಪನಿತು ಪೇಳುವೆ .." ಎಂದಿದ್ದಾರೆ.

ದಾಸರ ಜೀವನದ ಒಂದೊಂದು ಘಟನೆಗಳು ಪೂರ್ವ ನಿಯೋಜಿತ. ಅವುಗಳು ಬಿಂಬೋಪಾಸನೆಯ ನಿರೂಪಣೆಯ ಪ್ರತಿರೂಪಗಳಾಗಿವೆ. ಅವುಗಳನ್ನು ಸೂಕ್ಷವಾಗಿ ಶಾಸ್ತ್ರ ರೀತ್ಯ ಅವಲೋಕಿಸಿದಾಗ ನಿಜವಾದ ಅರ್ಥದ ದರ್ಶನವಾಗುತ್ತದೆ.

ದಾಸರು, ಮೂಲರೂಪದಲ್ಲಿ ವಿಶ್ವಂಭರರೂಪಿ ಭಗ ವಂತನ ಉಪಾಸಕರಾದ್ದರಿಂದ,ಬಿಂಬೋಪಾಸನೆಯು ಅವರ ಮೂಲ ಮಂತ್ರವಾಗಿತ್ತು. ಅವರು ತಮ್ಮ ಸುಳಾದಿಗಳಲ್ಲಿ

1) ಬಿಂಬನಾಗಿ ಪ್ರತಿಬಿಂಬಗಳಂತೆ ರೂಪ।
ಎಂಭತ್ತುನಾಲ್ಕು ಲಕ್ಷ ಯೋನಿ ಜೀವರಾಶಿಗೆ
ಬಿಂಬನಾಗಿ ಶ್ರೀ ಹರಿ ಇಂಬಾಗಿ ತದಾಕಾರ।
ಬಿಂಬನಾಗಿ ಒಳಗೆ ಇದ್ದು ಅವರು ಏನು।
ಹಂಬಲಿಪರಾನಂದ ಸಂಭ್ರಮ ಒದಗಿಪ್ಪ।

2) ಇಂದ್ರಿಯಗಳಲಿ ನಿಂತು ಇಂದ್ರಿಯ ಮಾನಿಗಳಿಗೆ।
ಛಂದದಿ ಪ್ರೇರಿಸುವ ಒಂದೊಂದು ಕರ್ಮದಿ॥

3)ವಿಷಯಂಗಳ ಸೃಜಿಸಿ ವಿಷಯದೊಳಗೆ ನಿಂತು।
ವಿಷಯನಾಮಕನಾಗಿ ವಿಷಯ ಬಯಕೆಯುಳ್ಳ
ವಿಷಯ ಜೀವರಿಗೆ ವಿಷಯಕೆ ಪ್ರೇರಣೆ ಮಾಡಿ ।
ವಿಷಯ ಅನುಭೋಗದ ವಿಷಯ ಮನಕೆ ತಂದು ।
ವಿಷಯ ಉಣಿಸಿ ದೂರಾ ವಿಷಯನು ತಾನಾಗಿ ।...
ವಿಷಯ ರಹಿತ ಸರ್ವಗೋಪಾಲ ವಿಠಲ ।
ವಿಷಯ ನಾಗುವ ತನ್ನ ವಿಷಯಕರಿಸುವಗೆ ॥

ಇತ್ಯಾದಿಯಾಗಿ ಭಗವಂತನ ಕರ್ತೃತ್ವ, ವ್ಯಾಪ್ತಿತ್ವ ಮತ್ತು ನಿಯಾಮ ಕತ್ವವನ್ನು, ಸರ್ವತ್ರ, ಸರ್ವದಾ ನಿರೂಪಿಸುತ್ತಿದ್ದರು. ಇದರ ಫಲಿತವಾಗಿ, ಇವರ ಶಿಷ್ಯರಾದ ಶ್ರೀ ಜಗನ್ನಾಥದಾಸರು ರಚಿಸಿದ ಶ್ರೀ ಹರಿಕಥಾಮೃತಸಾರ ಗ್ರಂಥವು ಪೂರ್ತಿಯಾಗಿ ಬಿಂಬೋಪಾಸನೆಯನ್ನೇ ನಿರೂಪಿಸುವ ಕೃತಿಯಾಗಿದ್ದು ಇದ ರಲ್ಲಿ ನೇರವಾಗಿ ಬಿಂಬೋಪಾಸನೆ ನಿರೂಪಿಸಿದ್ದಾರೆ.

ಒಬ್ಬನಲಿ ನಿಂತಾಡುವವನು ಮ - 1
ತ್ತೊಬ್ಬನಲಿ ನೋಡುವವನು ಬೇಡುವ - 1
- ನೊಬ್ಬನಲಿ ನೀಡುವವನು ಮಾತಾಡುವವನು ಬೆರಗಾಗಿ॥
ಅಬ್ಬರದ ಹೆದ್ದೈವನಿವ ಮ - 1
ತ್ತೊಬ್ಬರನು ಲೆಕ್ಕಿಸನು ಲೋಕದೊ - 1
ಳೊಬ್ಬನೇ ತಾ ಬಾಧ್ಯ ಬಾಧಕನಾಹ ನಿರ್ಭೀತ॥

ಎಂಬುದಾಗಿ ಬಿಂಬರೂಪದಾಸನಾದ ಈ ಹಿರಿಯ ವ್ಯಾಪ್ತತ್ವ, ಕರ್ತೃತ್ವ ಮತ್ತು ನಿಯಾಮಕತ್ವವನ್ನು ನಿರೂಪಿ ಸಿದ್ದಾರೆ. ಇದು ಬೃಹದಾರಣ್ಯಕ ಉಪನಿಷದ್ಭಾಷ್ಯದ " ಸ್ವಹೃದಿಸ್ಥಿತಾಂ,ಸ್ವನಿಯಾಮಕಂ ಭಾಗವದ್ರೂಪಂ, ಇತಿಬಿಂಬಃ ಎಂಬುದರ ಯಥಾವತ್ ತರ್ಜುಮೆಯಾಗಿದೆ.

ಈ ವಿವೇಕ್ಷೆಯಲ್ಲಿ ಈ ಗೋಪಾಲದಾಸರ ಜೀವನದ ಕೆಲವು ಘಟನೆಗಳನ್ನು ಅವಲೋಕಿಸಿದಾಗ ಬಿಂಬೋಪಾಸ ನೆಯ ಮಹತ್ವ ಅರಿವಾಗುತ್ತದೆ.

ಐಜೀ ವೆಂಕಟರಾಮಾಚಾರ್ಯರು ಭಾಗಣ್ಣನ ಜೊತೆ

ಶ್ರೀ ಹರಿ ಪ್ರೀತಿಕರವಾದ ಸತ್ಕರ್ಮಾನುಷ್ಠಾನದಲ್ಲಿ

ತೊಡಗಿದ್ದರು. ಸಾಯಂಸಂಧ್ಯಾ ಸಮಯ ಮೀರಿತ್ತು. ಆಗ ಭಾಗಣ್ಣದಾಸರು ಆಚಾರ್ಯರಿಗೆ, ಅರ್ಘ್ಯ ಪ್ರದಾನ ಸಮಯ ದಲ್ಲಿ ತಮ್ಮ ತಪಶ್ಶಕ್ತಿಯ ಪ್ರಭಾವದಿಂದ ಸೂರ್ಯ ದರ್ಶನ ಮಾಡಿಸಿದ್ದು,ಆಚಾರ್ಯರ ಜೀವನದಲ್ಲಿನ ತಿರುವುಗಳಲ್ಲಿ ಒಂದಾಯಿತು. ಮುಂದೆ ಇವರೇ ಪ್ರಖ್ಯಾತರಾದ ವ್ಯಾಸ ತತ್ವಜ್ಞರೆಂಬ ಯತಿಗಳಾಗಿ,"ವಾಸುದೇವ ವಿಠಲಾಂಕಿತದಿಂದ ದಾಸಸಾಹಿತ್ಯ ಮೂಲಕ ಜಗತ್ತಿಗೆ ಪರಿಚಯವಾದವರು.

ಶ್ರೀ ವಿಜಯದಾಸರು, ಪರಮಾನುಗ್ರಹದಿಂದ ಇದೇನು ಭಾಗಣ್ಣ, ಅಂಗಡಿ ಬಿಟ್ಟುಕೊಂಡು ಕುಳಿತಿದ್ದೀ , ಸಾಕು ಮಾಡು ಈ ಲೌಕಿಕ ಎಂಬ ನುಡಿಯು ಹೇಗೆ ಪರಿಣಾಮ ಬೀರಿತೆಂದರೆ, "ಕಿಂ ಪಶುಃ ಪೂರ್ವದೇಹೇ ಎಂಬ ನುಡಿಯು ಧೋಂಡೂ ರಘುನಾಥರಾಯರನ್ನು, ಶ್ರೀಮಜ್ಜಯತೀರ್ಥರನ್ನಾಗಿಸಿದಂತೆ, ಭಾಗಣ್ಣನವರು ಶ್ರೀ ಗೋಪಾಲದಾಸರಾಗುವಂತೆ ಮಾಡಿತು. ಅಂದಿನಿಂದ ಶ್ರೀ ವಿಜಯದಾಸರಲ್ಲಿ ಅತ್ಯಂತ ಭಕ್ತಿ ಪೂರ್ವ ಕವಾಗಿ ಸೇವೆಗೈಯುತ್ತಾ "ಭಕ್ತಿಯ ಭಾಗಣ್ಣ" ಎಂದೇ ಪ್ರಸಿದ್ಧ ರಾಗಿದ್ದಾರೆ.

ದಾಸರು ಯಾವುದೇ ಕಾರ್ಯವನ್ನು ಮಾಡಿದರೂ, ತಮ್ಮ ಬಿಂಬರೂಪಿ ಗೋಪಾಲವಿಠಲ ರೂಪವನ್ನು, ತಮ್ಮ ಗುರು ಗಳಂತರ್ಯಾಮಿ ವಿಜಯವಿಠಲ ರೂಪದೊಡನೆ ಚಿಂತನೆ ಮಾಡಿ ಸಮರ್ಪಿಸಿ ಧನ್ಯರಾಗುತ್ತಿದ್ದರು. ಅದಕ್ಕೆ ಅವರು "ಎನ್ನ ಬಿಂಬನೆ ಸರ್ವಬಿಂಬನೆಂದರಿತು। ಇನ್ನು ಪ್ರತಿಬಿಂಬಗಳ ಭೇದವ ತಿಳಿದು...। ಎಂಬುದಾಗಿ ವರ್ಣಿಸಿದ್ದಾರೆ.

ವೈಷ್ಣವಾಚಾರ್ಯರೊಬ್ಬರಿಗೆ ಒದಗಿದ ಉದರ ಶೂಲೆ ಯನ್ನು ಪರಿಹರಿಸಲು, ಧನ್ವಂತರಿ ರೂಪಿ ಭಗವಂತನನ್ನು ಪ್ರಾರ್ಥಿಸಿ, ಉತ್ತುತ್ತಿ,ಕಲ್ಲುಸಕ್ಕರೆಯನ್ನು ಅಭಿಮಂತ್ರಿಸಿ ಕೊಟ್ಟು ಕಳೆದರು.

ಗದ್ವಾಲ ಸಂಸ್ಥಾನ ಮತ್ತು ಸುತ್ತ ಮುತ್ತಲ ಗ್ರಾಮಗಳಲ್ಲಿ ಕ್ಷಾಮ ತಲೆದೋರಿದಾಗ,ಚಿಪುಣನಾದ ಶ್ರೀಮಂತ ಗೌಡ ನೊಬ್ಬನ ಮನೆ ಪರಿವರ್ತನೆ ಮಾಡಿ, ಲೋಕ ಕಲ್ಯಾಣ ಮೆರೆ ದದ್ದು ಇತಿಹಾಸ. ಕುಹಾಕಿಗಳು ಕುತಂತ್ರದಿಂದ, ಪಲ್ಯದಲ್ಲಿ ಹೆಚ್ಚಿನ ಉಪ್ಪನ್ನು ಬೆರೆಸಿದ್ದು, ದಾಸರು ಅಪರೋಕ್ಷ ಜ್ಞಾನದಿಂದ ತಿಳಿದು, ಲವಣಾಭಿಮಾನಿಯಾದ ನಿರುಋತಿ ಅಂತರ್ಯಾಮಿ ಜರ್ನಾರ್ಧನ ರೂಪಿ ಭಗವಂತನನ್ನು ಉಪಾಸಿಸಿ,ಹೆಚ್ಚಿನ ಉಪ್ಪನ್ನು ನೀರಿಗೆ ವರ್ಗಾಯಿಸಿದ್ದು ಈ ಉಪಾಸನೆಯ ಫಲ. ಭೋಜ್ಯ ಪದಾರ್ಥಗಳನ್ನು ಶ್ರೀಹರಿಗೆ ಹೇಗೆ ನಿವೇದಿಸಬೇಕು ಎಂಬುದನ್ನು ದಾಸರು ಸ್ವತಃ ಮಾಡಿ ತೋರಿಸಿದ್ದಾರೆ. ಓರ್ವ ಸಾಧ್ವೀಮಣಿಯು, ಆಗ ತಾನೆ ಕರೆದ ಹಸುವಿನ ಬಿಸಿಯಾದ ನೊರೆಹಾಲನ್ನು ತಂದು, ಭಗವಂತನಿಗೆ ನಿವೇದಿಸುವಂತೆ

ಪ್ರಾರ್ಥಿಸಿ ದಾಸರಿಗೆ ಕೊಟ್ಟಳು. ಆಗ ತಕ್ಷಣ ಅವರು ಧ್ಯಾನಾಸಕ್ತರಾಗಿ, ಚಿಂತಿಸಿ, ಆ ಹಾಲನ್ನು ಮರಳಿನಲ್ಲಿ ಸುರಿದರು. ಆದರೇ ಅದೇ ಹಾಲು ಶ್ರೀ ವೇಂಕಟೇಶನ ವಿಗ್ರಹದ ಬಾಯಿಯಿಂದ ಜಿನುಗುತ್ತಿರುವುದನ್ನು ಕಂಡರು. ಇದು ಹೇಗೆ ಎಂದು ಆ ಸಾಧ್ವೀಮಣಿಯು ಕೇಳಿದಾಗ ದಾಸರು ನನ್ನ ಬಿಂಬರೂಪನಾದ ಗೋಪಾಲವಿಠಲನೇ ಹಾಲಿನಲ್ಲಿ ತತ್ವದ್ರೂಪ ಪತ್ ಶಬ್ದ ವಾಚ್ಯನಾಗಿದ್ದು, ಅದರಲ್ಲಿರುವ ರುಚಿ, ಸವಿ ಎಲ್ಲವೂ ಶ್ರೀಹರಿಯ ಗುಣಗಳು ನನ್ನಲ್ಲಿ ನಿಂತು ಸಮರ್ಪಣೆಯನ್ನು ತಾನೇ ಮಾಡಿದ ಶ್ರೀ ವೆಂಕಟೇಶನ ರೂಪದಿಂದ ತಾನೇ, ಆ ಹಾಲನ್ನು ಸ್ವೀಕರಿಸಿದ. ಇದೇ ಬಿಂಬೋಪಾಸನೆ, ತಾಯಿ ಎಂದು ವಿವರಿಸಿದರು. ಇಂತಹ ಬಿಂಬೋಪಾಸನೆಯ ಕ್ರಮ, ಸವಿ, ಕ್ರಮ ಮತ್ತು ಫಲಿತಗಳನ್ನು ತಮ್ಮ ಸುಳಾದಿ, ಕೃತಿಗಳಲ್ಲಿ ವಿಶೇಷವಾಗಿ ವರ್ಣಿಸಿದ್ದಾರೆ.

ದಾಸರ ಜೀವನದಲ್ಲಿ ನಡೆದ ಎಲ್ಲ ಘಟನೆಗಳನ್ನು ಬಿಂಬೋಪಾಸನೆಯ ವಿವೇಕ್ಷೆಯಿಂದ ಅವಲೋಕಿಸಬಹುದಾಗಿದೆ.

ಚಿತ್ರಭಾನು ಸಂವತ್ಸರಕ್ಕೆದಾಸರಿಗೆ ನಲವತ್ತನೇ ವರ್ಷ ನಡೆಯುತ್ತಿತ್ತು. ಕೊನೆಯ ಬಾರಿ ತಿರುಪತಿಯಲ್ಲಿ ಬ್ರಹ್ಮೋತ್ಸವಕ್ಕೆ ಹೋಗಿ ಸ್ವಾಮಿಯ ದರ್ಶನ ಮಾಡಿ

ಪೋಗುವೆನು, ಬರಲಾರೆ ಮರಳಿ ಇಲ್ಲಿ ।
ನಾಗಗಿರಿವಾಸ ಈಶ ಶ್ರೀ ಶಾ॥

ಎಂಬುದಾಗಿ ಬಿಗಿದ ಕಂಠದಿಂದ ಶ್ರೀ ಹರಿಯನ್ನು ಸ್ತುತಿಸುತ್ತಿರುವಾಗಲೇ ಅವರ ತಂಬೂರಿಯ ತಂತಿ ಕಡಿಯಿತು. ಅದೇ ವರ್ಷ ಮಾರ್ಗಶಿರ ಶುದ್ಧ ತ್ರಯೋದಶಿ, ಹನುಮತತ್ವಕ್ಕೆ ದಾಸರಿಗೆ ಅಂಕಿತವಾಗಿ 16 ವರ್ಷಗಳು ಪೂರ್ಣವಾಗಿತ್ತು. ಅದೇ ವರ್ಷ ಕಾರ್ತೀಕ ಶುದ್ಧ ದಶಮಿ ಗುರುಗಳಾದ ಶ್ರೀವಿಜಯದಾಸರ ಆರಾಧನೆಯನ್ನು ಬಹು ವಿಜೃಂಭಣೆಯಿಂದ ಮಾಡಿದರು.

ದಾಸರು ಉತ್ತನೂರಿನ ವೆಂಕಟೇಶನ ಬಳಿ ನಿಂತು "ಎರಡು ವಿಂಶತಿ ವತ್ಸರವಾಯಿತು ಈ ಹರಣ ಧರಿಸಿ ಕರುಣಾಕರನೇ" ಎಂಬುದಾಗಿ ಕೊನೆಯ ಸುಳಾದಿ ರಚಿಸಿದರು.

ಚಿತ್ರಭಾನು ಸಂವತ್ಸರದ, ಪುಷ್ಯಬಹುಳ, ಅಷ್ಟಮಿಯಂದು ಹರಿಭಜನೆ ಮಾಡುತ್ತಾ ಯೋಗಾಸನದಲ್ಲಿ ಕುಳಿತು, ಶ್ವಾಸ ಬಂಧಿಸಿ,ನೆತ್ತಿಯಲ್ಲಿನ ಬ್ರಹ್ಮರಂಧ್ರ ಸ್ಫೋಟವಾಗಿ, ಹರಿಪುರಕ್ಕೆ ತೆರಳಿದರು. ಅವರು ನೀಡಿದ ಉಪಾಸನಾ ವಿಧಿಗಳ ಮಾರ್ಗ ದರ್ಶನ ಇಂದಿಗೂ ಜೀವಂತವಾಗಿದೆ.

"ಶ್ರೀ ಕೃಷ್ಣಾರ್ಪಣಮಸ್ತು" 

**ಎಡದಿಂದ ಬಲಕ್ಕೆ**

1. ವೆಂಕಟಾಚಲನಿಲಯಂ
2. ರಂಗಯ್ಯ
3. ಈ ಪರಿಯ
4. ಗುಮ್ಮನ
5. ಭಾಗ್ಯದಲಕ್ಷ್ಮಿ

**ಬಲದಿಂದ ಎಡಕ್ಕೆ**

6. ಜಗದೋದ್ಧಾರನ
7. ರಾಮನಾಮ ಪಾಯಸಕ್ಕೆ
8. ತಾರಕ್ಕ

**ಮೇಲಿಂದ ಕೆಳಕ್ಕೆ**

9. ಕಲ್ಲುಸಕ್ಕರೆ ಕೊಳ್ಳಿರೋ
10. ನಾಲಿಗೆ
11. ಮಾಡು

**ಕೆಳಗಿನಿಂದ ಮೇಲಕ್ಕೆ**

12. ಯಾರೇ ರಂಗನ
13. ಯಾರಿಗೆ
14. ರಾಗಿ ತಂದೀರಾ

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 ವೆಂ | 9 ಕ | ಟಾ | ಚ | ಲ | ನಿ | ಲ | ಯಂ |
| 2 | | ಲ್ಲು | ನ | ರ | ದ್ಧಾ | ದೋ | ಗ | 6 ಜ |
| 3 | ಕ್ಕೆ | ಸ | ಯ | ಪಾ | ಮ | 10 ನಾ | ಮ | 7 ರಾ |
| 4 | ನ | ಕ್ಕ | ರ | 8 ತಾ | | ಅ | 11 ಮಾ | ದೀ |
| 5 | ಗ | ರೆ | 2 ರಂ | ಗ | ಯ್ಯ | ಗೆ | ಡು | ತಂ |
| 6 | ರಂ | ಕೊ | | 3 ಈ | ಪ | ರಿ | ಯ | ಗಿ |
| 7 | ರೇ | ಳ್ಳಿ | 4 ಗು | ಮ್ಮ | ನ | 13 ಯಾ | | 14 ರಾ |
| 8 | 12 ಯಾ | ರೋ | 5 ಭಾ | ಗ್ಯ | ದ | ಲ | ಕ್ಷ್ಮಿ | |

ಧಾರಾವಾಹಿಕ

# ದಿವ್ಯ ಕ್ಷೇತ್ರ ತಿರುಮಲ

## ಶ್ರೀನಿವಾಸನ ಕಲ್ಯಾಣ

ಈ ಕಥೆಯನ್ನೆಲ್ಲಾ ಕೇಳಿಸಿಕೊಂಡ ಬಕುಳಾದೇವಿ ಆನಂದದಿಂದ ಆಕಾಶರಾಜನ ಬಳಿಗೆ ಹೋಗಿ ಪದ್ಮಾವತೀ ಶ್ರೀನಿವಾಸರ ಕಲ್ಯಾಣಕ್ಕೆ ಮಧ್ಯಸ್ಥಿಕೆಯನ್ನು ವಹಿಸಿದಳು.

ವೈಶಾಖ ಮಾಸ ಶುಕ್ಲ ಪಕ್ಷ ದಶಮಿ ಶುಕ್ರವಾರ, ಉತ್ತರಾಫಲ್ಗುಣೀ ನಕ್ಷತ್ರದಿಂದ ಕೂಡಿದ ಶುಭಲಗ್ನದಲ್ಲಿ ಶ್ರೀ ಪದ್ಮಾವತೀ ಶ್ರೀನಿವಾಸರ ವಿವಾಹವನ್ನು ಆಕಾಶರಾಜನ ರಾಜಧಾನಿಯಾದ ನಾರಾಯಣವರದಲ್ಲಿ ಅಂಗರಂಗ ವೈಭವದಿಂದ ನಡೆಯಿತು. ಆ ವಿವಾಹ ಮಹೋತ್ಸವಕ್ಕೆ ಬ್ರಹ್ಮೇಂದ್ರಾದಿ ದೇವತೆಗಳು, ಸಮಸ್ತಲೋಕಗಳ ವಾಸಿಗಳು ಬಂದರು. ಅಷ್ಟ ದಿಕ್ಪಾಲಕರು ಹಾಜರಾದರು. ಸೂರ್ಯನನ್ನು ಕರೆದು ಕೊಲ್ಲಾಪುರದಿಂದ ಶ್ರೀಮಹಾಲಕ್ಷ್ಮಿಯನ್ನು ಕರೆಸಿದರು.

ಪಾರ್ವತೀ, ಸರಸ್ವತಿ, ಲಕ್ಷ್ಮೀದೇವಿಯರು ವೇಂಕಟೇಶ್ವರನನ್ನು ಮದುಮಗನನ್ನಾಗಿ ಅಲಂಕರಿಸಿ ವೈಭವದಿಂದ ಮದುವೆ ಮಾಡಿಸಿದರು. ಅಂಗರಂಗ ವೈಭವದಿಂದ ಮದುವೆಯ ಸಮಾರಂಭಗಳು ಸಂಪೂರ್ಣವಾದ ನಂತರ ಯಾರು ಹೇಳಿದರೂ ಕೇಳದೇ ಮಹಾಲಕ್ಷ್ಮಿ ಪುನಃ ಕೊಲ್ಲಾಪುರವನ್ನು ಸೇರಿದಳು.

ನೂತನ ದಂಪತಿಗಳಾದ ಪದ್ಮಾವತಿ ಶ್ರೀನಿವಾಸರು ವೇಂಕಟಾಚಲಕ್ಷೇತ್ರಕ್ಕೆ ಹೊರಟು ಆರು ತಿಂಗಳ ಕಾಲ ಸುವರ್ಣಮುಖೀ ತೀರದಲ್ಲಿ ಅಗಸ್ತ್ಯಾಶ್ರಮದಲ್ಲಿ ವಿಶ್ರಾಂತಿ ತೆಗೆದುಕೊಂಡರು. ನಂತರ ವರಾಹಕ್ಷೇತ್ರವನ್ನು ತಲುಪಿದ ಇಬ್ಬರೂ ತೊಂಡಮಾನ ರಾಜನು ವಾಸ್ತುರೀತ್ಯಾ ನಿರ್ಮಿಸಿದ, ಬಂಗಾರದ ಶಿಖರದಿಂದ ಕೂಡಿದ ಆನಂದನಿಲಯವೆಂಬ ಭವನದಲ್ಲಿ ಪದ್ಮಾವತೀ ಶ್ರೀನಿವಾಸರು ಗೃಹ ಪ್ರವೇಶ ಮಾಡಿದರು. ತೊಂಡಮಾನ ರಾಜನು ಶ್ರೀನಿವಾಸನಿಗೆ ಪರಮಭಕ್ತನೇ ಅಲ್ಲದೇ ಆಕಾಶರಾಜನ ತಮ್ಮನೂ ಹೌದು.

ಆದಿವರಾಹ ಕ್ಷೇತ್ರವನ್ನು ತಲುಪಿದ ಶ್ರೀನಿವಾಸನಿಗೆ ಲಕ್ಷ್ಮೀದೇವಿ ಇಲ್ಲವೆಂಬ ಚಿಂತೆಯು ಉಂ



ಟಾಗಿ ಆಕೆಯನ್ನು ಪುನಃ ಕರೆತರುವುದಕ್ಕೆ ಕೊಲ್ಲಾಪುರಕ್ಕೆ ಹೋದ. ಅಲ್ಲಿ ಆಕೆಯ ಅನುಗ್ರಹಕ್ಕಾಗಿ ಹತ್ತು ವರ್ಷಗಳ ಕಾಲ ಘೋರವಾದ ತಪಸ್ಸು ಮಾಡಿದ. ಆದರೆ ಜಗನ್ಮಾತೆಯ ದರ್ಶನವಾಗಲಿಲ್ಲ. ಅಷ್ಟರಲ್ಲಿ ಆಕಾಶವಾಣಿ ಈ ರೀತಿ ನುಡಿಯಿತು.

"ಶ್ರೀನಿವಾಸಾ! ಈ ಅವತಾರದಲ್ಲಿ ಶ್ರೀ ಮಹಾಲಕ್ಷ್ಮಿ ನಿನ್ನನ್ನು ಸೇರುವುದಿಲ್ಲ. ನೀನು ವೇಂಕಟಾಚಲಕ್ಕೆ ಹಿಂದಿರುಗು, ಆ ಕ್ಷೇತ್ರಕ್ಕೆ ದಕ್ಷಿಣದಲ್ಲಿ ಸುವರ್ಣಮುಖೀ ನದೀ ತೀರದಲ್ಲಿ ಇರುವ ಶುಕ ಮಹರ್ಷಿಗಳ ಆಶ್ರಮಕ್ಕೆ ಹೋಗು, ಅಲ್ಲಿ ಒಂದು ಪದ್ಮಸರೋವರವನ್ನು ಏರ್ಪಡಿಸಿ, ಲಕ್ಷ್ಮೀದೇವಿಗಾಗಿ ತಪಸ್ಸನ್ನು ಶ್ರದ್ಧೆಯಿಂದ ಆಚರಿಸು. ಆ ಪದ್ಮಸರೋವರದಲ್ಲಿ ಸಾಕ್ಷಾತ್ತು ಲಕ್ಷ್ಮಿಯು ಅವತರಿಸುತ್ತಾಳೆ.

ಆಕಾಶವಾಣಿಯು ತಿಳಿಸಿದ ಪ್ರಕಾರ ಶ್ರೀನಿವಾಸನು ಶುಕ ಮಹರ್ಷಿಗಳ ಆಶ್ರಮದ ತೀರದಲ್ಲಿ ಒಂದು ಪದ್ಮಸರೋವರವನ್ನು ನಿರ್ಮಿಸಿದ. ಅದರಲ್ಲಿ ಪದ್ಮಗಳನ್ನು ವಿಕಸಿಸುವಂತೆ ಮಾಡಿ ಆ ಪದ್ಮಗಳು ಸದಾ ಅರಳಿರುವಂತೆ ನೋಡಿಕೊಳ್ಳುವುದಕ್ಕೆ ಸೂರ್ಯದೇವನನ್ನು ಪ್ರತಿಷ್ಠಾಪಿಸಿದ. ಹನ್ನೆರಡು ವರ್ಷಗಳ ಕಾಲ ಮಹಾಲಕ್ಷ್ಮಿಗಾಗಿ ಘೋರವಾದ ತಪಸ್ಸು ಮಾಡಿದ.

ಒಂದು ಕಾರ್ತೀಕ ಮಾಸದ ಶುಕ್ಲ ಪಕ್ಷದಲ್ಲಿ ಪಂಚಮೀ ಶುಕ್ರವಾರ ಉತ್ತರಾಷಾಢ ನಕ್ಷತ್ರದ ಅಭಿಜಿತ್ ಲಗ್ನದಲ್ಲಿ ಸಾಕ್ಷಾತ್ತು ಶ್ರೀ ಮಹಾಲಕ್ಷ್ಮಿ ಹದಿನಾರರ ಯುವತಿಯಾಗಿ



ಮೂಲ: ಜೆ. ಬಾಲಸುಬ್ರಹ್ಮಣ್ಯಂ
ಅನುವಾದ : ಶ್ರೀಮತಿ ಬಿ.ಪದ್ಮಜ
9010379476

ಸರೋವರದಲ್ಲಿ ಬಂಗಾರು ಪದ್ಮದಲ್ಲಿ ಅವತರಿಸಿದಳು. ಪದ್ಮದಲ್ಲಿ ಉದ್ಭವಿಸಿದಳಾದ್ದರಿಂದ "ಪದ್ಮಾವತಿ" ಎಂದೂ, ಪದ್ಮದ ಮೇಲೆ ಪ್ರಕಾಶಿಸುವ ವನಿತೆಯಾದ್ದರಿಂದ "ಅಲಮೇಲುಮಂಗ" ಎಂದೂ ಭಕ್ತರಿಂದ ಕರೆಯಲ್ಪಡುತ್ತಿದ್ದಾಳೆ. ಆ ಜಗನ್ಮಾತೆಯನ್ನು ಬ್ರಹ್ಮಾದಿ ದೇವತೆಗಳು ಅನೇಕ ವಿಧದಲ್ಲಿ ಕೊಂಡಾಡಿದರು.

ಶ್ರೀನಿವಾಸನು ಪದ್ಮಾವತಿಯ ಕೊರಳಿನಲ್ಲಿ ಕಮಲಗಳ ಹಾರವನ್ನು ಹಾಕಿ, ತನ್ನ ವಕ್ಷಃಸ್ಥಳದಲ್ಲಿ ವ್ಯೂಹಾಲಕ್ಷ್ಮಿಯನ್ನಾಗಿ ಮಾಡಿಕೊಂಡು ತಿರುಮಲೆಗೆ ಹೊರಟ. ಅಷ್ಟರಲ್ಲಿ ದೇವತೆಗಳೆಲ್ಲಾ ಈ ಪದ್ಮಸರೋವರದ ತೀರದಲ್ಲಿ ನಿಂತು ಅರ್ಚಾಮೂರ್ತಿಯಾಗಿ ಪೂಜೆಗಳನ್ನು ಸ್ವೀಕರಿಸು ಎಂದು ಆ ಮಹಾಲಕ್ಷ್ಮಿಯನ್ನು ಪ್ರಾರ್ಥಿಸಿದರು. ಮಹಾರಾಜ್ಞಿಯಾಗಿ, ಸ್ವತಂತ್ರ ಲಕ್ಷ್ಮಿಯಾಗಿ, ವೀರಲಕ್ಷ್ಮಿಯಾಗಿ, ಪದ್ಮಾವತಿ ಎಂಬ ಹೆಸರಿನಿಂದ ಪೂಜೆಗಳನ್ನು ಸ್ವೀಕರಿಸುತ್ತಿದ್ದಾಳೆ ಆ ಶ್ರೀ ಲಕ್ಷ್ಮೀದೇವಿ.

ತಿರುಮಲೆಗೆ ಸೇರಿದ ಶ್ರೀನಿವಾಸನು ಆಕಾಶರಾಜನ ಮಗಳಾದ ಪದ್ಮಾವತಿಯನ್ನೂ ತನ್ನ ಹೃದಯದಲ್ಲಿ ವಕ್ಷಃಸ್ಥಳ ವ್ಯೂಹಾಲಕ್ಷ್ಮಿಯೊಂದಿಗೆ ಒಗ್ಗೂಡಿಸಿಕೊಂಡ.

ದೇವತೆಗಳ ಕೋರಿಕೆಯ ಮೇರೆಗೆ ಕಲಿಯುಗಾಂತ್ಯದವರೆಗೂ ತಿರುಮಲೆ ಕ್ಷೇತ್ರದಲ್ಲಿ ನೆಲೆಸಿರುತ್ತೇನೆಂದು ಅಭಯ ನೀಡಿದ. ವಕ್ಷಃಸ್ಥಳ ವ್ಯೂಹಲಕ್ಷ್ಮಿಯೊಂದಿಗೆ ನೆಲೆಸಿರುವ ಶ್ರೀನಿವಾಸನಿಗೆ ಬ್ರಹ್ಮದೇವನು ಬ್ರಹ್ಮೋತ್ಸವಗಳನ್ನು ನಿರ್ವಹಿಸಿದ.

**ಶಿಲೆಯಾದ ಶ್ರೀನಿವಾಸ:**

ಒಂದು ದಿನ ಭಕ್ತನಾದ ತೊಂಡಮಾನ ರಾಜ ರಹಸ್ಯಮಾರ್ಗದ ಮೂಲಕ ಆನಂದನಿಲಯದೊಳಗೆ ಪ್ರವೇಶಿಸಿ ಶ್ರೀವೇಂಕಟೇಶ್ವರನನ್ನು ಕಾಪಾಡಬೇಕೆಂದು ಅಂಗಲಾಚಿದ. ಕಾರಣವೇನೆಂದು ಶ್ರೀನಿವಾಸ ಕೇಳಿದ.

"ಎರಡು ವರ್ಷಗಳ ಹಿಂದೆ ಒಬ್ಬ ಬ್ರಾಹ್ಮಣನು ತನ್ನ ಹೆಂಡತಿ ಮಕ್ಕಳನ್ನು ತನ್ನ ರಕ್ಷಣೆಯಲ್ಲಿ ಬಿಟ್ಟು ಕಾಶಿಗೆ ಹೋದ. ಆದರೆ ತನ್ನ ಮರೆವಿನಿಂದಾಗಿ ತಪ್ಪು ನಡೆದು ಅವರಿರುವುದನ್ನು ಮರೆತಿತದ್ದರಿಂದ ಅವರೆಲ್ಲಾ ಮರಣಿಸಿದರೆಂದೂ, ಈಗ ಆ ಬ್ರಾಹ್ಮಣನು ಹಿಂದಿರುಗಿ ಬಂದಿದ್ದಾನೆ. ತನ್ನ ಹೆಂಡತಿ ಮಕ್ಕಳ ಬಗೆಗೆ ವಿಚಾರಿಸುತ್ತಿದ್ದಾನೆ. ನಾನು ಅವರೆಲ್ಲಾ ಶ್ರೀನಿವಾಸನ ದರ್ಶನಕ್ಕೆ ಹೋಗಿದ್ದಾರೆಂದು ಸುಳ್ಳು ಹೇಳಿದೆನೆಂದು ದೀನನಾಗಿ ಹೇಳಿಕೊಂಡ.

ರಾಜಾ! ನಿನಗೆ ಬ್ರಹ್ಮ ಹತ್ಯೆಯ ಪಾಪ ಸುತ್ತಿಕೊಂಡಿದೆ. ಸರಿ ನಿನಗಾಗಿ ಆ ಪಾಪವನ್ನು ನಾನೇ ಹೊರುತ್ತೇನೆ. ಆದರೆ ಇನ್ನು ಮುಂದೆ ನಾನು ಯಾರಿಗೂ ಪ್ರತ್ಯಕ್ಷನಾಗಲಾರೆ. ಯಾರೊಂದಿಗೂ ನೇರವಾಗಿ ಮಾತನಾಡಲಾರೆ" ಎನ್ನುತ್ತಾ ಆ ಸ್ವಾಮಿಯು ಆ ಬ್ರಾಹ್ಮಣನ ಕುಟುಂಬದವರನ್ನು ಜೀವಂತಗೊಳಿಸಿದ.

ಅಂದಿನಿಂದ "ವಕ್ಷಃಸ್ಥಳ ವ್ಯೂಹಾಲಕ್ಷ್ಮಿಯೊಂದಿಗೆ" ಶ್ರೀನಿವಾಸನು "ಕಲೌ ವೇಂಕಟನಾಯಕಃ" ಎಂಬ ಪ್ರಸಿದ್ಧಿಯಿಂದ ಈ ಕಲಿಯುಗದಲ್ಲಿ ಕರೆದರೆ ಕೂಡಲೇ ಓಗೊಡುವ ಪ್ರತ್ಯಕ್ಷ ದೈವವಾಗಿ "ಬೇಡಿದ ವರಗಳನ್ನು ನೀಡುವ ದೈವವೆಂಬ"ಸಾರ್ಥಕ ನಾಮಧೇಯನಾಗಿ ವರಗಳನ್ನು ನೀಡುತ್ತಾ ಸಾಲಿಗ್ರಾಮ ಶಿಲಾ ಮೂರ್ತಿಯಾಗಿ ಉದ್ಭವಿಸಿ ದರ್ಶನ ನೀಡುತ್ತಾ ನಿಂತಿದ್ದಾನೆ.

ಅದೇ ಭೂಲೋಕ ವೈಕುಂಠವೆಂದು ರಾರಾಜಿಸುತ್ತಿರುವ ತಿರುಮಲೆಯ ಬೆಟ್ಟ.

ಅದನ್ನೇ ಅನ್ನಮಾಚಾರ್ಯರು ಈ ರೀತಿ ವರ್ಣಿಸಿದ್ದಾರೆ.

ಕಟ್ಟೆದುರ ವೈಕುಂಠಮು ಕಾಣಾಚಯನಕೊಂಡ!!

ತೆಟ್ಟೆಲಾಯಿ ಮಹಿಮಲೇ ತಿರುಮಲ ಕೊಂಡ!!!

ಶ್ರೀ ವೇಂಕಟೇಶ್ವರನು ಅರ್ಚಾಮೂರ್ತಿಯಾಗಿ ನೆಲಸಿದಂದಿನಿಂದಲೂ ಈ ಕ್ಷೇತ್ರದಲ್ಲಿ ಎಷ್ಟೋ ಉತ್ಸವಗಳು, ಮತ್ತೆಷ್ಟೋ ಸೇವೆಗಳು ನಡೆಯುತ್ತಿವೆ. ಅವುಗಳ ಬಗೆಗೆ ತಿಳಿದುಕೊಳ್ಳೋಣ.

**ತಿರುಮಲೇಶನ ಉತ್ಸವಗಳು:**

ಸಪ್ತಗಿರೀಶನಿಗೆ ವರ್ಷಪೂರ್ತಿ ಪ್ರತೀದಿನವೂ ಯಾವುದೋ ಒಂದು ಉತ್ಸವವು ನಡೆಯುತ್ತಲೇ ಇರುತ್ತದೆ. ಯಾವುದೋ ಒಂದು ಮೆರವಣಿಗೆಯು ನಡೆಯುತ್ತಲೇ ಇರುತ್ತದೆ. ಆದ್ದರಿಂದಲೇ ತಿರುಮಲೆಯಲ್ಲಿ ಪ್ರತೀದಿನವೂ ಹಬ್ಬವೇ! ಪ್ರತೀ ಹೊತ್ತೂ ಪರಮಾನ್ನವೇ! ಭಕ್ಷ್ಯ ಭೋಜ್ಯಗಳೇ!

ಭಕ್ತ ಜನರ ಸಂಭ್ರಮಗಳ ನಡುವೆ ವರ್ಷವೆಲ್ಲಾ ಸಾಗುವ ಉತ್ಸವಗಳನ್ನು 1. ನಿತ್ಯೋತ್ಸವಗಳು 2.ವಾರೋತ್ಸವಗಳು 3.ಮಾಸೋತ್ಸವಗಳು 4. ವಾರ್ಷಿಕೋತ್ಸವಗಳು (ಸಂವತ್ಸರೋತ್ಸವಗಳು) ಎಂದು ನಾಲ್ಕು ವಿಧಗಳಿವೆ. ಅವುಗಳ ಬಗೆಗೆ ತಿಳಿದುಕೊಳ್ಳೋಣ.

(ಸಶೇಷ)



# ನಾಯಕತ್ವದ ಲಕ್ಷಣಗಳು

**ಮೂಲ – ವೈಷ್ಣವಾಂಘ್ರಿ ಸೇವಕ್‌ದಾಸ್**
**ಅನುವಾದ – ಡಿ.ಎಸ್. ಭೂಮಿಕ**

ಪ್ರತಿಯೊಬ್ಬ ವ್ಯಕ್ತಿಯು ಯಾವುದೋ ಒಂದು ಆಯಾಮದಲ್ಲಿ ನಾಯಕನಾಗಿರುತ್ತಾನೆ. ಒಬ್ಬನು ತನ್ನ ಮನೆಯ ಪರಿಧಿಯಲ್ಲಿ ನಾಯಕನಾಗಿದ್ದರೆ,ಇನ್ನೊಬ್ಬನು ತನ್ನ ವಂಶ ಪರಿಧಿಗೆ ನಾಯಕನಾಗಿರಬಹುದು, ಮತ್ತೊಬ್ಬನು ತನ್ನ ಸಂಘ ಪರಿಧಿಯಲ್ಲಿ ನಾಯಕನಾದರೆ, ಮಗದೊಬ್ಬನು ತನ್ನ ಜಿಲ್ಲೆಗೆ ನಾಯಕನಾಗಿರಬಹುದು. ಮಗದೊಬ್ಬನು ತನ್ನ ರಾಷ್ಟ್ರಕ್ಕೆ ನಾಯಕನಾಗಿದ್ದರೆ ಮತ್ತಾವನೋ ತನ್ನ ರಾಜ್ಯ ಅಥವಾ ಪ್ರಪಂಚಕ್ಕೇ ನಾಯಕನಿರಬಹುದು. ಆದರೆ ನಾಯಕರಾದ ಅವರೆಲ್ಲರಲ್ಲಿ ಹಲವು ಸೌಮ್ಯವಾದ ಲಕ್ಷಣಗಳಿರುತ್ತವೆ ಮತ್ತು ಉನ್ನತವಾದ ಗುಣಗಳು ತಪ್ಪದೇ ನೆಲೆಗೊಂಡಿರುತ್ತವೆ.ಯಾರೂ ಹುಟ್ಟಿನಿಂದಲೇ ನಾಯಕರಾಗಲಾರರು, ಆದರೆ ಅವರಲ್ಲಿ ನಾಯಕನಾಗಲು ಅವಶ್ಯಕವಾದ ಗುಣಗಳು ಖಂಡಿತ ಇರುತ್ತವೆ. ನಾಯಕನಾಗ ಬಯಸುವ ಪ್ರತಿಯೊಬ್ಬ ವ್ಯಕ್ತಿಯಲ್ಲಿ ನಾಯಕತ್ವವನ್ನು ವಹಿಸಿಕೊಳ್ಳಬೇಕೆಂಬ ತೀವ್ರವಾದ ಬಯಕೆಯಿರುತ್ತದೆ. ತೀವ್ರವಾದ ಈ ಲಕ್ಷ್ಯದೊಂದಿಗೆ ಆತನು ಮುಂದಕ್ಕೆ ಸಾಗುತ್ತಾ ಉತ್ತಮವಾದ ಮಾರ್ಗದರ್ಶನದಲ್ಲಿ ತನ್ನ ಲಕ್ಷ್ಯವನ್ನು ಸಾಧಿಸುತ್ತಾನೆ.

ಭಗವದ್ಗೀತೆಯಲ್ಲಿ ನಾಯಕತ್ವದ ಲಕ್ಷಣಗಳ ಕುರಿತು ಹನ್ನೆರಡನೇ ಅಧ್ಯಾಯದಲ್ಲಿ ಹೇಳಲಾಗಿದೆ. ಅದರಲ್ಲಿ ಹಲವನ್ನು ಇಲ್ಲಿ ಚರ್ಚಿಸೋಣ.ನಾಯಕತ್ವ ಲಕ್ಷಣಗಳಲ್ಲಿ ಮೊಟ್ಟಮೊದಲನೇಯದು ದ್ವೇಷರಹಿತವಾಗಿರುವುದು. ನಾಯಕನಾದವನು ಹತ್ತು ಮಂದಿಯೊಂದಿಗೆ ಬೆರೆತು ಕೆಲಸ ಮಾಡಬೇಕಾಗುತ್ತದೆ. ಯಾರೊಂದಿಗೂ ದ್ವೇಷವಿಲ್ಲದಿದ್ದಲ್ಲಿ ಮಾತ್ರವೇ ಆತನು ಅವರೊಂದಿಗೆ ಕಲಿತು ಕಾರ್ಯವೆಸಗಬಲ್ಲನು. ಅಷ್ಟೇ ಅಲ್ಲ, ತನ್ನನ್ನು ದ್ವೇಷಿಸುವವರ ಮೇಲೆ ಸಹಾ ಅನುರಾಗ, ಗೌರವಾದರಗಳನ್ನು ತೋರ್ಪಡುವ ಸಂದರ್ಭವಿರುತ್ತದೆ. ಎರಡನೇಯ ಲಕ್ಷಣವೆಂದರೆ ಸ್ನೇಹಾ ಭಾವ - ಮೈತ್ರಿ. ದ್ವೇಷವಿಲ್ಲದಿರುವುದು ಮೊದಲ ಶುಭ - ಲಕ್ಷಣವಾದರೆ ಎರಡನೇಯದು ಎಲ್ಲರೊಂದಿಗೆ ಬೆರತು ಕೆಲಸ ಮಾಡುವುದು ಎರಡನೇ ನಾಯಕತ್ವದ ಲಕ್ಷಣ.ನಂತರ ಬರುವ ಸದ್ಗುಣವು ಕರುಣೆ ತುಂಬಿರುವುದು.ಈ ರೀತಿಯಾಗಿ ನಾಯಕನಲ್ಲಿರುವ ಮೂರು ಲಕ್ಷಣಗಳು ಇವಾದರೆ ಇವುಗಳನ್ನು ಮೂರು ಬಗೆಯ ಜನರೊಂದಿಗೆ ಬಳಿಸುವ ಅವಶ್ಯಕತೆಯಿರುತ್ತದೆ. ಶತ್ರುವಾದರೂ ನಾಯಕನಾದವನು ದ್ವೇಷಿಸಲಾರನು. ಶತ್ರುವಿನಿಂದಲೂ ಕಲಿತುಕೊಳ್ಳ ಬಹುದಾದ ಯಾವುದಾದರೊಂದು ಗುಣವಿರುತ್ತದೆಂಬುದು ನಾಯಕನ ಪ್ರಥಮ ಸೂತ್ರ.ಆತನು ತನ್ನ ಸರಿಕರೊಂದಿಗೂ ಪ್ರೀತಿಯಿಂದಿರುತ್ತಾನೆ. ನಾಲ್ಕು ಜನರ ನೆರವಿಲ್ಲದೇ ಯಾರೂ ಮುಂದೆ ಸಾಗಲಾರರು. ಇನ್ನು ಕರುಣೆಯೆಂಬ ಸದ್ಗುಣ ಹಲವರಲ್ಲಿ ಮಾತ್ರ ಕಂಡು ಬರುತ್ತದೆ. ಅಲ್ಪರನ್ನು ನಾಯಕನಾದವನೆಂದೂ ಅಪಹಾಸ್ಯ ಮಾಡುವುದಿಲ್ಲ. ಮೇಲಾಗಿ ಅವರಿಗೆ ಬೇಕಾದ ಸಮಸ್ತ ಅವಸರಗಳನ್ನು ತೀರಿಸುತ್ತಾನೆ. ಅವರನ್ನು ಉಚ್ಚಸ್ಥಿತಿಗೆ ತರುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಾನೆ. ಛತ್ರಪತಿ ಶಿವಾಜಿ ಮಹಾರಾಜ 18 ದಂಡಯಾತ್ರೆಗಳನ್ನು ಮೊದಲುಗೊಂಡು 50 ನೇ ವಯಸ್ಸು ತಲುಪುವವರೆಗೆ ಸುಮಾರು 400 ಕ್ಕು ಹೆಚ್ಚು ಕೋಟೆಗಳನ್ನು ತನ್ನ ವಶದಲ್ಲಿ ತೆಗೆದುಕೊಂಡಿದ್ದಾನೆ. ಅದರಲ್ಲಿ ಅಧಿಕವಾಗಿ ತಾನೇ ಗೆದ್ದವು. ಉಳಿದವುಗಳು ತಾನು ಸ್ವತಃ ನಿರ್ಮಿಸಿದವು. ಆದರೆ ಇಲ್ಲಿ ಶಿವಾಜಿಯು ತನ್ನ ಅನುಯಾಯಿಗಳ ಜೊತೆ ಸೇರಿ, ಧೈರ್ಯವಂತರಿಗೆ ಮತ್ತಷ್ಟು ಪ್ರೋತ್ಸಾಹ ನೀಡಿ ಹೊಸ ಹೊಸ ಕೋಟೆಗಳನ್ನು ಗೆಲ್ಲಲು ಅವರನ್ನು ಸ್ವತಂತ್ರರಾಗಿ ಹೋರಾಡಲು ಕಳುಹಿಸುತ್ತಿದ್ದನು. ಕೋಟೆಗಳನ್ನು ಗೆಲ್ಲುತ್ತಲೇ ಅವರನ್ನು ಆ ಕೋಟೆಗಳಿಗೆ ಅಧಿಪತಿಯನ್ನಾಗಿ ಮಾಡುತ್ತಿದ್ದನು. ಇದೇ ನಾಯಕತ್ವದ ಲಕ್ಷಣವು. ಇದು ಅಲ್ಪರಿಗೂ ಅಗಾಧ ಕರುಣೆ ಬೀರುವ ಸನ್ನಿವೇಶದಲ್ಲಿ ಬರುತ್ತದೆ.

"ದ್ವೇಷವಿಲ್ಲದವನು, ಸರ್ವಜೀವಿಗಳಲ್ಲಿ ಸ್ನೇಹವಿರುವವನು ಕರುಣೆಯಿರುವವನು, ಸ್ವಾರ್ಥವಿಲ್ಲದವನು, ಅಹಂಕಾರವಿಲ್ಲದವನು ಸುಖ - ದುಃಖಗಳನ್ನು ಸಮದೃಷ್ಟಿಯಿಂದ ನೋಡುವವನು, ನನಗೆ ಅತ್ಯಂತ ಪ್ರಿಯನಾದವನು" ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಭಗವಂತನು ತಿಳಿಸಿದ್ದಾನೆ. ಮೇಲೆ ಹೇಳಿದ ಮೂರು ಗುಣಗಳೊಂದಿಗೆ ಸ್ವಾರ್ಥವಿಲ್ಲದಿರುವುದು, ಅಹಂಕಾರವಿಲ್ಲದಿರುವುದು ಸಹಾ ನಾಯಕತ್ವದ ಲಕ್ಷಣಗಳೆಂದೇ ಹೇಳಲಾಗಿದೆ. ನಿಜ ಹೇಳಬೇಕೆಂದರೆ ಈ ಗುಣಗಳಿಲ್ಲದಿದ್ದರೆ ಇತರರೊಂದಿಗೆ ಮೈತ್ರಿಯಿಂದಿರಲು ಸಾಧ್ಯವೇ ಆಗದು. ಸ್ವಾರ್ಥವಿರುವವನು ಅಂದರೆ ಲೋಭಿಯಾದ ವನು ಸರಿಯಾದ ಧರ್ಮನಿರ್ಣಯವನ್ನು ತೆಗೆದುಕೊಳ್ಳಲಾರ. ಆತನ ದೃಷ್ಟಿ ಸಂಕುಚಿತವಾಗಿರುತ್ತದೆ. ಇನ್ನು ಅಹಂಕಾರವಿರುವುದರಿಂದ ಎಲ್ಲರೂ ಮಾರು ದೂರವಿರುತ್ತಾರೆ. ಸುಖ - ದುಃಖಗಳಲ್ಲಿ ಸಮ ಭಾವದಿಂದಿರುವುದು ನಾಯಕನಾದವನ ಮತ್ತೊಂದು ಮಹದ್ಗುಣ. ಯಾವುದೇ ಕೆಲಸದಲ್ಲಾದರೂ ಜಯಾಪಜಯಗಳು ಎದುರಾಗುತ್ತಿರುತ್ತವೆ. ಆಗ ಅವುಗಳನ್ನು ಎದುರಿಸಲು ನಾಯಕನಾದವನೇ ಮುಂಬರಬೇಕಾಗುತ್ತದೆ. ನಿಜವಾದ ನಾಯಕನು ತನ್ನೆಲ್ಲಾ ಸಾಧನೆಗಳಿಗೆ ತನ್ನ ಅನುಯಾಯಿಗಳನ್ನೇ ಜವಾಬ್ದಾರರನ್ನಾಗಿ ಹೇಳಿಕೊಳ್ಳುತ್ತಾನೆ. ಆದರೆ ಯಾವಾಗಲಾದರೂ ಅಪಜಯವುಂಟಾದರೆ ಅದು ತನ್ನ ಹೊಣೆಯೆಂದು ಪೂರ್ಣ ಮನಸ್ಸಿನಿಂದ ಸ್ವೀಕರಿಸುತ್ತಾನೆ. ಆದ್ದರಿಂದ ಯುವ ಜನರು ಮೊದಲಿನಿಂದಲೇ ನಾಯ ಕತ್ವದ ಲಕ್ಷಣಗಳನ್ನು ರೂಢಿಸಿಕೊಂಡೇ ಪ್ರಯತ್ನಗಳನ್ನು ಕೈಗೊಳ್ಳಬೇಕು. ಸಾಧನೆ ಯಿಂದ ಯಾರಾದರೂ ಈ ಜಗತ್ತಿನಲ್ಲಿ ಯಾವುದಾದರೂ ಕೈಗೂಡುತ್ತದಾದ್ದರಿಂದ ಮುಂದಿನಿಂದಲೂ ನಾಯಕತ್ವದ ಗುರಿಯನ್ನಿಟ್ಟುಕೊಂಡೇ ನಾಯಕತ್ವದ ಲಕ್ಷಣಗಳಿಗಾಗಿ ಪ್ರಯತ್ನಗಳನ್ನು ಮಾಡಿದಲ್ಲಿ ಅದು ಕೈಗೂಡುತ್ತದೆ.

ನಾಯಕನಿಗಿರುವ ಈ ಹಲವು ಮುಖ್ಯ ಲಕ್ಷಣಗಳನ್ನು ಗಮನಿಸಿದರೆ ಅವುಗಳೆಲ್ಲವೂ ಮಾನಸಿಕವಾಗಿರುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ.ಅಂದರೆ ನಾಯಕರಾದವರು ಮಾಡಬೇಕಾದ ಮೊಟ್ಟಮೊದಲ ಕೆಲಸವೆಂದರೆ ಮನೋನಿಗ್ರಹ. ಯಾವ ನಾಯಕನು ಮನೋನಿಗ್ರಹವನ್ನು ಸಾಧಿಸುತ್ತಾನೋ ಅವನು ಲೋಕಪ್ರಸಿದ್ಧನಾಗುತ್ತಾನೆ. ಆತನು ಎಲ್ಲರ ಮನಸ್ಸನ್ನು ಗೆಲ್ಲುತ್ತಾನೆ. ವಾಸ್ತವದಲ್ಲಿ ಪ್ರಪಂಚವು ತನ್ನನ್ನು ಸರಿದಾರಿಯಲ್ಲಿ ನಡೆಸಬಲ್ಲ ನಾಯಕನಿಗಾಗಿ ಎದುರು ನೋಡುತ್ತಿರುತ್ತದೆ. ಆದ್ದರಿಂದ ನೀವು ನಾಯಕರಾಗಲು ನಿಶ್ಚಯಿಸಿಕೊಂಡು ಅದಕ್ಕೆ ತಕ್ಕುದಾದ ಧೈರ್ಯ ಸಾಹಸಗಳನ್ನು ಪ್ರದರ್ಶಿ ದಲ್ಲಿ ಲೋಕವು ನಿಮ್ಮ ನಾಯಕತ್ವವನ್ನು ಸ್ವೀಕರಿಸಿ ಜಯಕಾರ ಹಾಕುತ್ತದೆ.ಅದಕ್ಕೆ ಬೇಕಾಗುವ ಎಲ್ಲಾ ಸಿದ್ಧತೆಗಳನ್ನು ಭಗವದ್ಗೀತೆ ಸ್ಪಷ್ಟವಾಗಿ ತಿಳಿಗೊಡುತ್ತದೆ.



# ವ್ಯರ್ಥ ಪದಾರ್ಥಗಳು – ಆಹಾರ – ಔಷಧಿ ಗುಣಗಳು ನಿಧಿಗಳು



**ಮೂಲ – ಸಿ. ಮಧುಸೂದನ ಶರ್ಮ**

**ಅನುವಾದ – ಶ್ರೀಮತಿ**

"ಅಮಂತ್ರಮಕ್ಷರಂ ನಾಸ್ತಿ ನಾಸ್ತಿ ಮೂಲ ಮನೌಷಧಂ।
ಅಯೋಗ್ಯಃ ಪುರುಷೋನಾಸ್ತಿ ಯೋಜಕಸ್ತತ್ರ ದುರ್ಭರಃ"॥

ಎನ್ನುತ್ತದೆ ನಮ್ಮ ವೇದ ವಾಙ್ಮಯ. ಅಕ್ಷರವಿರದ ಮಂತ್ರ, ಔಷಧವಾಗದ ಮೂಲಿಕೆ, ಯಾವುದೇ ನಿಪುಣತೆ, ಯೋಗ್ಯತೆಯಿಂದ ಪುರುಷ ಈ ಲೋಕದಲ್ಲೇ ಇರಲಾರರೆಂದು ಅದರ ಸ್ಥೂಲಾರ್ಥಗ್ಯೆಯಬಹುದು.

ಪ್ರಪಂಚದಲ್ಲಿ, ಪ್ರಕೃತಿಯಲ್ಲಿ ನಮಗೆ ಲಭಿಸುವ ವ್ಯರ್ಥ ಪದಾರ್ಥಗಳೆಂದು ಭಾವಿಸಲ್ಪಡುವ ಪದಾರ್ಥಗಳಲ್ಲಿಯೂ ಸಹಾ ಸೃಷ್ಟಿ ಕರ್ತನು ಅಪಾರವಾದ, ಅತ್ಯಂತ ಶಕ್ತಿಯುತವಾದ ಔಷಧೀಯ ಅಂಶಗಳನ್ನು,ರಾಸಾಯನಿಕ ಅಂಶಗಳನ್ನು ನಿಕ್ಷೇಪಿಸಿ ನಮ್ಮವರ ಆರೋಗ್ಯ ಪರಿವೇಕ್ಷಣೆಯನ್ನು ಪ್ರಕೃತಿಯ ಮೂಲಕ ಪ್ರಸಾದಿಸಿದ್ದಾನೆ.

ಅವುಗಳ ಮೇಲೆ ವಿನಾಕಾರಣ ಲೋಪ, ದೋಷ, ನಿರ್ಲಕ್ಷ್ಯಗಳ ಕಾರಣ ಗಳಿಂದಾಗಿ ಅವುಗಳನ್ನು ಸಕ್ರಮವಾಗಿ ಸದ್ವಿನಿಯೋಗ ಮಾಡಿಕೊಳ್ಳದೇ ಪ್ರಕೃತಿ ಕಲ್ಪಿಸುವ ಸಮಾಜ ಪೂರಕ ಆರೋಗ್ಯ ಭಾಗ್ಯವನ್ನು ಹೊಂದುವ ಅವಕಾಶವನ್ನು ಕಳೆದು ಕೊಳ್ಳುತ್ತಿದ್ದೇವೆ.

ಈ ನಿಟ್ಟಿನಲ್ಲಿ ವ್ಯರ್ಥ ಪದಾರ್ಥಗಳೆಂದು ನಾವು ಭಾವಿಸುವ ಇಂತಹ ಪ್ರಕೃತಿದತ್ತ ಔಷಧಿಗಳನ್ನು ಸದ್ವಿನಿಯೋಗ ಮಾಡಿಕೊಂಡಲ್ಲಿ ದೃಢವಾದ ಆರೋಗ್ಯವನ್ನು ಹೊಂದಿ ದವರಾಗುತ್ತೇವೆ.

ವ್ಯರ್ಥ ಪದಾರ್ಥಗಳು ನಮ್ಮ ಆರೋಗ್ಯ ಪರಿರಕ್ಷಣೆಗೆ ಹೇಗೆ ಬಳಸಲಾಗುತ್ತ ದೆಂದು ಪ್ರಸ್ತುತ ತಿಳಿಯೋಣ.

**ಬಾಳೆ : ಚರ್ಮರೋಗಕ್ಕೆ :** ಚಿಕ್ಕ ಚಿಕ್ಕ ತುಂಡುಗಳಾಗಿ ಕತ್ತರಿಸಿದ ಬಾಳೆ ಸಿಪ್ಪೆಯನ್ನು ಸಮಾನ ಗಾತ್ರದಷ್ಟು ಕೊಬ್ಬರಿ ಎಣ್ಣೆಯಲ್ಲಿ ಹಾಕಿ ಸಣ್ಣದಾದ ಉರಿಯಲ್ಲಿ ಸಿಪ್ಪೆ ಕಪ್ಪಾಗುವವರೆಗೆ ಎಣ್ಣೆಯನ್ನು ಮರ ಳಿಸಿ,ಕೆಳಗಿಳಿಸಿ, ಬಿಸಿಯಾರಿದ ನಂತರ ಶೋಧಿಸಿ ಸಂಗ್ರ ಹಿಸಿಟ್ಟುಕೊಂಡು ಬಾವಿನ ಮೇಲೆ ಲೇಪಿಸುತ್ತಿದ್ದರೆ ನವೆಯಂತಹ ಚರ್ಮವ್ಯಾಧಿಗಳು, ಕಾಲಿನ ಬಿರುಕುಗಳು ತಗ್ಗಿ ಹೋಗುತ್ತದೆ.

**ಮೊಡವೆ, ದದ್ದುಗಳಿಗೆ :** ಬಾಳೆ ಸಿಪ್ಪೆಯ ಒಳಭಾಗದಲ್ಲಿರುವ ಬಿಳಿ ಪದಾರ್ಥವನ್ನು ಆಯಾ ಜಾಗಕ್ಕೆ ತಿಕ್ಕುತ್ತಿದ್ದರೆ ಮೊಡವೆ-ದದ್ದುಗಳಂತಹ ರೋಗಗಳೊಂದೇ ಅಲ್ಲದೇ ಬಾಯಿ ಹುಣ್ಣುಗಳು ಸಹಾ ಕಡಿಮೆಯಾಗುತ್ತವೆ.

**ಬಿಳಿಮಚ್ಚೆಗಳು :** ಒಣಗಿದ ಬಾಳೆ ಎಲೆಗಳನ್ನು ಸುಟ್ಟು ಬೂದಿ ಮಾಡಿ ಬಿಸಿಯಾರಿದ ನಂತರ ಜರಡಿ ಹಿಡಿದು ಪುಡಿಯನ್ನು ಸ್ವಚ್ಛವಾದ ಅರಿ ಶಿನ ಪುಡಿಯೊಂದಿಗೆ ಸಮಾನವಾಗಿ ಕಲಿಸಿಟ್ಟುಕೊಂಡು ದಿನವೂ ಎರಡು ಬಾರಿ,ಬಾರಿಯೊಂದಕ್ಕೆ ಒಂದು ಗ್ರಾಂ ಔಷಧಿಯನ್ನು ತಕ್ಕಷ್ಟು ಜೇನಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಬಿಳಿಮಚ್ಚೆಗಳು ಅಥವಾ ಬಿಳಿಕಲೆಗಳು ಅಥವಾ ಬಿಳಿಗುಳ್ಳೆಗಳೆಂದು ಕರೆಯಲ್ಪಡುವ. ವ್ಯಾಧಿಗಳು ಶೀಘ್ರವಾಗಿ ತೊಲಗುತ್ತವೆ.

**ಕೆಮ್ಮಿಗೆ:** ಒಂದು ಚಿಟಿಕೆ ಬಾಳೆಯೆಲೆ ಬೂದಿಯನ್ನು ತಕ್ಕಷ್ಟು ಜೇನಿನೊಂದಿಗೆ ಕಲಿಸಿ ವಯಸ್ಸಾ ದವರಿಗೆ ಕೊಡುತ್ತಿದ್ದರೆ ವಿವಿಧ ಬಗೆಯ ಕೆಮ್ಮು ಅ ಶೀಘ್ರವಾಗಿ ಶಮನಗೊಳ್ಳುತ್ತದೆ.

**ಕಿತ್ತಳೆ ಹಣ್ಣಿನ ಸಿಪ್ಪೆ:ತುಟಿಯ ಕಪ್ಪು ಕಡಿಮೆಯಾಗಲು:** ಒಣಗಿದ ಕಿತ್ತಳೆ ಸಿಪ್ಪೆಯನ್ನು ನುಣ್ಣಗೆ ಪುಡಿ ಮಾಡಿ, ಜರಡಿ ಹಿಡಿದಿಟ್ಟುಕೊಂಡು ದಿನಕ್ಕೊಂದು ಬಾರಿ ತಕ್ಕಷ್ಟು ಪುಡಿಯನ್ನು ಜೇನಿನಲ್ಲಿ ಕಲಿಸಿ ಮೇಲೆ ಲೇಪಿಸುವುದರಿಂದ ಶೀಘ್ರವಾಗಿ ಸಮಸ್ಯೆ ಬಗೆ ಹರಿಯುತ್ತದೆ.

**ಮಾವಿನ ಗೇರುಬೀಜ:ಕೂದಲು ಸೀಳುವಿಕೆಗೆ:** ವಾರದಲ್ಲಿ ಎರಡು ಬಾರಿ ಬೇಕಾದಷ್ಟು ಮಾವಿನ ಗೇರು ಬೀಜದ ಪುಡಿಯನ್ನು ತಕ್ಕಷ್ಟು ನೀರಿನಲ್ಲಿ ಕಲಿಸಿ ಪೇಸ್ಟಿನಂತೆ ಮಾಡಿ ತಲೆಗೆಲ್ಲಾ ಹಚ್ಚಿ ಅರ್ಧಗಂಟೆಯ ನಂತರ ಆಂಟೋಳಕಾಯಿ ಅಥವಾ ಶೀಗೆಕಾಯಿಂದ ತಲೆಸ್ನಾನ ಮಾಡುತ್ತಿದ್ದರೆ ಬಹಳಾ ಉತ್ತಮವಾದ ಫಲಿತಾಂಶ ದೊರಕುತ್ತದೆ.

**ಫೈಲ್ಸ್:**ಮಾವಿನ ಗೊಟ್ಟವನ್ನು ತುಂಡುಗಳಾಗಿ ಮಾಡಿ ಒಣಗಿಸಿ ಮಾಡಿದ ಚೂರ್ಣವನ್ನು ದಿನವೂ ಬೆಳಗ್ಗೆ, ಸಂಜೆ ಬಾರಿಗೆ 1-2 ಗ್ರಾಂ ನಂತೆ 100 ಮಿ.ಲೀ ತಾಜಾ ಮಜ್ಜಿಗೆಯಲ್ಲಿ ಕಲಿಸಿ ಸೇವಿಸುತ್ತಿದ್ದರೆ ರಕ್ತ ಸ್ರಾವದಿಂದ ಕೂಡಿದ ಮೂಲ ವ್ಯಾಧಿ ತಗ್ಗುತ್ತದೆ.

**ಕೆಮ್ಮು, ಆಯಾಸ, ಹೊಟ್ಟೆಯುರಿ:**ಮಾವಿನ ಗೊಟ್ಟದ ಪುಡಿ 1-2 ಗ್ರಾಂನಂತೆ ಎರಡು ಬಾರಿ ತಕ್ಕಷ್ಟು ಕಲ್ಲುಸಕ್ಕರೆಯೊಂದಿಗೆ ಸೇವಿಸುತ್ತಿದ್ದರೆ ಹೊಟ್ಟೆಯುರಿ, ತಕ್ಕಷ್ಟು ಜೇನಿನಲ್ಲಿ ಕಲಿಸಿ ಸೇವಿಸಿದಲ್ಲಿ ವಿವಿಧ ರೀತಿಯ ಕೆಮ್ಮು ತಗ್ಗುತ್ತವೆ. ಅಷ್ಟೇ ಅಲ್ಲದೇ, ಈ ಔಷಧಿಯ ಸೇವನೆಯಿಂದಾಗಿ ಸ್ತ್ರೀಯರಲ್ಲಿ ಬಿಳಿಸೆರಗು ಸಹ ಕಡಿಮೆಯಾಗುತ್ತದೆ.

**ತೆಂಗಿನ ಪೀಚು ಮತ್ತು ಚಿಪ್ಪು:ದೀರ್ಘಕಾಲಿಕ ಸೋಂಕು ಶಮನಕ್ಕೆ:**ದಿನವೂ ಎರಡೂ ಹೊತ್ತು ಬಾರಿಯೊಂದಕ್ಕೆ 200 ಮಿ.ಲೀ ನೀರಿನಲ್ಲಿ ತೆಂಗಿನ ಕಾಯನ್ನು ಸುಲಿವಾಗ ಉದುರುವ ಹೊಟ್ಟನ್ನು 15 ಗ್ರಾಂನಂತೆ 100 ಮಿ.ಲೀ ನೀರು ಉಳಿವಂತೆ ಮರಳಿಸಿ, ಬಿಸಿಯಾರಿದ ಬಳಿಕ ಶೋಧಿಸಿ, ಸೇವಿಸಬೇಕು.

**ಹೊಟ್ಟೆಯುರಿಗೆ:** ತೆಂಗಿನ ಪೀಚನ್ನು ಸುಟ್ಟು ಬೂದಿ ಮಾಡಿ, ಬಿಸಿಯಾರಿದ ನಂತರ. ಜರಡಿ ಹಿಡಿದು ಇಟ್ಟುಕೊಂಡು ಬೆಳಗ್ಗೆ ಸಂಜೆ ಬಾರಿಯೊಂದಕ್ಕೆ ಒಂದು ಗ್ರಾಂ ಬೂದಿಯನ್ನು 200 ಮಿ.ಲೀ. ತಾಜಾ ಮಜ್ಜಿಗೆಯಲ್ಲಿ ಕಲಿಸಿ ಸೇವಿಸಬೇಕು.

**ಎಗ್ಜಿಮಾ, ನವೆಯಂತಹ ವ್ಯಾಧಿಗಳಿಗೆ:** ತೆಂಗಿನ ಚಿಪ್ಪುಗಳನ್ನು ಚೆನ್ನಾಗಿ ಒಣಗಿಸಿ ತುಂಡುಗಳಾಗಿ ಮಾಡಿ, ಸುಟ್ಟು ಬೂದಿ ಮಾಡಿ, ಬಿಸಿಯಾರಿದ ಬಳಿಕ. ಜರಡಿ ಹಿಡಿದು ಶೇಖರಿಸಿಟ್ಟುಕೊಂಡು ದಿನವೂ ಒಂದು ಬಾರಿ ಬೂದಿಯನ್ನು ತಕ್ಕಷ್ಟು ಕೊಬ್ಬರಿ ಎಣ್ಣೆ ಯನ್ನು ಸೇರಿಸಿ, ಕಲಿಸಿ ಪೇಸ್ಟಿನಂತೆ ಮಾಡಿ ಲೇಪಿಸುತ್ತಿದ್ದರೆ ಎಗ್ಜಿಮಾ, ನವೆಗಳಂತಹ ಚರ್ಮವ್ಯಾಧಿಗಳು ಶೀಘ್ರವಾಗಿ ತಗ್ಗುತ್ತವೆ.

# ಅಜಾಮಿಳೋಪಾಖ್ಯಾನ

ಡಾ|| ವೈಷ್ಣವಾಂಘ್ರಿಸೇವಕ್‌ದಾಸ್
- 9821914642
ಅನುವಾದ : ಡಿ.ಎಸ್.ಬದ್ರಿನಾಥ್




ಅಮೋಘವಾದ ಭಗವನ್ನಾಮವನ್ನೂ, ಅದರ ಮಹಿಮೆಯನ್ನು ಹೃದಯಕ್ಕೆ ತಟ್ಟುವಂತೆ ವಿವರಿಸುವುದೇ ಅಜಾಮಿಳೋಪಾಖ್ಯಾನ. ಈ ಅಜಾಮಿಳ ಚರಿತ್ರೆಯು ಶ್ರೀಮದ್ಭಾಗವತದ ಷಷ್ಠಮಸ್ಕಂದದಲ್ಲಿ ಬರುತ್ತದೆ. ಘೋರವಾದ ನರಕ ಲೋಕದ ವರ್ಣನೆಯನ್ನು ಕೇಳುತ್ತಲೇ ಪರೀಕ್ಷಿತ ಮಹಾರಾಜ ಉದ್ವಿಗ್ನಕ್ಕೊಳಗಾಗಿದ್ದಾನೆ. ಆದರೆ ಅಂತಹ ನರಕಯಾತನೆಗಳನ್ನು ಅನುಭವಿಸದಿರುವ ಪರಿಸ್ಥಿತಿಗಳುಂಟಾಗಲು ಏನು ಮಾಡಬೇಕೆಂದು ಆತನು ಶ್ರೀ ಶುಕಮಹರ್ಷಿಯನ್ನು ಪ್ರಶ್ನಿಸಿದ್ದಾನೆ. ಅದಕ್ಕೆ ಪ್ರತ್ಯುತ್ತರವಾಗಿ ಶ್ರೀಶುಕಮಹರ್ಷಿ ಅಜಾಮಿಳನ ವೃಂತ್ತಾಂತವನ್ನು ತಿಳಿಸಿ ಕೊಟ್ಟಿದ್ದಾನೆ.

ಕನ್ಯಾಕುಬ್ಜದಲ್ಲಿ ಅಜಾಮಿಳನೆಂಬ ಬ್ರಹ್ಮಾಣ ನಿರುತ್ತಿದ್ದನು. ಆತನು ವೇದಾಧ್ಯಯನ ಪರನೂ, ಸುಶೀಲನೂ, ಸದಾಚಾರಿಯೂ ಸದ್ಗುಣ ಸಂಪನ್ನನೂ ಆಗಿದ್ದನೂ, ಮಿತ ಭಾಷಿಯೂ, ಅಸೂಯಾ ಪರಹಿತನಾದ ಆತನು ಒಮ್ಮೆ ಫಲಪುಷ್ಪ-ಸಮಿತ್ತುಗಳೆಂಬ ಎರಡು ಬಗೆಯ ಪರಿಕರಗಳನ್ನು ತರಲು ತಂದೆಯು ಆಣತಿಯ ಮೇರೆಗೆ ಅರಣ್ಯಕ್ಕೆ ಹೋಗಿದ್ದಾನೆ. ಆದರೆ ಮನೆಗೆ ಹಿಂತಿರುಗಿ ಬರುತ್ತಿರುವ ವೇಳೆಯಲ್ಲಿ ನಿರ್ಲಬ್ಧಳಾಗಿರುವ ಒಬ್ಬ ವೇಶ್ಯೆಯನ್ನು ಆಲಂಗಿಸಿರುವ ಒಬ್ಬ ಶೂದ್ರನನ್ನೂ ನೋಡಿದ್ದಾನೆ. ಈ ಸನ್ನಿವೇಶವನ್ನು ನೋಡುತ್ತಲೇ ಅಜಾಮಿಳನ ಮನಸ್ಸಿನಲ್ಲಿ ಪತನವು ಆರಂಭಗೊಂಡಿದೆ. ಆತನಲ್ಲಿ ಕಾಮವಾಂಛೆಯ ಕಾರಂಜಿ ನೆಗೆನೆಗೆದು ಪುಟದೆದ್ದಿದೆ. ಆ ವೇಳೆಯಿಂದ ಆತನ ಮನಸ್ಸಿ ನಲ್ಲಿ ಆ ವೇಶ್ಯೆಯ ಚಿತ್ರವೇ ನೆಲೆಗೊಂಡಿದೆ. ಸ್ವಲ್ಪ ಕಾಲಾಂತರದಲ್ಲಿ ಆತನು ವೇಶ್ಯೆಯನ್ನು ತನ್ನ ಮನೆಗೆ ಕರೆ ತಂದಿದ್ದಾನೆ. ಅಜಾಮಿಳನು ಅಶ್ಲೀಲ ದೃಶ್ಯವನ್ನು ಒಮ್ಮೆ ಕಣ್ಣಲ್ಲಿ ನೋಡುತ್ತಲೇ ತನ್ನ ಸಮಸ್ತ ಸದ್ಗುಣ ಸ್ಥಿತಿಯಿಂದ ಕೆಳಗೆ ಜಾರಿ ಬಿದ್ದಿದ್ದಾನೆ.

ಅಜಾಮಿಳನ ಮನೆ ಸೇರಿದ ವೇಶ್ಯೆಯು ಆತನೆಡೆಗೆ ವಿಶೇಷವಾದ ಅನುರಾಗವನ್ನು ತೋರಿಸಲು ಮೊದಲುಗೊಂಡಿದ್ದಾಳೆ. ತನ್ನೆಡೆಗೆ ಆಕೆಯು ತೋರುವ ಪ್ರೇಮಕ್ಕೆ, ಪ್ರಸನ್ನತೆಗೆ ದಿಗ್ಭ್ರೂಢನಾದ ಅಜಾಮಿಳನು ಪಿತೃದತ್ತವಾದ ಆಸ್ತಿಯನ್ನು ವ್ಯಯಿಸುತ್ತಾ ಆಕೆಗೆ ಅನೇಕ ತರಹದ ಕಾಣಿಕೆಗಳನ್ನು ತಂದು ಕೊಡಲಾರಂಭಿಸಿದ್ದಾನೆ. ಆಕೆಯ ಸಾಂಗತ್ಯದಲ್ಲಿ ವರಿಸಿದ ಮಡದಿಯನ್ನೇ ಬಿಟ್ಟು ಬಿಟ್ಟಿದ್ದಾನೆ. ವೇಶ್ಯೆಗೆ ತನ್ನ ಬ್ರಾಹ್ಮಣತ್ವದ ಪರಿಪಾಲನೆ ಇಷ್ಟವಿರದೇ ಇದ್ದುದರಿಂದ ತನ್ನ ಕುಲಪಾಲನೆಯನ್ನು ಸಹಾ ತ್ಯಜಿಸಿದ್ದಾನೆ. ಬುದ್ಧಿ ಸಂಪೂರ್ಣ ನಾಶಗೊಂಡು ಆತನು ನ್ಯಾಯನ್ಯಾಯ ಪರಿವೀಕ್ಷಣೆಯಿಲ್ಲದೇ ಧನವನ್ನು ವ್ಯಯ ಮಾಡುತ್ತಾ ವೇಶ್ಯೆಯನ್ನು ಪೋಷಿಸಲನುವಾಗಿದ್ದಾನೆ. ಅಷ್ಟೇ ಕಾಲಾಂತರದಲ್ಲಿ ಆಕೆಯ ಮೂಲಕ ಅನೇಕ ಸಂತಾನವನ್ನು ಪಡೆದಿದ್ದಾನೆ. ಈ ರೀತಿಯಾಗಿ ಆ ಬ್ರಾಹ್ಮಣನು ಶಾಸ್ತ್ರ ವಿಧಿಯನ್ನು ಉಲ್ಲಂಘಿಸಿ, ಅಮಿತ ವ್ಯಯವನ್ನು ಮಾಡುತ್ತಾ ವೇಶ್ಯೆಯ ಕೈಯಡುಗೆಯನ್ನು ತಿನ್ನುತ್ತಾ ತನ್ನ ಆಯುಷ್ಯವನ್ನು ಕಳೆಯುವವನಾಗಿದ್ದಾನೆ. ಬ್ರಾಹ್ಮಣಿಕೆಯನ್ನು ಬಿಟ್ಟು ಆತನು ಶೂದ್ರ ಕರ್ಮವನ್ನು ಸ್ವೀಕರಿಸಿದ್ದಾನೆ. ಈ ರೀತಿಯಾಗಿ ಆತನು ಎಂಭತ್ತು ವರ್ಷ ಕಳೆದು ಬಿಟ್ಟಿದ್ದಾನೆ. ವೇಶ್ಯೆಯಿಂದಾಗಿ ಆತನಿಗೆ ಹತ್ತು ಮಂದಿ ಪುತ್ರರು ಜನಿಸಿದ್ದಾರೆ. ಅವರಲ್ಲಿ ಚಿಕ್ಕವನಿಗೆ ನಾರಾಯಣನೆಂಬ ಹೆಸರಿಡಲಾಗಿದೆ. ವೃದ್ಧಾಪ್ಯದಲ್ಲಿ ಜನಿಸಿದ ಆ ಪುತ್ರನಿಂದಾಗಿ ಅಜಾಮಿಳನಿಗೆ ಆತನ ಮೇಲೆ ಅಜಾಮಿತಾನುರಾಗ ಉಂಟಾಯ್ತು. ಆ ಬಾಲಕನ ಲಾಲನೆ-ಪಾಲನೆ ಮಾಡುತ್ತಾ ಆತನ ಬಾಲ ಚೇಷ್ಟೆಗಳನ್ನು ಕಂಡು ಅಜಾಮಿಳನು ಆನಂದಿಸುವವನಾಗಿದ್ದಾನೆ. ತಾನು ಊಟ ಮಾಡುವಾಗ ಆ ಬಾಲಕನನ್ನು ಊಟಕ್ಕೆ ಕರೆಯುವನು ತಾನು ಕುಡಿಯುವಾಗ ಅವನನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಳ್ಳುವನು. ಈ ವಿಧವಾಗಿ ಪ್ರತಿದಿನ, ಪ್ರತಿಕ್ಷಣ ಆ ಬಾಲಕನನ್ನೇ ಹೆಸರಿಟ್ಟು (ನಾರಾಯಣ) ಕರೆಯುತ್ತಾ ಪುತ್ರಪರನಾಗಿದ್ದಾನೆ. "ನಾರಾಯಣ ಇದನ್ನು ತಿನ್ನು, ನಾರಾಯಣ ಹಾಲನ್ನು ಕುಡಿ, ನಾರಾಯಣ ಇಲ್ಲಿ ಬಾರೋ" ಎನ್ನುತ್ತಾ ತನಗೇ ಗೊತ್ತಿಲ್ಲದಂತೆ ಆತನು ನಾರಾಯಣ ನಾಮಸ್ಮರಣೆಯಲ್ಲಿ ಮುಳುಗಿದ್ದಾನೆ.

ಕಾಲವು ಯಾರಿಗಾಗಿಯೂ ನಿಲ್ಲದು. ಅಜಾಮಿಳನಿಗೆ ಅಂತ್ಯ ಕಾಲ ಬಂದೊದಗಿದೆ. ಮೂವರು ಯಮದೂತರು ಪಾಶಹಸ್ತರಾಗಿ

ಅಜಾಮಿಳನನ್ನು ಕರೆದುಕೊಂಡು ಹೋಗಲು ಬಂದು ನಿಂತಿದ್ದಾರೆ. ಅಜಾಮಿಳನು ಮನಸಾ, ವಾಚಾ, ಕರ್ಮಣಾ ಪಾಪಗಳನ್ನು ಮಾಡಿದ್ದರಿಂದ ಮೂವರು ಯಮದೂತರು ಆತನನ್ನು ಸಮೀಪಿಸಿದ್ದಾರೆ. ಅವರನ್ನು ನೋಡಿದ ಅಜಾಮಿಳನಿಗೆ ತನ್ನ ಚಿಕ್ಕಮಗನಾದ ನಾರಾಯಣನನ್ನೇ ಕುರಿತು ಆಲೋಚನೆ ಬಂದಿದೆ. ಈ ಭಯಂಕರಾಕಾರಗಳನ್ನು ನೋಡಿ ಆ ಬಾಲಕನು ಎಲ್ಲಿ ಭಯಭೀತಗೊಳ್ಳುವನೋ ಎಂದು ದೂರದಲ್ಲಿ ಆಡಿಕೊಳ್ಳುತ್ತಿರುವ ಬಾಲಕನನ್ನು "ನಾರಾಯಣ, ನಾರಾಯಣ" ಎಂದು ಜೋರಾಗಿ ಕೂಗಿ ಕರೆದಿದ್ದಾನೆ. ನಾಲ್ಕು ಕ್ಷರಗಳ ನಾರಾಯಣ ನಾಮವು ಅಜಾಮಿಳನ ಬಾಯಿಂದ ಹೊರ ಹೊಮ್ಮುತ್ತಲೇ ನಾಲ್ಕು ಮಂದಿ ವಿಷ್ಣುದೂತರು ಆತನೆದುರು ಪ್ರತ್ಯಕ್ಷರಾಗಿದ್ದಾರೆ. ವೇಶ್ಯೆಯ ಪತಿಯಾದ ಅಜಾಮಿಳನ ಹೃದಯದಿಂದ ಆತ್ಮವನ್ನು ಯಮದೂತರು ಎಳೆಯುತ್ತಲೇ "ನಿಲ್ಲಿ ನಿಲ್ಲಿ" ಎಂಬ ಮೇಘ ಗಾಂಭೀರ್ಯ ಸ್ವರವೊಂದು ಅವರಿಗೆ ಕೇಳಿಸಿದೆ. ಅವರು ತಮ್ಮ ಕಾರ್ಯವನ್ನು ನಿಲ್ಲಿಸಿ ಮಾತನಾಡಿದ ವಿಷ್ಣುದೂತರನ್ನು ಗಮನಿಸಿ ಆಶ್ಚರ್ಯಚಕಿತರಾಗಿದ್ದಾರೆ. "ಯಮರಾಜನ ಶಾಸನ"ವನ್ನೇ ಧಿಕ್ಕರಿಸುವವರು ಇವರ್‍ಯಾರು? ನೀವ್ಯಾರ ಸೇವಕರು? ಎಲ್ಲಿಂದ ಬಂದಿರುವಿರಿ? ಈ ಅಜಾಮಿಳನ ದೇಹವನ್ನು ತಾಗಲು ಬಿಡದೇ ನಮ್ಮನ್ನೇಕೆ ತಡೆಯುತ್ತಿರುವಿರಿ? ನೀವು ದೇವತೆಗಳಾ? ಉಪದೇವತೆಗಳಾ? ಇಲ್ಲಾ ಸಿದ್ಧ ಪುರುಷರಾ?" ಎಂದು ಯಮಭಟರು ವಿಷ್ಣುದೂತರ ಮೇಲೆ ಪ್ರಶ್ನೆಗಳ ಸುರಿಮಳೆಯನ್ನೇ ಸುರಿದಿದ್ದಾರೆ.

ಯಮಭಟರ ಈ ಅಮಾಯಕ ಮಾತುಗಳಿಂದ ವಿಷ್ಣುದೂತರಿಗೆ ನಗೆ ಬಂದಿದೆ. 'ನಸುನಗೆಯಿಂದಲೇ ಅವರು ಮೇಘ ಗಾಂಭೀರ್ಯ ಸ್ವರದಿಂದ "ನೀವು ನಿಜವಾಗಿಯೂ ಯಮಧರ್ಮರಾಯರ ಭಟರೇ ಅದರಲ್ಲಿ ಧರ್ಮತತ್ತ್ವವನ್ನು, ಅಧರ್ಮಲಕ್ಷಣಗಳನ್ನು ನಮಗೆ ಸ್ವಲ್ಪ ವಿವರಿಸಿ ಹೇಳಿರಿ. ದಂಡನೆಯ ವಿಧಾನವೆಂತಹುದು? ನಿಜವಾಗಿಯೂ ದಂಡೆಗೆ ಅರ್ಹರಾರು? ಕರ್ಮಯೋಗಿಗಳೆಲ್ಲರೂ ದಂಡಾರ್ಹರೇ? ಅಥವಾ ಅವರಲ್ಲಿ ಕೆಲವರು ಮಾತ್ರ ದಂಡಾರ್ಹರೇ?" ಎಂದು ಪ್ರಶ್ನೆಗಳನ್ನೆ ಸೆದಿದ್ದಾರೆ.

ವಿಷ್ಣುಭಟರ ಪ್ರಶ್ನೆಗೆ ವಿಸ್ಮಿತರಾದ ಯಮದೂತರ ಸ್ವಲ್ಪ ಸಾವರಿಸಿಕೊಂಡು ಹೀಗೆ ನುಡಿದಿದ್ದಾರೆ. "ವೇದ ನಿರ್ದೇಶಿತವಾದುದೇ ಧರ್ಮವು. ಅದಕ್ಕೆ ವಿಪರೀತವಾದುದೆಲ್ಲವೂ ಅಧರ್ಮವು.ವೇದವೇದಗಳೆಲ್ಲವೂ ಸಾಕ್ಷಾತ್ ನಾರಾಯಣನೇ. ಅವು ಸ್ವಯಂಭೂತವಾಗಿ ಉದ್ಭವಿಸಿವೆ.ಈ ವಿಷಯಗಳನ್ನು ನಾವು ನಮ್ಮ ಸ್ವಾಮಿಯಾದ ಯಮಧರ್ಮನಿಂದ ತಿಳಿದುಕೊಂಡಿದ್ದೇವೆ. ನಾರಾಯಣನೇ ಸಮಸ್ತ ಜಗಕ್ಕೆ ಕಾರಣನು. ಸೂರ್ಯನು, ಚಂದ್ರನು, ಆಕಾಶ, ವಾಯು, ದೇವತೆಯರು, ಸಂಧ್ಯಾಕಾಲ,ಹಗಲು-ರಾತ್ರಿ, ದಿಕ್ಕುಗಳು, ಜಲವು, ಪೃಥ್ವಿ ಸ್ವಯಂ ಪರಮಾತ್ಮನೇ-ಆತನೇ ಸಕಲ ಜೀವಿಗಳ ಕರ್ಮಗಳಿಗೆ ಸಾಕ್ಷಿ.ಈ ಸಾಕ್ಷಿಯೆದುರು ಧರ್ಮವಿರುದ್ಧ ಪಾಲನೆಗೆ ನಿಂತಾಗ ಜೀವನು ದಂಡಾರ್ಹನಾಗುತ್ತಾನೆ. ಸರ್ವಶಕ್ತನಾದ ಯಮಧರ್ಮನು ಬ್ರಹ್ಮ ಸಮಾನನು. ಆತನು ಊರಿನಲ್ಲಿ ನಿಂತು ಕೊಂಡೇ ಪ್ರತಿಯೊಬ್ಬ ಜೀವಿಯ ಕರ್ಮವನ್ನು ಗಮನಿಸುತ್ತಿರುತ್ತಾನೆ." ಈ ತಮಗೆ ತಿಳಿದ ಧರ್ಮವನ್ನು ತಿಳಿಸಿಕೊಟ್ಟ ಯಮಭಟರು ಅಜಾಮಿಳನು ತಾನು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡಿಲ್ಲವೆಂದೂ, ಆದ್ದರಿಂದ ಆತನನ್ನು ದಂಡಾರ್ಹವಾಗಿ ಯಮಪುರಿಗೆ ಕರೆದುಕೊಂಡು ಹೋಗುತ್ತಿರುವುದಾಗಿಯೂ ಹೇಳಿದ್ದಾರೆ. ಆ ದಂಡನೆಯ ಮುಖಾಂತರ ಆತನು ಪಾಪರಹಿತನಾಗುತ್ತಾನೆಂದು ಅವರು ವಿವರಣೆ ನೀಡಿದ್ದಾರೆ.

ಯಮದೂತರ ಮಾತುಗಳನ್ನಾಲಿಸಿದ ವಿಷ್ಣುಭಟರು ಹೀಗೆ ನುಡಿದಿದ್ದಾರೆ: "ಯಮದೂತರೇ! ಈ ಅಜಾಮಿಳನು ತನ್ನ ಪಾಪಗಳಿಗೆ ಈಗಲೇ ಪ್ರಾಯಶ್ಚಿತ್ತ ಮಾಡಿಕೊಂಡಿದ್ದಾನೆ. ಅಸಹಾಯಕ ಸ್ಥಿತಿಯಲ್ಲಿ ನಾರಾಯಣ ನಾಮವನ್ನು ಉಚ್ಚರಿಸಿದರೆ ಒಂದು ಜನ್ಮದ ಪಾಪವೊಂದೇ ಅಲ್ಲದೇ ಕೋಟಿ ಜನ್ಮಗಳ ಪಾಪಗಳು ಕೂಡಾ ಪ್ರಾಯಶ್ಚಿತ್ತಗೊಳ್ಳುತ್ತವೆ. ಅಭಾಸಾಂಗನಾದರೂ ಈತನೂ ಅಪರಾಧ ರಹಿತನಾಗಿ ನಾಮೋಚ್ಚರಣವನ್ನು ಮಾಡಿ ಪಾಪವಿಮುಕ್ತನಾಗಿದ್ದಾನೆ. "ವತ್ಸಾ! ನಾರಾಯಣಾ! ಇಲ್ಲಿ ಬಾರಯ್ಯ!" ಎಂದು ಅಜಾಮಿಳನು ಪದೇ ಪದೇ ನಾರಾಯಣ ನಾಮವನ್ನು ಉಚ್ಚರಿಸುತ್ತಿದ್ದನು. ನಾಲ್ಕಕ್ಷರಗಳ ನಾರಾಯಣ ನಾಮದಿಂದ ಆತನ ಸರ್ವ ಪಾಪಗಳು ನಶಿಸಿ ಹೋಗಿವೆ. ವಿಷ್ಣುನಾಮೋಚ್ಚರಣವೇ ಪರಮ ಶ್ರೇಷ್ಠವಾದ ಪ್ರಾಯಶ್ಚಿತ್ತ.


ಭಗವನ್ನಾಮವನ್ನು ಪರೋಕ್ಷವಾಗಿ ಆಗಲೀ, ಪರಿಹಾಸಕ್ಕಾಗಲೀ, ಸಂಗೀತ ಪ್ರಯೋಜನಕ್ಕಾಗಲೀ, ಕಡೆವರೆಗೆ ಶ್ರದ್ಧಾರಹಿತವಾಗಿ ಆಗಲೀ ಮಾಡಿದರೆ ಅದು ಅನಂತವಾದ ಪಾಪರಾಶಿಯನ್ನು ತೊಲಗಿಸುತ್ತದೆ. ಕಾಲು ಜಾರಿದರೆ, ಮನೆ ಮಾಳಿಗೆಯಿಂದ ಕೆಳಕ್ಕೆ ಬಿದ್ದರೆ, ಹಾವುಕಡಿದಾಗ, ಜ್ವರಪೀಡಿತನಾಗಿದ್ದರೆ. ಆಯುಧಗಳಿಂದ ಗಾಯಗೊಂಡಿದ್ದರೆ, ಮನುಷ್ಯನು ಹರಿನಾಮವನ್ನು ಉಚ್ಚರಿಸಿ ನರಕಯಾತನೆ ಯಿಂದ ಹೊರಬರಬಹುದು. ತೆಂಗಿನ ಪೀಚನ್ನು ಸುಟ್ಟು ಭಸ್ಮ ಮಾಡುವಂತೆ ತಿಳಿದು ಮಾಡಿದ, ತಿಳಿಯದೇ ಮಾಡಿದ ಹರಿ ನಾಮ ಸಂಕೀರ್ತನೆಯು ಮನುಷ್ಯನ ಸಮಸ್ತ ಪಾಪಗಳನ್ನು ಭಸ್ಮ ಮಾಡಬಲ್ಲದು. ಔಷಧದ ಪರಿಣಾಮ ತಿಳಿದು ಸೇವಿಸಿದರೂ ತಿಳಿಯದೇ ಸೇವಿಸಿದರೂ ಅದು ರೋಗವನ್ನು ಹೋಗಲಾಡಿಸುತ್ತದಲ್ಲವೇ?

ಈ ವಿಧವಾಗಿ ವಿಷ್ಣುದೂತರು ತರ್ಕದಿಂದ ಭಾಗವತ ಧರ್ಮವನ್ನು ನಿರೂಪಣೆ ಮಾಡಿ, ಅಜಾಮಿಳನನ್ನು ಯಮದೂತರ ಪಾಶದಿಂದ ಕಾಪಾಡಿದ್ದಾರೆ.ಯಮಭಟರು ತಿರುಗಿ ಹೋಗುತ್ತಲೇ ಆತನ ಹೃದಯದಲ್ಲಿ ಭಯವು ಸರಿ ಪೂರ್ತಿ ನಿವಾರಣೆಗೊಂಡಿದೆ. ಚೇತನವು ಮರಳಿ ಬಂದು, ಆತನು ಶಿರಬಾಗಿ ವಿಷ್ಣುದೂತರಿಗೆ ನಮಸ್ಕರಿಸಿದ್ದಾನೆ. ಯಮದೂತರ ಯಾತನೆಯಿಂದ ಕರುಣಾತ್ಮರಾಗಿ ತನ್ನನ್ನು ಕಾಪಾಡಿದ ವಿಷ್ಣುದೂತರ ಸನ್ನಿಧಿಯಲ್ಲಿ ಆತನಿಗೆ ಪರಮಾನಂದವುಂಟಾಗಿದೆ.

ಹೊಸ ಶೀರ್ಷಿಕೆ

ಮುಂದಿನ ಸಂಚಿಕೆ ಇಂದ

# ಸಂಸ್ಕೃತ ಕಲಿಯೋಣ...!!



- ನಿರ್ವಹಣೆ - ಡಾ॥ ಸಮುದ್ರಾಲ ಲಕ್ಷ್ಮಣಯ್ಯ & ಕಿರಣ್‌ಭಟ್

## ಹದಿನಾಲ್ಕು ಮಾಹೇಶ್ವರ ಸೂತ್ರಗಳು

ಮನುಷ್ಯರಲ್ಲಿ ಪರಸ್ಪರ ಅಭಿಪ್ರಾಯ-ಅನಿಸಿಕೆಗಳನ್ನು ಪ್ರಕಟಿಸಲು ಶಬ್ದರೂಪವಾದ ಭಾಷೆ ಮುಖ್ಯವಾದ ಸಾಧನೆ. ಅಕ್ಷರಗಳು, ಪದಗಳು, ವಾಕ್ಯಗಳು ಇರುವ ಭಾಷೆಯಲ್ಲಿ ವ್ಯವಹರಿಸುತ್ತಾ ನಾವು ನಮ್ಮ ನಿತ್ಯ ವ್ಯವಹಾರಗಳನ್ನು ನಿರ್ವಹಿಸುತ್ತಾ ನಾವು ನಮ್ಮ ನಿತ್ಯವ್ಯವಹಾರಗಳನ್ನು ನಿರ್ವಹಿಸಿಕೊಳ್ಳುತ್ತಿರುತ್ತೇವೆ. ಅಕ್ಷರಗಳ ಜೋಡಣೆಯಿಂದ ಪದಗಳು, ಅವುಗಳ ಜೋಡಣೆಯಿಂದ ವಾಕ್ಯಗಳು ನಿರ್ಮಾಣಗೊಳ್ಳುತ್ತವೆ.

ಇವುಗಳೆಲ್ಲೆಲ್ಲಾ ಭಾಷೆಗೆ ಮುಖ್ಯವಾದ ಮೂಲವೆಂದರೆ ಅದು ಅಕ್ಷರಗಳೇ! ಅವುಗಳನ್ನು ಅಚ್ಚು-ಬಿಂಬಗಳೆಂದು ಎರಡು ವಿಭಾಗಗಳನ್ನಾಗಿ ಮಾಡಿದ್ದಾರೆ. ಅಕ್ಷರಗಳ ಉತ್ಪತ್ತಿಗೆ, ಅವುಗಳ ಸಂಖ್ಯೆಗೂ ಅವುಗಳ ಸ್ವರೂಪವನ್ನು ನಿರೂಪಿಸಿದವರಲ್ಲಿ ಅಗ್ರಗಣ್ಯ 'ಪಾಣಿನಿ' .

ಕ್ರಿಸ್ತ ಪೂರ್ವ ಐದನೇ ಶತಮಾನಕ್ಕೆ ಸೇರಿದ ಪಾಣಿನಿ ಸಂಸ್ಕೃತ ಭಾಷೆಗೆ ರೂಪಿಸಿದ ವ್ಯಾಕರಣವು ಲೋಕೋತ್ತರವಾದುದೆಂದು ಪ್ರಪಂಚದ ಭಾಷಾಶಾಸ್ತ್ರಜ್ಞರೆಲ್ಲರೂ ಮುಕ್ತಕಂಠರಾಗಿ ಹೊಗಳಿದ್ದಾರೆ. ಈ ಅಕ್ಷರಗಳಿಗೆ ಮೂಲ ಮಾಹೇಶ್ವರ ಸೂತ್ರಗಳು. ಈ ಸೂತ್ರಗಳಿಗೆ ಸಂಬಂಧಿಸಿದ ಕೆಳಗಿನ ವೃತ್ತಾಂತವು ಗಮನಿಸಬೇಕಾದುದು.

ನೃತ್ತಾವಸಾನೇ ನಟರಾಜರಾಜೋ ನನಾದ ಢಕ್ಕಾಂ ನವಪಂಚವಾರಂ।
ಉದ್ಧರ್ತುಕಾಮಃ ಸನಕಾದಿಸಿದ್ಧಾನ್ ಏತದ್ವಿಮರ್ಶೇ ಶಿವಸೂತ್ರಜಾಲಂ॥

ಸನಕಾದಿ ಮಹರ್ಷಿಗಳು ಮಹೇಶ್ವರನ ಸನ್ನಿಧಿಗೆ ತೆರಳಿ ನಮಸ್ಕರಿಸಿ, 'ಸ್ವಾಮಿ। ಭಾಷಾಸಾರವಾದ ತತ್ತ್ವವನ್ನು ನಮಗೆ ತಿಳಿಪಡಿಸಿ' ಎಂದು ಸವಿನಯವಾಗಿ ಪ್ರಾರ್ಥಿಸಿದ್ದಾರೆ. ಅದಕ್ಕೆ ಪ್ರತ್ಯುತ್ತರವಾಗಿ ಶಿವನು ತನ್ನ ಕೈಯಲ್ಲಿದ್ದ ಡಮರುಗವನ್ನು ತನ್ನ ನೃತ್ಯ ಪೂರ್ತಿಯಾದ ನಂತರ ಹದಿನಾಲ್ಕು ಬಾರಿ ಬಾರಿಸಿದ್ದಾನೆ. ಆ ಮಾತ್ರಗಳೇ ಹದಿನಾಲ್ಕು ಸೂತ್ರಗಳಾಗಿ ರೂಪುಗೊಂಡಿದೆ. ಮಹೇಶ್ವರನಿಂದ ಹೊರಹೊಮ್ಮಿದ ಸೂತ್ರಗಳಾದುದರಿಂದ "ಮಾಹೇಶ್ವರ ಸೂತ್ರ" ಗಳೆಂದು ವ್ಯವಹರಿಸಲ್ಪಟ್ಟಿದೆ.

ಪಾಣಿನಿ ಎಂಟು ಅಧ್ಯಾಯಗಳಲ್ಲಿ ರಚಿಸಿರುವ ವ್ಯಾಕರಣ ಶಾಸ್ತ್ರಕ್ಕೆ ಮೂಲ ಈ ಮಾಹೇಶ್ವರ ಸೂತ್ರಗಳೇ. ಆ ಸೂತ್ರಗಳಾವೆಂದರೆ

1) ಅಇಉಣ್ 2) ಋಌಕ್ 3) ಏಓಙ್ 4) ಐಔಚ್ 5) ಹಯವರಟ್ 6) ಲಣ್ 7) ಞ ಮ ಙ ಣನಮ್ 8) ಝಭಞ್ 9)ಘಢಧಷ್ 10) ಜಬಗಡದಶ್ 11) ಖಫಛಠಥಚಟತವ್ 12) ಕಪಯ್ 13 ಶಷಸರ್ 14) ಹಲ್

ಇದರಲ್ಲಿ ಮೊದಲ ನಾಲ್ಕು ಸೂತ್ರಗಳು ಅಚ್ಚುಗಳೆಂದೂ ನಂತರದ ಹತ್ತು ಸೂತ್ರಗಳು 'ಬಿಂಬಗಳೆಂದೂ ಹೆಸರಿಸಲ್ಪಟ್ಟಿವೆ. ಅಚ್ಚುಗಳನ್ನು ಸ್ವರಗಳೆಂದೂ, ಬಿಂಬಗಳನ್ನು ವ್ಯಂಜನಗಳೆಂದೂ ಸಹ ಕರೆಯುತ್ತಾರೆ. "ಸ್ವೇನ ರಾಜತೇ ಇತಿ ಸ್ವರಃ"- ಸ್ವಯಂ ಪ್ರಕಾಶಗೊಳ್ಳಬಲ್ಲಿದ್ದೇ ಸ್ವರ. ಇತರ ಅಕ್ಷರಗಳ ಸಹಾಯವಿಲ್ಲದೇ ಉಚ್ಚರಿಸಲ್ಪಡುವುದೇ ಸ್ವರ ಎಂದರ್ಥ 'ಸ್ವರೇಣ ವ್ಯಜ್ಯತೇ ಇತಿ ವ್ಯಂಜನಂ' - ಸ್ವರಗಳ ಸಹಾಯ ದಿಂದ ಉಚ್ಚರಿಸಲ್ಪಡುವುದೇ ವ್ಯಂಜನ.

ಇಂಗ್ಲೀಷ್‌ನಲ್ಲಿ ಸ್ವರ ಮತ್ತು ವ್ಯಂಜನಗಳು ಕಲಿಬೆರೆಕೆಯಾಗಿ ಅಸಂಬದ್ಧವಾಗಿರುತ್ತವೆ. ಸಂಸ್ಕೃತದಲ್ಲಿ ಪ್ರತ್ಯೇಕವಾಗಿ ಅಚ್ಚುಗಳು, ಬಿಂಬಗಳೆಂದು ಬೇರೆ ಬೇರೆಯಾಗಿ ಕ್ರಮಬದ್ಧವಾಗಿ ಜೋಡಣೆಯಾಗಿದೆಯೆಂಬುದನ್ನು ಗಮನಿಸಬೇಕು.

ಅಕ್ಷರಗಳಿಗೆ ಅಚ್ಚು-ಬಿಂಬಗಳೆಂಬ ಹೆಸರುಗಳು ಬರಲು ಸಹಾ ಮಹೇಶ್ವರ ಸೂತ್ರಗಳೇ ಕಾರಣ. ನಾವೀಗ 'ಪ್ರೈಮ್ ಮಿನಿಸ್ಟರ್' ಎನ್ನಲು 'ಪಿ.ಎಂ' ಎಂದೂ, 'ಚೀಫ್ ಮಿನಿಸ್ಟರ್' ಎನ್ನಲು 'ಸಿ.ಎಂ' ಎಂದು ಸಂಕ್ಷಿಪ್ತವಾಗಿ ವ್ಯವಹರಿಸುತ್ತೇವೆ. ಈ ಪದ್ಧತಿಯ ಮೂಲವೂ ಸಹಾ ಮಾಹೇಶ್ವರ ಸೂತ್ರಗಳೇ!

ಹದಿನಾಲ್ಕು ಸೂತ್ರಗಳಲ್ಲಿ ಮೊದಲನೇಯ ಸೂತ್ರದ ಮೊದಲ ಅಕ್ಷರ 'ಅ' ಎಂಬ ಅಕ್ಷರವನ್ನು ನಾಲ್ಕನೇಯ ಸೂತ್ರದ ಕಡೆಯ ಅಕ್ಷರ 'ಚ್' ಎಂಬ ಚಕಾರವು ಕಲೆತು ಆ ಮಧ್ಯದಲ್ಲಿರುವ ಎಲ್ಲಾ ಅಕ್ಷರಗಳು 'ಅಚ್' ಎಂಬ ಅಕ್ಷರಗಳೆಂದು ಪರಿಗಣಿಸಲಾಗಿದೆ. ಹಾಗೆಯೇ ಐದನೇ ಸೂತ್ರದ ಮೊದಲ ಅಕ್ಷರವಾದ 'ಹ' ವರ್ಣವು 14 ನೇ ಸೂತ್ರದ ಕೊನೆಯ 'ಲ್' ಕಾರವನ್ನು ಕಲೆಸಿ 'ಹಲ'ಗಳು (ಬಿಂಬ) ಗಳೆಂದು ಕರೆಯಲ್ಪಡುತ್ತವೆ.ಈ ರೀತಿಯಾಗಿ ಸಂಕ್ಷಿಪ್ತವಾಗಿ ಹೇಳುವ ಪ್ರಕ್ರಿಯೆಗೆ ಮಾಹೇಶ್ವರ ಸೂತ್ರಗಳೇ ಶ್ರೀಕಾರ ಹಾಕಿವೆಯೆಂದು ಹೇಳಬಹುದು.

ಮೇಲಿನ ವಿವರಣೆಯ ಪ್ರಕಾರ ಅಕ್ಷರ ಸಂಖ್ಯೆ, ಅಕ್ಷರ ಕ್ರಮ, ಅಚ್ಚು, ಹಲಗಳೆಂಬ ಹೆಸರುಗಳು ಹೀಗೆ ರೂಪಗೊಂಡವೆಂದು ತಿಳಿದು ಕೊಳ್ಳಬಹುದು.

ವಿಶ್ವ ಭಾಷೆಗಳಲ್ಲಿ ಶ್ರೇಷ್ಠ ಭಾಷೆಯಾಗಿ ಎಲ್ಲರೂ ಅಂಗೀಕರಿಸಿರುವ ಭಾಷೆ ಸಂಸ್ಕೃತ. ಸಂಸ್ಕೃತ ಭಾಷೆಯಿಂದ ಅದೆಷ್ಟೋ ಭಾಷೆಗಳು ಮೈತಳಿದಿವೆ.ಸಂಸ್ಕೃತವು ಪ್ರಾಚೀನ ಭಾಷೆಯೊಂದೇ ಅಲ್ಲ ಸಮೃದ್ಧ ಭಾಷೆಯೂ ಸಹಾ ಹೌದು. ಜಗತ್ತಿನ ಇತರ ಭಾಷೆಗಳಲ್ಲಿ ಸರಿಸಾಟಿಯಿಲ್ಲದೆ, ಪೋಟಿಯಿಲ್ಲದ ಭಾಷೆ ಸಂಸ್ಕೃತ. 'ಸಂಸ್ಕೃತ' ಎಂದರೆ 'ಸಂಸ್ಕರಿಸಲ್ಪಟ್ಟರುವುದು' ಎಂದು ಅರ್ಥ. ಅತ್ಯಂತ ವೈಜ್ಞಾನಿಕ ಭಾಷೆಯಾಗಿ ನಮ್ಮನ್ನೆಲ್ಲಾ ಆವರಿಸಿರುವ ಭಾಷೆಯಿದು. ಎಷ್ಟೋ ಘನತೆಯನ್ನೊಳಗೊಂಡಿರುವ ಈ ಭಾಷೆ ಸ್ವಲ್ಪ ಕಾಲ ನಿರ್ಲಕ್ಷ್ಯಕ್ಕೊಳಗಾಗಿ ಈಗ ಮತ್ತೆ ಜಗತ್ತಿನಾದ್ಯಂತ ಬಹು ಆದರವನ್ನು ಪಡೆಯುತ್ತಿದೆ. ಈ ಕಂಪ್ಯೂಟರ್ ಯುಗದಲ್ಲಿ ಸಂಸ್ಕೃತವೊಂದೇ ಸರಳವಾದ ಭಾಷೆಯೆಂದು ಶಾಸ್ತ್ರವೇತ್ತರ ಪ್ರಪಂಚದ ಎಲ್ಲಾ ಭಾಷೆಗಳನ್ನು ಪರಿಶೀಲಿಸಿ ನಿರ್ಣಯಿಸಿದ್ದಾರೆ. ಈ ಭಾಷೆ ಭಾರತೀಯರ ಆಸ್ತಿ. ಈ ನಿಧಿಯನ್ನು ಸಂರಕ್ಷಿಸಿ ಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ನಮ್ಮ ಕನ್ನಡ ಭಾಷೆಯ ಅನೇಕ ಪದಗಳು ಸಂಸ್ಕೃತದಲ್ಲಿವೆ. ನಮ್ಮ ಭಾಷೆಯನ್ನು ಸಮೃದ್ಧಗೊಳಿಸಲು ಸಂಸ್ಕೃತವು ಬಹಳವೇ ಸಹಕರಿಸಿದೆ. ನಾವು ಓದುವ ಸ್ತೋತ್ರಗಳು. ಮಂತ್ರಗಳು ಸಂಸ್ಕೃತದಲ್ಲಿಯವು. ನಮ್ಮ ಕನ್ನಡ ಭಾಷೆಯ ಅನೇಕ ಪದಗಳು ಸಂಸ್ಕೃತದಲ್ಲಿವೆ. ಅವುಗಳನ್ನು ಸರಿಯಾದ ಕ್ರಮದಲ್ಲಿ ಉಚ್ಚರಿಸಲು ಸ್ವಲ್ಪವಾದರೂ ಸಂಸ್ಕೃತ ಜ್ಞಾನ ಅಗತ್ಯ.

ಸಂಸ್ಕೃತವನ್ನು ಕಲಿತುಕೊಳ್ಳಬೇಕೆಂಬ ಛಲವಿರುವವರು ಸಮಾಜದಲ್ಲಿ ಎಷ್ಟೋ ಜನರಿದ್ದಾರೆ. ತಿರುಮಲೆ ತಿರುಪತಿ ದೇವಸ್ಥಾನವು ಈ ಭಾಷೆಯ ಅಭಿವೃದ್ಧಿಗೆ ಎಷ್ಟೋ ಯತ್ನಿಸುತ್ತಿದೆ. ಈ ನಿಟ್ಟಿನಲ್ಲಿ 'ಶ್ರೀ ವೇಂಕಟೇಶ್ವರ ಭಕ್ತಿ ' ಛಾನಲ್‌ನಲ್ಲಿ 'ಸಂಸ್ಕೃತ ಕಲಿಯೋಣ' ಎಂಬ ಕಾರ್ಯಕ್ರಮವು ಪ್ರಸಾರಗೊಂಡು ಜನಾದರಕ್ಕೆ ಪಾತ್ರವಾಗಿದೆ.

ಆ ಪಾಠಗಳನ್ನು 'ಸಪ್ತಗಿರಿ' ಪತ್ರಿಕೆಯಲ್ಲಿ ಮುದ್ರಿಸಬೇಕು ಎಂದು ಹಲವರ ವಿನಂತಿಯೊಂದಿಗೆ ನಮ್ಮ ಪತ್ರಿಕೆಯಲ್ಲೂ ಸಹಾ ಈ ಪ್ರಯತ್ನವನ್ನು ಆರಂಭಿಸುತ್ತಿದ್ದೇವೆ. ಸಂಭಾಷಣೆಯ ಅಭ್ಯಾಸವೊಂದೇ ಅಲ್ಲದೇ "ವರ್ಣಮಾಲೆ" ಯನ್ನು ಕೂಡಾ ಕಲಿಸಿದರೆ ಒಳಿತಾಗುತ್ತದೆಂಬ ಆಲೋಚನೆಯೊಂದಿಗೆ ಅಕ್ಷರಗಳನ್ನು ಸಹಾ ಕಲಿಸುವ ಪ್ರಯತ್ನ ಮಾಡುತ್ತಿದ್ದೇವೆ.

ಅಕ್ಷರಗಳಿಂದ ಸಂಭಾಷಣೆಯವರೆಗೆ ಈ ಭಾಷೆಯನ್ನು ಒಂದು ಪಾಠ್ಯಕ್ರಮದಲ್ಲಿ ಪಾಠಗಳನ್ನು ಒದಗಿಸಬೇಕೆಂಬ ಪ್ರಯತ್ನದ ಅಂಗವಾಗಿ ಮೊದಲ ಅಕ್ಷರಗಳನ್ನು (ವರ್ಣಮಾಲೆಯನ್ನು) ಪ್ರಾರಂಭಿಸಲಾಗುತ್ತದೆ. ಸಂಸ್ಕೃತವನ್ನು ದೇವನಾಗರಿ ಲಿಪಿಯಲ್ಲಿ ಬರೆಯುವುದು ವಾಡಿಕೆ. ಹಿಂದಿ ಮೊದಲಾದ ಎಷ್ಟೋ ಭಾರತೀಯ ಭಾಷೆಗಳು ಈ ಲಿಪಿಯನ್ನೇ ಅನುಸರಿಸುತ್ತವೆ.

ಒಂದು ಉತ್ತಮ ಕ್ರಮದಲ್ಲಿ ಪ್ರತಿತಿಂಗಳು ಮುದ್ರಿಸಲಾಗುವ ಈ ಪಾಠಗಳನ್ನು ಓದಿಕೊಂಡು, ಸಂಸ್ಕೃತ ಭಾಷೆಯನ್ನು ಕಲಿತುಕೊಂಡು ನಮ್ಮ ಈ ಪ್ರಯತ್ನವನ್ನು ಪ್ರೋತ್ಸಾಹಿಸುತ್ತೀರೆಂದು ಭಾವಿಸುತ್ತೇವೆ.

– ಪ್ರಧಾನ ಸಂಪಾದಕರು.



# ತಿರುಪತಿಯಲ್ಲಿ ಗೀತಾಜಯಂತಿ ಉತ್ಸವಗಳು

- ಮೂಲ: ಡಾ|| ವೈಷ್ಣವಾಂಘ್ರಿ ಸೇವಕ ದಾಸ್

9821914642

- ಅನುವಾದ: ಸೂರ್ಯವಂಶಿ

ಪರಮ ಪವಿತ್ರವಾದ ಮಾರ್ಗಶಿರ ಮಾಸದಲ್ಲಿ, ಮೋಕ್ಷದ ಏಕಾದಶಿಯ ತಿರುಮಲೆ ತಿರುಪತಿ ದೇವಸ್ಥಾನದವರು, ಹಿಂದೂಧರ್ಮ ಪ್ರಚಾರ ಪರಿಷತ್ ಮತ್ತು ಇಸ್ಕಾನ್ ಸಂಯುಕ್ತವಾಗಿ ಡಿಸೆಂಬರ್ 7 ನೆಯ ತಾರೀಖಿನಂದು ಎಸ್.ವಿ.ಹೈಸ್ಕೂಲ್ ಪ್ರಾಂಗಣದಲ್ಲಿ ಅತ್ಯದ್ಭುತವಾಗಿ, ಅತ್ಯಂತ ವೈಭವದಿಂದ ಗೀತಾಜಯಂತಿ ಉತ್ಸವಗಳನ್ನು ನಡೆಸಿದರು. ಈ ಅದ್ಭುತವಾದ ಕಾರ್ಯಕ್ರಮಕ್ಕೆ ಕಳೆದ ಮೂರು ತಿಂಗಳಿಂದ ರಾತ್ರೀಹಗಲೂ ಶ್ರಮಿಸಿದ್ದರು. ಆ ಕಷ್ಟದ ಫಲವೇ ಸಾವಿರಾರು ಜನ ಬಾಲಬಾಲಿಕೆಯರು ಹೈಸ್ಕೂಲ್ ಪ್ರಾಂಗಣದಲ್ಲಿ ಗುಂಪು ಗುಂಪಾಗಿ ಬಂದು ಉತ್ಸಾಹದಿಂದ ಗೀತಾಜಯಂತಿಯ ಉತ್ಸವದಲ್ಲಿ ಪಾಲ್ಗೊಂಡರು. ಗೀತಾಜಯಂತಿ ಉತ್ಸವಗಳನ್ನು ಇಷ್ಟೊಂದು ವೈಭವದಿಂದ ತಿರುಮಲೆ ತಿರುಪತಿ ದೇವಸ್ಥಾನದವರು ನೆರವೇರಿಸಿದ್ದು ಇದೇ ಮೊದಲ ಬಾರಿ. ಇದರಲ್ಲಿ ಅತಿಶಯೋಕ್ತಿಯಿಲ್ಲ. ಇಂತಹಾ ಅದ್ಭುತವಾದ ಕೆಲಸವನ್ನು ನಿರಂತರವಾಗಿ ನಡೆಸುತ್ತಾ ಅದಕ್ಕೆ ಸರಿಯಾದ ಸೂಚನೆಗಳನ್ನು ನೀಡುತ್ತಾ ಮೊದಲಿನಿಂದ ಕೊನೆಯವರೆಗೂ ನಡೆಸಿ ವಿಜಯವಂತವಾಗಿ ಪೂರ್ತಿ ಮಾಡಿದ್ದು ಶ್ರೀ ಪಿ.ಬಸಂತ್ ಕುಮಾರ್ ಐ.ಎ.ಎಸ್. ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಗಳು. ಅವರ ನಿರ್ದೇಶನದಲ್ಲಿ ಹಿಂದೂಧರ್ಮ ಪ್ರಚಾರ ಪರಿಷತ್ ಕಾರ್ಯದರ್ಶಿಗಳಾದ ಆಚಾರ್ಯ ಕೆ.ರಾಜಗೋಪಾಲನ್ ಅವರು ಇಂತಹಾ ಅದ್ಭುತವಾದ ಕಾರ್ಯಕ್ರಮಕ್ಕೆ ಎಲ್ಲಾ ಏರ್ಪಾಟುಗಳನ್ನೂ ಮಾಡಿದರು.

ಭಗವದ್ಗೀತೆ ಜೀವನ ಗೀತೆ. ಭಗವದ್ಗೀತೆ ನಮ್ಮ ಭವಿಷ್ಯವನ್ನು ತಿದ್ದುವ ದಿವ್ಯವಾದ ಸಂದೇಶ. ಭಗವದ್ಗೀತೆ ಎಲ್ಲಾ ಮನುಕುಲಕ್ಕೂ ಮಾರ್ಗದರ್ಶನ ಮಾಡುವ ಕುಲಾತೀತ, ಮತಾತೀತ, ದೇಶಾತೀತ, ಪ್ರಾಂತ್ಯಾತೀತ ಸಂದೇಶ. ತಿರುಮಲೆ ತಿರುಪತಿ ದೇವಸ್ಥಾನ ವಿದ್ಯಾಸಂಸ್ಥೆಗಳು, ಇತರ ವಿದ್ಯಾಸಂಸ್ಥೆಯಲ್ಲಿನ 10,000 ವಿದ್ಯಾರ್ಥಿನೀ ವಿದ್ಯಾರ್ಥಿಗಳೊಂದಿಗೆ ಗೀತಾಜಯಂತಿ ಉತ್ಸವಗಳನ್ನು ನಡೆಸಬೇಕೆಂದು ತಿರುಮಲೆ ತಿರುಪತಿ ದೇವಸ್ಥಾನದವರು ಸಂಕಲ್ಪಿಸಿದರು. ಎಲ್ಲಾ ಏರ್ಪಾಟುಗಳೂ 6 ನೆಯ ತಾರೀಖಿಗೇ ಪೂರ್ತಿಯಾಗಿತ್ತು. ಆದರೂ 7 ನೆಯ ತಾರೀಖಿನ ಬೆಳಿಗ್ಗೆಯೇ ಮಳೆ ಹನಿ ಪ್ರಾರಂಭವಾಯಿತು.

ಆದರೂ ಎಲ್ಲಾ ಭಾರವನ್ನು ಶ್ರೀ ಕೃಷ್ಣಭಗವಾನನ ಮೇಲೆ ಹಾಕಿ ಅಧಿಕಾರಬೃಂದದವರು ಮುಂದಕ್ಕೆ ನಡೆದರು. "ಬಿಸಿಲನ್ನು ನೀಡುವವನು ನಾನೇ, ಮಳೆಯನ್ನು ಸುರಿಸುವವನೂ ನಾನೇ" ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿನ ಒಂಭತ್ತನೆಯ ಅಧ್ಯಾಯದಲ್ಲಿನ ಹತ್ತೊಂಬತ್ತನೆಯ ಶ್ಲೋಕದಲ್ಲಿ ಹೇಳಿದ ವಿಷಯವನ್ನು ನೆನಪಿಸಿಕೊಳ್ಳುತ್ತಾ. ಮಳೆಯನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸುತ್ತಾ ಎಲ್ಲರೂ ಕೆಲಸದಲ್ಲಿ ಮಗ್ನರಾದರು. ತುಂತುರು ಹನಿಗೆ ಲೆಕ್ಕ ಮಾಡದೇ ಮಕ್ಕಳು ಸಾಲು ಸಾಲಾಗಿ ಹೈಸ್ಕೂಲ್ ಪ್ರಾಂಗಣವನ್ನು ತಲುಪಿದರು. ಅವರೆಲ್ಲರೂ ಪರಮೋತ್ಸಾಹದಿಂದ ಗೀತಾಜಯಂತಿ ಉತ್ಸವಗಳಿಗೆ ಬರುತ್ತಿರು



ವುದು ಕಣ್ಣಿಗೆ ಹಬ್ಬವನ್ನುಂಟು ಮಾಡಿತ್ತು. ಪ್ರಾಂಗಣವನ್ನೆಲ್ಲಾ ಬಹಳ ವೈಭವದಿಂದ ಅಲಂಕರಿಸಿದ್ದರು. ವಿದ್ಯಾರ್ಥಿನೀ ವಿದ್ಯಾರ್ಥಿಗಳು ತಮ್ಮ ತಮ್ಮ ಶಾಲೆಗೆ ನೀಡಿದ್ದ ಸ್ಥಾನಗಳಲ್ಲಿ ಆಸೀನರಾದರು. ಗೀತಾ ಜಯಂತಿ ಕಾರ್ಯಕ್ರಮ ಸುಮಾರು 10.30 ಗಂಟೆಗೆ ಪ್ರಾರಂಭವಾಯಿತು. ಅಷ್ಟರಲ್ಲಿ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತರು.



ಇನ್ನು ವೇದಿಕೆಯ ಮೇಲೆ ಅದ್ಭುತವಾಗಿ ಅನ್ನಮಯ್ಯ ಕೀರ್ತನೆಗಳಿಂದ ಕಲಾವಿದರು ಎಲ್ಲರಲ್ಲೂ ಭಕ್ತಿ ಭಾವವನ್ನು ತುಂಬಿದರು. ಕಾರ್ಯಕ್ರಮವನ್ನು ಶ್ರೀ ಮಾನ್ ಆಚಾರ್ಯ ಕೆ.ರಾಜಗೋಪಾಲನ್ ಅವರು ನಿರ್ವಹಣಾಧಿಕಾರಿಯಾಗಿ ನಿಂತು ನಡೆಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ ಇಸ್ಕಾನ್ ಪ್ರತಿನಿಧಿಗಳಾದ ಡಾ॥ ವೈಷ್ಣವಾಂಘ್ರಿ ಸೇವಕದಾಸ್, ಲೀಲಾ ಪಾರಾಯಣದಾಸು ಅವರು ಮೊದಲೇ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೆ ಆಗಮಿಸಿದ್ದವರಲ್ಲಿ ಶ್ರೀಮತಿ ಸಾಯಿ ಪ್ರಸನ್ನ,ವಿಶಾಖಪಟ್ಟಂ, ಶ್ರೀವೇಂಕಟೇಶ್ವರ ವಿಶ್ವವಿದ್ಯಾಲಯದ ಕುಲಪತಿಗಳು,ತಿ.ತಿ.ದೇ.,ವಿದ್ಯಾಶಾಖಾಧಿಕಾರಿ, ಭಾರತೀಯ ವಿದ್ಯಾಭವನ್ ಪ್ರತಿನಿಧಿ,ರಾಮಕೃಷ್ಣಮಠದ ಪ್ರತಿನಿಧಿ, ವಿಕಾಸ ತರಂಗಿಣಿ ಪ್ರತಿನಿಧಿ. ಚಿನ್ಮಯ ಮಿಷನ್ ಪ್ರತಿನಿಧಿಗಳು ಇದ್ದರು. ಗೀತಾಸಂದೇಶವನ್ನು ತಿಳಿಸುವುದಕ್ಕೆ ಶ್ರೀ ಶ್ರೀ ಶ್ರೀ ವಿದ್ಯಾ ಶಂಕರ. ಭಾರತೀತೀರ್ಥಸ್ವಾಮಿಗಳು ಆಗಮಿಸಿದ್ದರು. ಮುಖ್ಯ ಅತಿಥಿ ಸಂದೇಶವನ್ನು ನೀಡುವುದಕ್ಕೆ ತಿ.ತಿ.ದೇ., ಪಾಲಕ ಮಂಡಲಿ ಅಧ್ಯಕ್ಷರು ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು ಆಗಮಿಸಿದ್ದರು. ವಿಶೇಷ ಅತಿಥಿಗಳಾಗಿ ಚಂದ್ರಗಿರಿ ಎಂ.ಎಲ್. ಎ. ಶ್ರೀ ಚೆವಿರೆಡ್ಡಿ ಭಾಸ್ಕರ್‌ರೆಡ್ಡಿಯವರು ಆಗಮಿಸಿದ್ದರು.ಶ್ರೀ ಅನಿಲ್ ಕುಮಾರ್ ಸಿಂಘಾಲ್ ಐ.ಎ.ಎಸ್. ಕಾರ್ಯನಿರ್ವಹಣಾಧಿಕಾರಿ ತಿ.ತಿ.ದೇ. ಶ್ರೀ ಎ.ವಿ.ಧರ್ಮಾರೆಡ್ಡಿಯವರು ಗೌರವ ಅತಿಥಿಗಳಾಗಿ ಆಹ್ವಾನಿಸಲ್ಪಟ್ಟಿದ್ದರು.

ಕಾರ್ಯಕ್ರಮದಲ್ಲಿ ಮೊದಲ ಭಾಗದಲ್ಲಿ ಬ್ರಹ್ಮಕುಮಾರೀ ಸಂಸ್ಥೆಯ ಪ್ರತಿನಿಧಿಗಳ ಮೂಲಕ ಓಂಕಾರ ಧ್ಯಾನ ಮಾಡಲಾಯಿತು. ನಂತರ ಶ್ರೀ ವೇಂಕಟೇಶ್ವರ ನೃತ್ಯಕಲಾಶಾಲೆಯ ಪ್ರತಿನಿಧಿಗಳ ಮೂಲಕ ಪ್ರಾರ್ಥನೆ ನಡೆಯಿತು. ಕೂಡಲೇ ವೇದಿಕೆಯನ್ನು ಅಲಂಕರಿಸಿದ ಮಹನೀಯರಿಂದ ಜ್ಯೋತಿ ಪ್ರಜ್ವಲನೆಯ ಕಾರ್ಯಕ್ರಮ ನಡೆಯಿತು. ಜ್ಯೋತಿ ಪ್ರಜ್ವಲನೆಯ ನಂತರ ಆಚಾರ್ಯ ಕೆ. ರಾಜಗೋಪಾಲನ್ ಅವರು ಸ್ವಾಗತ ಬಯಸುತ್ತಾ ಒಂದೊಂದು ಹೆಸರೂ ಹೇಳಿ ವೇದಿಕೆಯನ್ನು ಅಲಂಕರಿಸಿದವರನ್ನು ಎಲ್ಲರಿಗೂ ಪರಿಚಯಿಸಿದರು. ನಂತರ ಎಸ್. ವಿ. ಉನ್ನತ ವೇದಾಧ್ಯಯನ ಸಂಸ್ಥೆಯ ಪ್ರತ್ಯೇಕಾಧಿಕಾರಿ ಡಾ॥ ಆಕೆಳ್ಳ ವಿಭೀಷಣ ಶರ್ಮ ಅವರು ಸಾಮೂಹಿಕ ಗೀತಾ ಪಾರಾಯಣದ ವಿಶೇಷತೆಯನ್ನು ವಿವರಿಸಿದರು. ಗೀತೆಯಲ್ಲಿ ಅನೇಕ ಮುಖ್ಯಾಂಶಗಳನ್ನೂ ತಿಳಿಯಪಡಿಸಿದರು. ಆ ಸಂದೇಶ ಮುಗಿಯುತ್ತಲೇ ಗೀತಾಜಯಂತಿಯಲ್ಲಿ ಮುಖ್ಯ ಘಟ್ಟ ಪ್ರಾರಂಭವಾಯಿತು. ಅದೇ ಸಾವಿರಾರು ಜನ ವಿದ್ಯಾರ್ಥಿ ವಿದ್ಯಾರ್ಥಿಗಳೊಂದಿಗೆ ಸಾಮೂಹಿಕವಾಗಿ ಭಗವದ್ಗೀತೆಯಲ್ಲಿನ 15 ನೆಯ ಅಧ್ಯಾಯವನ್ನು ಪಾರಾಯಣ ಮಾಡಿದ್ದು. ಶ್ರೀ ವೇಂಕಟೇಶ್ವರ ವೇದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ರಾಗದೊಂದಿಗೇ



ಗೀತಾಶ್ಲೋಕಗಳನ್ನು ಓದುತ್ತಿರುವಾಗ ಸಾವಿರಾರು ಜನ ಬಾಲ ಬಾಲಿಕೆಯರು ಅದೇ ಸ್ವರದೊಂದಿಗೆ ಗೀತಾ ಪಾರಾಯಣ ಮಾಡಿದರು. ಹೆಚ್ಚೂ ಕಡಿಮೆ 10 ನಿಮಿಷಗಳಿಗಿಂತಲೂ ಹೆಚ್ಚಾಗಿ ಆ ಪ್ರಾಂಗಣವೆಲ್ಲಾ ಗೀತಾ ಶ್ಲೋಕ ಉಚ್ಚಾರಣೆಯಿಂದ ತುಂಬಿ ಹೋಯಿತು. ಎಲ್ಲರ ಹೃದಯಗಳೂ ಆನಂದ ದಿಂದ ತುಂಬಿ ಬಂತು. ಆ ರೀತಿ ಗೀತಾಪಾರಾಯಣ ಪೂರ್ತಿಯಾಗುತ್ತಲೇ ಆ ಹದಿ ನೈದನೆಯ ಅಧ್ಯಾಯದ ಸಾರಾಂಶವನ್ನು ಶ್ರೀಮತಿ ಸಾಯಿ ಪ್ರಸನ್ನ ಅವರು ಬಹಳ













ಅಚ್ಚು ಕಟ್ಟಾಗಿ ಎಲ್ಲರಿಗೂ ಅನೇಕ ಉಪಮಾನಗಳೊಂದಿಗೆ ವಿವರಿಸಿದರು. ಭಗವಂತನನ್ನು ತಿಳಿದು ಕೊಳ್ಳುವುದು ಎಲ್ಲರಿಗೂ ಸಹಜವಾಗಿಯೇ ಇರುವ ಕಲೆ ಎಂದು ಅವರು ತಿಳಿಸಿದರು.

ಗೀತಾ ಸಂದೇಶವನ್ನು ಬಾಲಬಾಲಿಕೆಯರಿಗೆ ವಿವರಿಸುವುದಕ್ಕೆ ಪ್ರತ್ಯೇಕವಾಗಿ ಆಗಮಿಸಿದ ಶ್ರೀಶ್ರೀಶ್ರೀ ವಿದ್ಯಾಶಂಕರ ಭಾರತೀ ತೀರ್ಥ ಸ್ವಾಮಿಯವರು ಹದಿನೈದನೆಯ ಅಧ್ಯಾಯದ ಸಾರಾಂಶವನ್ನು ಎಲ್ಲರಿಗೂ ಅರ್ಥವಾಗುವಂತೆ ವಿವರಿಸುವ ಪ್ರಯತ್ನ ಮಾಡಿದರು. ಪುಷ್ಪಗಿರಿ ಪೀಠಕ್ಕೆ ಅಧಿಪತಿಗಳಾದ ಅವರು ಅಲ್ಲಿಗೆ ಬಂದಿದ್ದು ಎಲ್ಲರಿಗೂ ಆನಂದವನ್ನುಂಟು ಮಾಡಿತು. ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು ತಮ್ಮ ಮುಖ್ಯ ಅತಿಥಿ ಸಂದೇಶವನ್ನು ನೀಡುತ್ತಾ ಹಿಂದೂ ಧರ್ಮ ಪ್ರಚಾರಕ್ಕೆ ತಿ.ತಿ.ದೇ ಕಂಕಣ ಬದ್ಧವಾಗಿದೆಯೆಂದು, ಹಿಂದೂ ಧರ್ಮ ಪ್ರಚಾರಕ್ಕೆ ತಾವು ಮತ್ತಷ್ಟು ಶ್ರದ್ಧೆಯಿಂದ ದುಡಿಯುತ್ತೇವೆಂದು, ಅದಕ್ಕೆ ಈ ಗೀತಾ ಜಯಂತಿ ಉತ್ಸವವೇ ನಾಂದಿಯಾಗಿದೆಯೆಂದು ತಿಳಿಸಿದರು. ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಚೆವಿರೆಡ್ಡಿ ಭಾಸ್ಕರ್ ರೆಡ್ಡಿ ಅವರು ಮಾತನಾಡುತ್ತಾ ಭಗವದ್ಗೀತೆ ಎಲ್ಲರಿಗೂ ಜೀವನದ ವಿಧಾನವನ್ನು ತಿಳಿಸಿಕೊಡುತ್ತದೆಂದು,ತಿಳಿಸಿದರು.ತಾನೂ ಹಿಂದೆ ಇದೇ ಶಾಲೆಯ ಪ್ರಾಂಗಣದಲ್ಲಿ ವಿದ್ಯಾರ್ಥಿಯಾಗಿ ಕುಳಿತಿದ್ದೇನೆಂದು ನೆನಪಿಸಿಕೊಂಡರು. ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀಮಾನ್ ಬಸಂತ್ ಕುಮಾರ್ ಅವರು ಗೀತಾಜಯಂತಿ ಉತ್ಸವಗಳು ವೈಭವದಿಂದ ನಡೆದಿರುವುದು ತಮಗೆ ಬಹಳ ಸಂತೋಷ ತಂದಿದೆಯೆಂದು ತಿಳಿಸಿದರು. ನಂತರ ಇಸ್ಕಾನ್ ಪ್ರತಿನಿಧಿಗಳಾದ ಡಾ॥ ವೈಷ್ಣವಾಂಘ್ರಿ ಸೇವಕದಾಸ್ ಅವರು ಮಾತನಾಡುತ್ತಾ ಜೀವನದಲ್ಲಿ ವಿಜಯವನ್ನು ಸಾಧಿಸುವುದಕ್ಕೆ ಭಗವದ್ಗೀತೆಯೇ ಮಾರ್ಗವೆಂದು ಅದರ ಮೂಲಕ ಎಲ್ಲರಿಗೂ ಸಂಪತ್ತು. ವಿಜಯ, ಅಸಾಧಾರಣ ಶಕ್ತಿ ನೀತಿ ಉಂಟಾಗುತ್ತದೆಂದು ವಿಜಯ ಬೇಡವೆನ್ನುವವರಿಗೂ ವಿಜಯವನ್ನು ದೊರಕಿಸಿಕೊಡುತ್ತದೆಂದು ತಿಳಿಸಿದರು. ಅವರು ನೀಡಿದ ಸ್ಫೂರ್ತಿದಾಯಕವಾದ ಉಪನ್ಯಾಸಕ್ಕೆ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬಹಳ ಪ್ರೇರಣೆಯನ್ನು ಪಡೆದು ಆ ಮಾತುಗಳಿಗೆ ಉತ್ತಮ ರೀತಿಯಲ್ಲಿ ಸ್ಪಂದಿಸಿದರು. ಇಸ್ಕಾನ್ ಸಂಸ್ಥೆಯವರ ಪರವಾಗಿ ಹತ್ತುಸಾವಿರ ಜನರಿಗೆ ಗೀತಾಜಯಂತಿ ಕಾರ್ಡನ್ನು ಹಂಚಿದ್ದು ವಿಶೇಷ. ಅದರಲ್ಲಿ ಗೀತಾವಿಜಯ ಸಂದೇಶವನ್ನು ಲ್ಯಾಮಿನೇಟ್ ಮಾಡಿ ನೀಡಲಾಗಿತ್ತು. ವಿದ್ಯಾರ್ಥಿಗಳೆಲ್ಲರೂ ಆ ಗೀತಾ ಜಯಂತಿ ಕಾರ್ಡನ್ನು ತಾವು ಓದುವ ಪ್ರದೇಶದಲ್ಲಿ ಗೋಡೆಯ ಮೇಲೆ ಅಂಟಿಸಿ. ಅದರಲ್ಲಿ ತಿಳಿಸಲಾಗಿರುವ ಶ್ಲೋಕವನ್ನು ಪ್ರತೀ ದಿನ ಮೂರೂ ಹೊತ್ತು ಉಚ್ಚರಿಸಬೇಕೆಂದು ಡಾ॥ ವೈಷ್ಣವಾಂಘ್ರಿ ಸೇವಕ ದಾಸ್ ಅವರು ತಮ್ಮ ಸಂದೇಶದ ಮೂಲಕ ತಿಳಿಸಿದರು. ಮಕ್ಕಳು ತಮಗೆ ನೀಡಲಾಗಿರುವ ಗೀತಾಜಯಂತಿ ಕಾರ್ಡನ್ನು ತೋರಿಸುತ್ತಾ ಫೋಟೋ ತೆಗೆಸಿಕೊಂಡು ಉತ್ಸಾಹವನ್ನು ಪ್ರದರ್ಶಿಸಿದರು. ರಾಮಕೃಷ್ಣ ಮಠದ ಪ್ರತಿನಿಧಿಗಳಾದ ಶ್ರೀ ಅನುಪಮಾನಂದ ಸ್ವಾಮಿ ಮಾತನಾಡುತ್ತಾ ಗೀತೆಯಲ್ಲಿ ತಿಳಿಸಿದ ರೀತಿಯಲ್ಲಿ ಎಲ್ಲರೂ ಧೈರ್ಯದಿಂದ ನಿಂತು ಎಲ್ಲವನ್ನೂ ಸಾಧಿಸಬೇಕೆಂದು ಪ್ರಬೋಧಿಸಿದರು. ಭಾರತೀಯ ವಿದ್ಯಾಭವನ್ ಪ್ರತಿನಿಧಿಗಳಾದ ಶ್ರೀ ಸತ್ಯನಾರಾಯಣ ರಾಜು ಅವರು, ವಿಕಾಸ ತರಂಗಿಣಿ ಪ್ರತಿನಿಧಿ ಡಾ॥ ನಾಗೇಂದ್ರಶಾಯಿಯವರು ತಮ್ಮ ಗೀತಾ ಸಂದೇಶವನ್ನು ನೀಡಿದರು. ಕೊನೆಯಲ್ಲಿ ಅದಿತ್ಯ ರಾಮ್ ಅವರು



ಸ್ವತಹಾ ರಚಿಸಿ, ಸ್ವರವನ್ನು ಹಾಕಿ, ಹಾಡಿದ ಗೀತಾ ಸಂದೇಶ ಹಾಡನ್ನು ರಿಕಾರ್ಡಿನಲ್ಲಿ ಕೇಳಿಸುವುದರ ಮೂಲಕ ಗೀತಾ ಜಯಂತಿ ಕಾರ್ಯಕ್ರಮ ಮುಕ್ತಾಯವಾಯಿತು.

ವೇದಿಕೆಯನ್ನು ಅಲಂಕರಿಸಿದ ಮಹನೀಯರು ತಮ್ಮ ತಮ್ಮ ಅಮೂಲ್ಯವಾದ ಸಂದೇಶವನ್ನು ತಿಳಿಸುತ್ತಲೇ ಶ್ರೀ ಬಸಂತ್ ಕುಮಾರ್ ಅವರು ಸ್ವತಹಾ ಅವರನ್ನುಶ್ರೀನಿವಾಸನ ಪ್ರಸಾದವಾಗಿ ತಂದ ಶಾಲನ್ನು ಹೊದಿಸಿ, ಲಡ್ಡು, ವಡೆ ಪ್ರಸಾದ ಗಳನ್ನು ನೀಡಿದರು.ಎಲ್ಲರಿಗೂ ಆ ಪ್ರಸಾದ ಬಹಳ ಆನಂದ ವನ್ನು ಉಂಟು ಮಾಡಿತು. ನಂತರ ಅವರು ಕಾರ್ಯಕ್ರಮ ವನ್ನು ಜಯಪ್ರದವಾಗಿ ನಿರ್ವಹಿಸಿದ ಆಚಾರ್ಯ ಕೆ. ರಾಜ ಗೋಪಾಲ್ ಅವರನ್ನೂ ಸತ್ಕರಿಸಿದರು. ಇಸ್ಕಾನ್ ಸಂಸ್ಥೆ ಯವರೂ ವೇದಿಕೆಯನ್ನು ಅಲಂಕರಿಸಿದ ಮಹನೀಯರಿಗೆ ಗೀತಾ ಸಂದೇಶ ಪ್ರಶ್ನಾವಳಿಗಳಿಂದ ಕೂಡಿದ ಕ್ಯಾಲೆಂಡರನ್ನು ಬಹುಕರಿಸಿದರು.

ಗೀತಾಜಯಂತಿ ಉತ್ಸವಗಳಿಗೆ ಉತ್ಸಾಹದಿಂದ ಭಾಗ ವಹಿಸಿದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ತಿರುಮಲೆ ತಿರುಪತಿ ದೇವಸ್ಥಾನದವರು ಒಂದು ಪ್ಯಾಕೆಟ್‌ನಲ್ಲಿ ಕುಡಿಯುವ ನೀರು, ಬಿಸ್ಕೆಟ್ ಪ್ಯಾಕೆಟ್, 15 ನೆಯ ಅಧ್ಯಾಯಲ್ಲಿನ ಶ್ಲೋಕಗಳನ್ನು ಮುದ್ರಿಸಿ ಕಾಗದವನ್ನು, ಇಸ್ಕಾನ್ ಸಂಸ್ಥೆಯವರು ನೀಡಿದ ಗೀತಾಜಯಂತಿ ಲ್ಯಾಮಿನೇಷನ್ ಕಾರ್ಡನ್ನು ನೀಡಿದರು.

ಮೊದಮೊದಲು ಸ್ವಲ್ಪ ಮಳೆ ಹನಿ ಆರಂಭವಾದರೂ ಗೀತಾ ಪಾರಾಯಣದ ವೇಳೆಗೆ ವಾತಾವರಣ ತಿಳಿಯಾಯಿತು. ಆಕಾಶವೆಲ್ಲಾ ಮೋಡದಿಂದ ತುಂಬಿಕೊಂಡಿದ್ದರಿಂದ ಮಕ್ಕಳಿಗೆ ಬಿಸಿಲಿನ ತಾಪವೂ ತಿಳಿಯಲಿಲ್ಲ. ಎಲ್ಲಾ ಶ್ರೀನಿವಾಸ ಪದ್ಮಾವತಿ ದೇವಿಯ ಆಶೀರ್ವಾದವೆಂದು ಭಾವಿಸುತ್ತಾ ಎಲ್ಲರೂ ಗೀತಾಜಯಂತಿ ಕಾರ್ಯಕ್ರಮವನ್ನು ಶ್ರೀ ವೇಂಕಟೇಶ್ವರ ಭಕ್ತಿ ಛಾನೆಲ್ ಅವರು ಪಠಿಸಿದ್ದು ಪ್ರಪಂಚ ವನ್ನೇ ಸಂತೋಷಕ್ಕೀಡು ಮಾಡಿತು. ಇಂತಹಾ ಅದ್ಭುತ ಕಾರ್ಯಕ್ರಮವನ್ನು ಎಂತಹಾ ಅಡೆತಡೆಗಳಿಲ್ಲದೇ ಕ್ರಮಶಿಕ್ಷಣ ದಿಂದ ನೆರವೇರಿಸಿದ ಪೋಲೀಸು ಸಿಬ್ಬಂದಿಯವರಿಗೆ, ಕ್ಯಾಡೆಟ್‌ಗಳು, ಇತರ ಸಂಸ್ಥೆಯವರಿಗೆ ಕಾರ್ಯನಿರ್ವಾಹ ಕರಿಗೆ ಕೃತಜ್ಞತೆಯನ್ನು ತಿಳಿಸಿದರು.ಬಾಲಬಾಲಿಕೆಯರು ಬಹಳ ಕ್ರಮಶಿಕ್ಷಣದಿಂದ ಬಂದು ಪ್ರಾಂಗಣವನ್ನು ಯಾವ ರೀತಿ ತುಂಬಿಕೊಂಡರೋ ಅದೇ ಕ್ರಮಶಿಕ್ಷಣದಿಂದ ತಮ್ಮ ತಮ್ಮ ಶಾಲೆಗಳಿಗೆ ತೆರಳಿದ್ದು ವಿಶೇಷ.ಆ ಸಮಯದಲ್ಲಿ ಎಲ್ಲರ ಹೃದಯದಲ್ಲಿ ಭಗವದ್ಗೀತೆಯೇ ತುಂಬಿತ್ತು. ಈ ರೀತಿ ಪ್ರತಿ ಯೊಬ್ಬರದಲ್ಲಿ ಭಗವದ್ಗೀತೆ ಸ್ಫೂರ್ತಿಯನ್ನು ತುಂಬಿದ ದಿನ ಪ್ರಪಂಚ ಸ್ವರ್ಗ ಸಮಾನವಾಗುತ್ತದೆ.ಅದಕ್ಕೇ ಡಾ॥ ವೈಷ್ಣ ವಾಂಘ್ರಿಸೇವಕ ದಾಸ್ ಅವರು ಮಕ್ಕಳಿಂದ ಮುಕ್ತಕಂಠ ದಿಂದ ತಿಳಿಹೇಳಿದ ಕೊನೆಯ ಮಾತುಗಳನ್ನು ನೀವೂ ತಿಳಿದು ಕೊಳ್ಳಿ ಭಗವದ್ಗೀತೆ ಸಹಾಯದಿಂದ ಭವಿಷ್ಯವನ್ನು ತಿದ್ದಿ ಕೊಳ್ಳಿ.

ವಿದ್ಯೆಗಳಲ್ಲೆಲ್ಲಾ ರಾಜ ಭಗವದ್ಗೀತೆ
ವಿಜಯ ಸಂಪತ್ತನ್ನು ನೀಡುವುದು ಭಗವದ್ಗೀತೆ
ವಿಧಿಯ ಬರಹವನ್ನು ಬದಲಿಸುವುದು ಭಗವದ್ಗೀತೆ
ವಿಜಯವನ್ನು ಬೇಡವೆಂದರೂ ನಮಗೆ ನೀಡುವುದು ಭಗವದ್ಗೀತೆ
ಅದಕ್ಕೇ ಭಗವದ್ಗೀತೆಯನ್ನು ಒಂದು ಕೈಯಲ್ಲಿ ಹಿಡಿದುಕೊಳ್ಳೋಣ!
ಇನ್ನೊಂದು ಕೈಯಲ್ಲಿ ವಿಜಯಪತಾಕೆಯನ್ನು ಹಾರಿಸೋಣ.!!



# ಭಕ್ತರ ಸೇವೆಯಲ್ಲಿ.......



ನವೆಂಬರ್ 23, 2019ರಂದು ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರಿಗೆ ನಡೆದ ಕಾರ್ತಿಕ ಬ್ರಹ್ಮೋತ್ಸವದಲ್ಲಿ ಶನಿವಾರ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ತಿ.ತಿ.ದೇ. ಪಾಲಕ ಮಂಡಳಿ ಅಧ್ಯಕ್ಷರು. ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು, ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್ ಕುಮಾರ್ ಸಿಂಘಾಲ್, ಐ.ಏ.ಎಸ್., ಪಾಲ್ಗೊಂಡರು.

ಡಿಸೆಂಬರ್ 01, 2019 ರಂದು ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವದ ಕೊನೆಯ ದಿನವಾದ ಪಂಚಮಿತೀರ್ಥದ ಸಂದರ್ಭದಲ್ಲಿ ಅಮ್ಮನವರಿಗೆ ರಾಜ್ಯದ ವತಿಯಿಂದ ಉಪಮುಖ್ಯಮಂತ್ರಿ ನಾರಾಯಣ ಸ್ವಾಮಿ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸಿದರು. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ ಪಾಲಕ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ.ಸುಬ್ಬಾರೆಡ್ಡಿ ದಂಪತಿಗಳು ಸಹ ಪಾಲ್ಗೊಂಡು ಶ್ರೀ ಪದ್ಮಾವತಿ ಅಮ್ಮನವರಿಗೆ ಕಂಠಾಭರಣವನ್ನು ಮತ್ತು ರೇಷ್ಮೆ ವಸ್ತ್ರಗಳನ್ನು ಸಮರ್ಪಿಸಿದರು.





ಡಿಸೆಂಬರ್ 8, 2019 ರಂದು ತಮಿಳುನಾಡು ರಾಜ್ಯದಲ್ಲಿರುವ ಪ್ರಮುಖ ವೈಷ್ಣವ ಕ್ಷೇತ್ರವಾದ ಶ್ರೀರಂಗಂನಲ್ಲಿ ಶ್ರೀರಂಗನಾಥಸ್ವಾಮಿ ಆಲಯದಲ್ಲಿ ತಿ.ತಿ.ದೇ. ಪಾಲಕಮಂಡಳಿ ಅಧ್ಯಕ್ಷರು ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು, ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಏ.ಎಸ್., ಶ್ರೀರಂಗನಾಥ ಆಲಯ ಅಧ್ಯಕ್ಷರು ಶ್ರೀ ವೇಣು ಶ್ರೀನಿವಾಸನ್, ಅರ್ಚಕರು ಸಂಪ್ರದಾಯವಾಗಿ ಸ್ವಾಗತಿಸಿದರು. ನಂತರ ಇವರು ರೇಷ್ಮೆ ವಸ್ತ್ರಗಳನ್ನು ತಲೆಮೇಲಿಟ್ಟುಕೊಂಡು ಮೆರವಣಿಗೆ ಹೊರಟು ಮತ್ತೆ ಸ್ವಾಮಿಯವರಿಗೆ ಸಮರ್ಪಿಸಿದರು. ದರ್ಶನಾನಂತರ ಆಲಯಾಧಿಕಾರಿಗಳು ಶ್ರೀ ರಂಗನಾಥ ಸ್ವಾಮಿಯವರ ತೀರ್ಥ ಪ್ರಸಾದಗಳನ್ನು ನೀಡಿದರು.




Edited and Published on behalf of T.T.Devasthanams by Dr. K. Radha Ramana, M.A., M.Phil., Phd., Chief Editor, T.T.D. and Printed at T.T.D. Press by Sri R.V. Vijaya Kumar, B.A., B.Ed., Dy. E.O. (Publications & Press), T.T.D. Press, Tirupati - 517 507.



23-11-2019 ರಿಂದ 01-12-2019 ರ ವರೆಗೆ ನಡೆದ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ವಾರ್ಷಿಕ ಬ್ರಹ್ಮೋತ್ಸವದ ದೃಶ್ಯಮಾಲಿಕೆ





ತಿ.ತಿ.ದೇ. ಫಲ, ಪುಷ್ಪ ಪ್ರದರ್ಶನ ಶಾಲೆಯನ್ನು ಪ್ರಾರಂಭಿಸುತ್ತಿರುವ ತಿ.ತಿ.ದೇ. ಪಾಲಕಮಂಡಳಿ ಅಧ್ಯಕ್ಷರು. ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು, ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್ ಕುಮಾರ್ ಸಿಂಘಾಲ್, ಐ.ಎ.ಎಸ್., ರವರು



ಅಮ್ಮನವರ ಸೇವೆಯಲ್ಲಿ......



ತಿ.ತಿ.ದೇ. ವತಿಯಿಂದ ಅಮ್ಮನವರಿಗೆ ಬಾಗಿನವನ್ನು ಸಮರ್ಪಿಸಲು ಹೊರಟಿರುವ ಬೃಂದ



ಕಲಾ ಪ್ರದರ್ಶನದ ದೃಶ್ಯಗಳು

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
printing on 25-12-2019. Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

